ಪಠ್ಯಪುಸ್ತಕ ನಿರ್ದೇಶನಾಲಯ

ಮನುಸ್ಮೃತಿ

(ಅಧ್ಯಾಯ—7)

(A Text-Book of Sanskrit for B.A. Part-1 Major)

ಡಾ. ಬಿ. ಆರ್. ಮೋಡಕ
ಪ್ರಿ. ಬಿ. ಎಚ್. ಶ್ರೀಧರ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

K.H. Sreedharan

ಪಠ್ಯಪುಸ್ತಕ ನಿರ್ದೇಶನಾಲಯ

ಮನುಸ್ಮೃತಿ

(ಅಧ್ಯಾಯ—7)

(A Text-Book of Sanskrit for B.A. Part-1 Major)

ಡಾ. ಬಿ. ಆರ್. ಮೋಡಕ
ಪ್ರಿ. ಬಿ. ಎಚ್. ಶ್ರೀಧರ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪಠ್ಯಪುಸ್ತಕ ನಿರ್ದೇಶನಾಲಯ

ನಿರ್ದೇಶಕರು: ಪ್ರೊ. ಎಸ್. ಎಂ. ವೃಷಭೇಂದ್ರಸ್ವಾಮಿ, ಎಂ. ಎ.

Manusmriti (Chapter 7)—a text book for B.A. Part I (Major) Edited by Dr. B. R. Modak and Prin. B. H. Shreedhar (publication of the Text-Book Directorate) published by the Registrar, Karnatak University, Dharwar (1974).

Published under the centrally sponsored scheme for the Production of Books and Literature in Regional Languages, Government of India, Ministry of Education and Social Welfare (Department of Culture), New Delhi.

ಸಂಸ್ಕೃತ ವಿಷಯ ಪಠ್ಯಪುಸ್ತಕ ಸಂಪಾದಕ ಸಮಿತಿ:

ಡಾ. ಕೆ. ಕೃಷ್ಣಮೂರ್ತಿ (ಕಾರ್ಯಾಧ್ಯಕ್ಷರು)
ಡಾ. ಬಿ. ಆರ್. ಮೋಡಕ
ಪ್ರಿ. ಬಿ. ಎಚ್. ಶ್ರೀಧರ
ಡಾ. ಡಿ. ಎನ್. ಶಾನಭಾಗ
ಪ್ರೊ. ವ್ಹಿ. ಎಚ್. ಬಾರಿಕೇರಿ

ಪ್ರಕಾಶಕರು: ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್.ಎಲ್.ಬಿ.,
ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ: 1974
ಪ್ರತಿಗಳು: 500

ಬೆಲೆ: ಸಾದಾ ಪ್ರತಿ: ರೂ. **7–00**
ಅರ್ಧ ಕೆಲಿಕೊ ಪ್ರತಿ: ರೂ. **10–00**

ಮುದ್ರಕರು: ಶಾರದಾ ಛಾಪಖಾನೆ, ಮಂಗಳೂರು–1

ಹಾರೈಕೆ

ಆಧುನಿಕ ಮಾನವ ಜೀವನವು ಮಹತ್ವಪೂರ್ಣವಾದ ಪ್ರಗತಿಯ ಪಥದಲ್ಲಿ ಸಾಗುತ್ತಿರುವುದು ಸರ್ವವಿದಿತ ವಿಷಯವಾಗಿದೆ. ವೈಜ್ಞಾನಿಕ ಮನೋಭಾವ ಹಾಗೂ ತಾಂತ್ರಿಕ ಸಂಶೋಧನೆಗಳು ಈ ಪರಿವರ್ತನೆಯ ಪ್ರಮುಖ ಕಾರಣಗಳಾಗಿವೆ. ನೂತನ ವಿಜ್ಞಾನ ಬಿಡಿಸಿ ತೋರುತ್ತಿರುವ ವಿಶ್ವದ ರಹಸ್ಯಗಳು, ಸಾಧಿಸಿರುವ ವಿಕ್ರಮಗಳು, ಪರಿಷ್ಕರಿಸುತ್ತಿರುವ ಪರಂಪರೆಯ ಮೌಲ್ಯಗಳು. ಈ ಹೊಸ ಬಾಳಿನ ತೋರಣವಾಗಿವೆ. ವಿಶ್ವಮಾನವ ಪ್ರಜ್ಞೆಯನ್ನು ಜಾಗೃತಗೊಳಿಸಿವೆ. ಈ ನೂತನ ಜ್ಞಾನ, ವ್ಯಕ್ತಿಜೀವಿತಕ್ಕೆ ಬೆಳಕು ನೀಡಿ. ಜನಾಂಗಗಳಲ್ಲಿ ಸಾಮರಸ್ಯ ಮೂಡಿಸಿ ಮಾನವ ಕೋಟಿಯ ಕಲ್ಯಾಣ ಸಾಧನೆಗೆ ಪ್ರೇರಕವಾಗಬೇಕಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಈ ದಿಸೆಯಲ್ಲಿ ತನ್ನ ಪಾಲಿನ ಕರ್ತವ್ಯವನ್ನು ಶ್ರದ್ಧೆಯಿಂದ ನೆರವೇರಿಸುತ್ತಾ ಬರುತ್ತಿರುವುದು ಗಮನಾರ್ಹವಾದದ್ದು.

ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳು ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿದ್ಯಾಪ್ರಸಾರ ಮಾಡುವುದರ ಜೊತೆಗೆ ಸಂಶೋಧನೆ ಮತ್ತು ಜಿಜ್ಞಾಸೆಗಳ ಮೂಲಕ ಜ್ಞಾನದ ಪರಿಧಿಗಳನ್ನು ವಿಸ್ತರಿಸಿ ಶ್ರೀ ಸಾಮಾನ್ಯರಿಗೂ ಉಪಯುಕ್ತವಾದ ಜ್ಞಾನಪ್ರಸಾರ ಕಾರ್ಯವನ್ನು ನಿರ್ವಹಿಸಿಕೊಂಡು ಬಂದಿದೆ. ವಿಜ್ಞಾನ, ಕಲೆ, ಭಾಷೆ, ಸಾಹಿತ್ಯ ಮತ್ತು ಇತರ ಎಲ್ಲ ಸಾಮಾಜಿಕ ಶಾಸ್ತ್ರಗಳ ತಿಳಿವಳಿಕೆಯನ್ನು ಜನಸಾಮಾನ್ಯರೆಲ್ಲರಿಗೆ ಮುಟ್ಟಿಸಲು ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸುವುದು ಹಾಗೂ ಬೋಧನೆ ಮಾಡುವುದು ಬಹು ಮುಖ್ಯವಾದ ಉಪಕ್ರಮವೆಂದು ಅರಿತು ಉನ್ನತ ವ್ಯಾಸಂಗ ಹಾಗೂ ಸಂಶೋಧನೆಯ ಹೊಣೆಯನ್ನು ಹೊತ್ತ ಎಲ್ಲ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳು ಇಂದು ಈ ದಿಸೆಯಲ್ಲಿ ಕಾರ್ಯತತ್ಪರವಾಗಿರುವುದು ಉತ್ತೇಜನ ಪೂರಕವಾಗಿದೆ.

ಪಠ್ಯಪುಸ್ತಕ ಜ್ಞಾನ, ಸಂಶೋಧನೆಯ ಫಲ ಹಾಗೂ ಸ್ವತಂತ್ರ ವಿಚಾರಗಳನ್ನು ವಿದ್ಯಾರ್ಥಿಗಳಿಗೂ ನಾಡಿನ ಸಮಸ್ತ ಜನತೆಗೂ ತಿಳಿಯಪಡಿಸುವುದು ಎಲ್ಲ ಅಧ್ಯಾಪಕ, ಪ್ರಾಧ್ಯಾಪಕ, ಪ್ರಾಚಾರ್ಯ ಹಾಗೂ ಇತರ ವಿದ್ವಾಂಸರ ಕರ್ತವ್ಯವಾಗಿದೆ. ಕನ್ನಡ ಮಾಧ್ಯಮವು ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಸಫಲವಾಗಬೇಕಾದರೆ ಕನ್ನಡ ಭಾಷೆಯನ್ನು ಕೃಷಿ ಮಾಡಿ, ಪಠ್ಯಪುಸ್ತಕ ಹಾಗೂ ಪ್ರೌಢ ಗ್ರಂಥಗಳನ್ನು ಸಿದ್ಧಗೊಳಿಸುವುದು ಅತ್ಯಾವಶ್ಯಕ. ಕೇಂದ್ರ ಸರಕಾರದ ಆದೇಶ ಮತ್ತು ರಾಜ್ಯ ಸರಕಾರದ ಪ್ರಾದೇಶಿಕ ಸಮಿತಿಯ ಯೋಜನೆಗನುಗುಣವಾಗಿ ಕರ್ನಾಟಕ ವಿಶ್ವವಿದ್ಯಾಲಯವು ಪಠ್ಯಪುಸ್ತಕ ನಿರ್ದೇಶನಾಲಯ ವಿಭಾಗವನ್ನು ಸ್ಥಾಪಿಸಿ, ಕಲೆ, ವಿಜ್ಞಾನ, ಹಾಗೂ ಇತರ ವಿಷಯಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಿದೆ. ವಿದ್ವಾಂಸರೂ ಅನುಭವಿಗಳೂ

ಆದ ಅಧ್ಯಾಪಕ, ಪ್ರಾಧ್ಯಾಪಕ, ಪ್ರಾಚಾರ್ಯರು ಅತ್ಯಂತ ಶ್ರದ್ಧೆ ವಹಿಸಿ ಅನೇಕ ಪಠ್ಯ ಪುಸ್ತಕಗಳನ್ನು ರಚಿಸಿಕೊಟ್ಟಿದ್ದಾರೆ. ಅವರೆಲ್ಲರ ಪ್ರಯತ್ನ ಅಭಿನಂದನೀಯ. ಈ ಕಾರ್ಯ ಇನ್ನೂ ಉತ್ಸಾಹದಿಂದ ನಡೆಯಲೆಂದು ಹಾರೈಸುತ್ತೇನೆ. ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲ ಈ ಗ್ರಂಥಗಳ ಸದುಪಯೋಗ ಮಾಡಿಕೊಂಡು ಆಧುನಿಕ ಜ್ಞಾನ ವಾಹಿನಿಯನ್ನು ಮುಂದುವರಿಸಲೆಂದು ಆಶಿಸುತ್ತೇನೆ.

ಪಠ್ಯಪುಸ್ತಕಗಳೊಡನೆ ಪೂರಕ ಗ್ರಂಥಗಳನ್ನೂ ಪ್ರೌಢ ಗ್ರಂಥಗಳ ಜೊತೆಗೆ ಜನ ಪ್ರಿಯ ಗ್ರಂಥಗಳನ್ನೂ, ಮೂಲಗ್ರಂಥಗಳೊಡನೆ ಅನುವಾದ ಕೃತಿಗಳನ್ನೂ, ಕನ್ನಡದಲ್ಲಿ ಪ್ರಕಟಿಸುವ ಮಹತ್ವದ ಕಾರ್ಯವನ್ನು ಪಠ್ಯಪುಸ್ತಕ ನಿರ್ದೇಶನಾಲಯವು ಸಮರ್ಥವಾಗಿ ನೆರವೇರಿಸುತ್ತಲಿರುವುದು ಸಂತಸದ ಸಂಗತಿ. ಈ ಕಾರ್ಯ ಅವ್ಯಾಹತವಾಗಿ ಮುಂದು ವರಿಯಲೆಂದು ಆಶಿಸುತ್ತೇನೆ.

ಕುಲಪತಿನಿವಾಸ
ಧಾರವಾಡ

ಎಂ. ಜಯಲಕ್ಷ್ಮಮ್ಮಣ್ಣಿ
ಕುಲಪತಿ

ಪೀಠಿಕೆ

ಪಠ್ಯಪುಸ್ತಕ ನಿರ್ದೇಶನಾಲಯವು ಹಮ್ಮಿಕೊಂಡಿರುವ ಪಠ್ಯಪುಸ್ತಕ ಪ್ರಕಟನೆಯ ಕಾರ್ಯವು ಕ್ರಮೇಣ ಜನಪ್ರಿಯವಾಗುತ್ತಿರುವುದು ಸಂತಸದ ಸಂಗತಿ. ಕಾಲೇಜು ಶಿಕ್ಷಣದ ಎಲ್ಲ ಹಂತಗಳಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗುವ ಕಾಲ ಬಹುದೂರವಿಲ್ಲ. ಅದಕ್ಕಾಗಿ ಎಲ್ಲರೂ ಒಮ್ಮನಸ್ಸಿನಿಂದ ಕಾರ್ಯಪ್ರವೃತ್ತರಾಗಬೇಕಾಗಿದೆ. ಈ ದಿಶೆಯಲ್ಲಿ ನಡೆದು ಬಂದ ದಾರಿಗಿಂತ ನಡೆಯಬೇಕಾದ ದಾರಿಯೇ ನಿಡಿದಾಗಿದೆ. ಪಠ್ಯಪುಸ್ತಕ ನಿರ್ದೇಶನಾಲಯದ ಎಲ್ಲ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿರುವ ಕುಲಪತಿಗಳಾದ ಶ್ರೀಮತಿ ಎಂ. ಜಯಲಕ್ಷ್ಮಮ್ಮಣ್ಣಿಯವರಿಗೂ, ಯೋಜನೆಗೆ ಮಾರ್ಗದರ್ಶನ ನೀಡುತ್ತಿರುವ "ಕಾರ್ಯ ಸಂಯೋಜಕ ಸಮಿತಿ" (Co-ordination Committee) ಯ ಸದಸ್ಯರಾದ ಶ್ರೀ ಪಾಟೀಲ ಪುಟ್ಟಪ್ಪ, ಪ್ರಿ. ಎಸ್. ಎಸ್. ಬೊಮ್ಮಣ್ಣವರ, ಡಾ. ಸಿ. ಸಿ. ಪಟ್ಟಣಶೆಟ್ಟಿ, ಪ್ರಿ. ಡಿ. ಮರಿಯಪ್ಪ, ಪ್ರಿ. ರಾ. ಯ. ಧಾರವಾಡಕರ, ಡಾ. ಆರ್. ಸಿ. ಹಿರೇಮಠ, ಶ್ರೀ ಸಿ. ಎಸ್. ಕಣವಿ, ಡಾ. ಹಾ. ಮಾ. ನಾಯಕ, ಶ್ರೀ ಕೆ. ಶಿವಪ್ಪ ಹಾಗೂ ಕುಲಸಚಿವರು— ಇವರಿಗೂ ನಮ್ಮ ಕೃತಜ್ಞತೆಗಳು. ವಿವಿಧ ವಿಷಯಗಳಲ್ಲಿ ಪಠ್ಯಪುಸ್ತಕ ರಚನೆಯ ಹೊಣೆ ಹೊತ್ತ ಸಂಪಾದಕ ಸಮಿತಿಯವರಿಗೂ, ಗ್ರಂಥಕರ್ತರಿಗೂ ವಿಶ್ವವಿದ್ಯಾಲಯದ ಪ್ರಕಟನ ವಿಭಾಗದವರಿಗೂ ನಮ್ಮ ಕೃತಜ್ಞತೆಗಳು. ಕುಲಸಚಿವ ಶ್ರೀ ಸದಾಶಿವ ಒಡೆಯರ ಅವರ ಸಕ್ರಿಯ ಸಹಕಾರವನ್ನೂ ವಿಶೇಷವಾಗಿ ಸ್ಮರಿಸಿಕೊಳ್ಳುತ್ತೇವೆ.

"ಮನುಸ್ಮೃತಿ"ಯ 7ನೆಯ ಅಧ್ಯಾಯದ ಪಠ್ಯಭಾಗವನ್ನು ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದಲ್ಲಿ ರೀಡರರಾದ ಡಾ. ಬಿ. ಆರ್. ಮೋಡಕ ಮತ್ತು ಎಮ್. ಜಿ. ಸಿ. ಆರ್ಟ್ಸ ಕಾಲೇಜಿನ ಪ್ರಿ. ಬಿ. ಎಚ್. ಶ್ರೀಧರ (ಸಿದ್ದಾಪುರ) ಅವರು ಸಂಪಾದಿಸಿದ್ದಾರೆ. ಈ ಪಠ್ಯಪುಸ್ತಕವನ್ನು ಬಿ.ಎ. ಭಾಗ 1ರ ಸಂಸ್ಕೃತ ಮೇಜರ ಪಠ್ಯಕ್ರಮಕ್ಕೆ ಅನುಗುಣವಾಗಿ ರಚಿಸಲಾಗಿದೆ. ಸಂಸ್ಕೃತ ಪಠ್ಯಪುಸ್ತಕ ಸಂಪಾದಕ ಸಮಿತಿಯು ಇದನ್ನು ಪರಿಶೀಲಿಸಿ, ಬಿ.ಎ. 1 (ಮೇಜರ)ರ ಪಠ್ಯಪುಸ್ತಕವೆಂದು ಅಂಗೀಕರಿಸಿದೆ. ಅದಕ್ಕಾಗಿ ಅವರಿಗೆ ಚಿರಋಣಿಯಾಗಿದ್ದೇವೆ.

ಈ ಗ್ರಂಥದ ಕರಡಚ್ಚನ್ನು ತಿದ್ದುವುದರಲ್ಲಿ ಪ್ರಿ. ಬಿ. ಎಚ್. ಶ್ರೀಧರ ಅವರು ನೆರವಾಗಿದ್ದಾರೆ. ನಿರ್ದೇಶನಾಲಯದ ಕಲಾ ವಿಭಾಗದ ಮೇಲ್ವಿಚಾರಕ ಅಧ್ಯಾಪಕರಾದ ಪ್ರೊ. ಬಿ. ಸಿ. ಜವಳಿಯವರಿಗೂ, ಸಂಶೋಧನ ಸಹಾಯಕರಾಗಿದ್ದ ಶ್ರೀ ಎ. ಎಂ. ಅಣ್ಣೀಗೇರಿಯವರಿಗೂ ಈ ಪುಸ್ತಕವನ್ನು ಹೊರತರಲು ನೆರವಾದುದಕ್ಕೆ ನಮ್ಮ ವಂದನೆಗಳು. ಮುದ್ರಣ ಕಾರ್ಯವನ್ನು ನಿಷ್ಠೆಯಿಂದ ನೆರವೇರಿಸಿದ ಮಂಗಳೂರಿನ ಶಾರದಾ ಪ್ರೆಸ್ಸಿನ ಮಾಲಕರು ಹಾಗೂ ಕೆಲಸಗಾರರ ಸೇವೆಯನ್ನು ಸ್ಮರಿಸುತ್ತೇವೆ.

ಭಾರತ ಸರಕಾರದ ಶಿಕ್ಷಣ ಮತ್ತು ಸಮಾಜ ಕಲ್ಯಾಣ ವಿಭಾಗವು ಪ್ರಾದೇಶಿಕ ಭಾಷೆಗಳಲ್ಲಿ ವಿಶ್ವವಿದ್ಯಾಲಯ ಮಟ್ಟದ ಗ್ರಂಥಗಳನ್ನೂ ಪ್ರಕಟಿಸುವ ಯೋಜನೆಗೆ ಅನುಗುಣವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯವು ಈ ಗ್ರಂಥವನ್ನು ಪ್ರಕಟಿಸಿದೆ.

ಪಠ್ಯಪುಸ್ತಕ ನಿರ್ದೇಶನಾಲಯ
ಕ. ವಿ. ವಿ. ಧಾರವಾಡ
20–7–1974

ಎಸ್. ಎಂ. ವೃಷಭೇಂದ್ರಸ್ವಾಮಿ
ನಿರ್ದೇಶಕರು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ಅಭ್ಯಾಸ ಮಂಡಲವು ಬಿ.ಎ. ಭಾಗ 1 — ಸಂಸ್ಕೃತ ಮೇಜರ (Major) ಪರೀಕ್ಷೆಗಾಗಿ ಮನುಸ್ಮೃತಿಯ ಏಳನೆಯ ಅಧ್ಯಾಯವನ್ನು ಗೊತ್ತು ಮಾಡಿತು. ವಿದ್ಯಾರ್ಥಿಗಳಿಗೆ ಬೇಕಾಗುವ ಅಂಶಗಳನ್ನು ಧ್ಯಾನದಲ್ಲಿಟ್ಟು ಈ ಪುಸ್ತಕವನ್ನು ಸಿದ್ಧಪಡಿಸಲಾಗಿದೆ.

ಪೀಠಿಕೆ. ಸಂಸ್ಕೃತ ಮೂಲ (ದೇವನಾಗರಿ ಹಾಗು ಕನ್ನಡ ಲಿಪಿಯಲ್ಲಿ) ಮತ್ತು ಕನ್ನಡ ಅನುವಾದ—ಇವುಗಳನ್ನು ಟಿಪ್ಪಣಿಗಳೊಂದಿಗೆ ಈ ಸಂಸ್ಕರಣದಲ್ಲಿ ಕೊಟ್ಟಿದ್ದೇವೆ. ಪೀಠಿಕೆಯಲ್ಲಿ ರಾಜಧರ್ಮದ ಅನೇಕ ಅಂಗಗಳನ್ನು ಕುರಿತು ವಿವೇಚನೆ ಮಾಡಲಾಗಿದೆ. ಸಂಸ್ಕೃತ ಮೂಲವನ್ನು ಸಾಮಾನ್ಯರೂ ಓದಲು ಸುಲಭವಾಗುವಂತೆ ಕನ್ನಡ ಲಿಪಿಯಲ್ಲಿಯೂ ಕೊಡಲಾಗಿದೆ. ಅನುವಾದವು ಸರಳವಿದೆ. ಟಿಪ್ಪಣಿಗಳಲ್ಲಿ ಮೇಧಾತಿಥಿ. ಕುಲ್ಲೂಕ. ಸರ್ವಜ್ಞ ನಾರಾಯಣ. ರಾಮಚಂದ್ರ ಮುಂತಾದ ಪ್ರಸಿದ್ಧ ಟೀಕಾಕಾರರು ಬರೆದ ಟೀಕೆಗಳಿಂದ ಆಯ್ದ ಅವತರಣಿಕೆಗಳನ್ನು ವಿವೇಚನೆಯೊಂದಿಗೆ ಕೊಡಲಾಗಿದೆ. ವಿಷಯವನ್ನು ಪೂರ್ಣವಾಗಿ ತಿಳಿಯಲು ಇವು ಉಪಯುಕ್ತವಾಗಬಹುದೆಂದು ನಿರೀಕ್ಷಿಸುತ್ತೇವೆ.

ಈ ಪುಸ್ತಕವನ್ನು ಪ್ರಕಟಿಸಿ ಸಂಸ್ಕೃತ ಅಧ್ಯಯನವನ್ನು ಪ್ರೋತ್ಸಾಹಿಸುತ್ತಿರುವ ಪಠ್ಯಪುಸ್ತಕ ನಿರ್ದೇಶನಾಲಯದ ಅಧಿಕಾರಿಗಳಿಗೆ ನಾವು ಕೃತಜ್ಞರು.

ಸಂಪಾದಕರು

ಪರಿವಿಡಿ

ಮನುಸ್ಮೃತಿಯ ಸಪ್ತಮಾಧ್ಯಾಯ

ರಾಜಧರ್ಮ

ಪ್ರಸ್ತಾವನೆ

ಕಲ್ಪವು ಆರು ವೇದಾಂಗಗಳಲ್ಲಿ ಒಂದು. ಅದರಲ್ಲಿ ಯಜ್ಞವಿಚಾರ ಮತ್ತು ವಿಧಾನಗಳಿಗೆ ಹೆಚ್ಚಿನ ಸ್ಥಾನವಿರುತ್ತದೆ. ಕಲ್ಪಸೂತ್ರಗಳಲ್ಲಿ ಮೂರು ವಿಭಾಗಗಳಿವೆ:—ಶ್ರೌತಸೂತ್ರ. ಗೃಹ್ಯಸೂತ್ರ. ಧರ್ಮಸೂತ್ರ—ಎಂದು. ಗೃಹ್ಯಸೂತ್ರಗಳಲ್ಲಿ ಹೇಳಿದ ಕೆಲ ವಿಷಯಗಳೊಡನೆ ಧರ್ಮಸೂತ್ರಗಳು ಅರ್ಥಶಾಸ್ತ್ರೀಯ. ರಾಜಧಾರ್ಮಿಕ. ಸರಕಾರಿ ಮತ್ತು ಅಪರಾಧಿಕ–ಅನಾಪರಾಧಿಕ ಕಾಯಿದೆಗಳ ಅಂಶಗಳ ಬಗೆಗೆ ತಿಳಿವಳಿಕೆ ನೀಡುತ್ತವೆ.

ಧರ್ಮಸೂತ್ರಗಳ ಆದಿಕಾಲ ಕ್ರಿ.ಪೂ. ೬೦೦ರಿಂದ ೩೦೦. ಗೃಹ್ಯಸೂತ್ರಗಳ ಹಾಗೂ ಧರ್ಮಸೂತ್ರಗಳ ಕಾಲ ಹೆಚ್ಚು ಕಡಿಮೆ ಒಂದೇ ಎನ್ನಬಹುದು. ಮಾನವ ಗೃಹ್ಯಸೂತ್ರವೆಂಬುದು ಅವುಗಳಲ್ಲಿ ಒಂದು. ಅದರ ಕರ್ತೃ ಮಾನವಾಚಾರ್ಯ. ಅದಕ್ಕೆ 'ಪುರುಷ'ಗಳೆಂಬ ಎರಡು ಭಾಗಗಳಿವೆ. ಅದರ ಭಾಷ್ಯಕಾರ ಅಷ್ಟಾವಕ್ರ. 'ಮಾನವ ಧರ್ಮಸೂತ್ರ' ಎಂಬ ಹೆಸರಿನ ಯಾವ ಗ್ರಂಥವೂ ಈ ವರೆಗೆ ಸಿಕ್ಕಿಲ್ಲ. 'ಮಾನವ ಶ್ರೌತಸೂತ್ರ' ಎಂಬುದು ಉಪಲಬ್ಧ. ಗೃಹ್ಯಸೂತ್ರಗಳು ಗೃಹ್ಯಕರ್ಮಗಳನ್ನಲ್ಲದೆ ಸಾಮಾನ್ಯ ನೀತಿಗಳನ್ನು ಹೇಳುವುದಿಲ್ಲ. ಧರ್ಮಸೂತ್ರಗಳು ಗದ್ಯಮಯ ಅಥವಾ ಗದ್ಯಪದ್ಯ ಸಂಮಿಶ್ರವಾಗಿರುತ್ತವೆ: ಸ್ಮೃತಿಗಳಾದರೋ ಹೆಚ್ಚಾಗಿ ಪದ್ಯಮಯವಾಗಿರುತ್ತವೆ. ಮೊದಲನೆಯವುಗಳ ಭಾಷೆ ಸ್ವಲ್ಪ ಹಳೆಯದು. ಎರಡನೆಯವುಗಳ ಭಾಷೆ ಸ್ವಲ್ಪ ಹೊಸದು: ಹಾಗೇ ಅವುಗಳ ವಿಷಯಮಂಡನ ಅಕ್ರಮವಾದರೆ. ಇವುಗಳದ್ದು ಆಚಾರ. ವ್ಯವಹಾರ ಮತ್ತು ಪ್ರಾಯಶ್ಚಿತ್ತಗಳೆಂಬ ಕ್ರಮಬದ್ಧ ವಿಭಾಗಗಳಿಂದ ಕೂಡಿರುತ್ತದೆ. ಸ್ಮೃತಿಗಳಲ್ಲೆಲ್ಲ ಮನುಸ್ಮೃತಿಯೇ ಅತ್ಯಂತ ಹಳೆಯದು.

ಕೆಲ ಧರ್ಮಸೂತ್ರಗಳ ಅನುಕ್ರಮ ಇಂತಿದೆ: ಗೌತಮ, ಬೌಧಾಯನ, ಆಪಸ್ತಂಬ, ಹಿರಣ್ಯಕೇಶಿ, ವಸಿಷ್ಠ, ವಿಷ್ಣು, ಹಾರೀತ, ಶಂಖ, ಲಿಖಿತ ಎಂಬವರು ಬರೆದ ಧರ್ಮಸೂತ್ರಗಳು. ಹಲವಾರು ಧರ್ಮಸೂತ್ರಕಾರರ ಹೆಸರುಗಳೂ ಕೆಲ ಅವತರಣಿಕೆಗಳೂ ಸಿಕ್ಕಿವೆಯಲ್ಲದ ಪೂರ್ಣ ಗ್ರಂಥಗಳು ಸಿಕ್ಕಿಲ್ಲ.

ಪಾಣಿನಿಯ ವ್ಯಾಕರಣ: ಶ್ರೌತ, ಗೃಹ್ಯ ಮತ್ತು ಧರ್ಮಸೂತ್ರಗಳು: ಮಹಾಭಾರತ: ಮನು, ಯಾಜ್ಞವಲ್ಕ್ಯ ಹಾಗೂ ಇತರ ಗ್ರಂಥಗಳು ಸ್ಮೃತಿಗಳೆಂದು ಪ್ರಸಿದ್ಧವಾಗಿವೆ. ಆದರೆ ವೇದಾನುಮತವಾದ ವರ್ಣ, ಜಾತಿ, ಆಶ್ರಮ ಮುಂತಾದವುಗಳನ್ನು ಹೇಳುವುದು ಸ್ಮೃತಿಯ ಕೆಲಸ ಎಂಬುದು ಮನುಮತ.

ಸುಮಾರು ೨೬೦ ಶ್ಲೋಕಗಳು ಮೂಲ ಮನುಸ್ಮೃತಿಗೂ ಅನಂತರದ ಮಹಾಭಾರತಕ್ಕೂ ಸಾಧಾರಣ. 'ಧರ್ಮಸೂತ್ರಕೃತಿ' 'ಧರ್ಮಶಾಸ್ತ್ರ'ದ ಅರ್ಥವ್ಯಾಪ್ತಿ ಹೆಚ್ಚಿನದು. ಬಹಳ ಪ್ರಾಚೀನ ಕಾಲದ ಶಾಸನಗಳು ಮನುಸ್ಮೃತಿಯನ್ನು ಉಲ್ಲೇಖಿಸಿವೆ. ಅದೊಂದು ಧರ್ಮಶಾಸ್ತ್ರ. ಕ್ರಿ.ಶ. ೫೨೫ರ ಧ್ರುವಸೇನಶಾಸನ, ೫೬೪ರ ಸಿಂಹದೇವ ಶಾಸನ, ೫೭೧ರ ೨ನೆಯ ಧರಸೇನನ ಶಾಸನ ಮತ್ತು ೬೩೪ರ ೧ನೆಯ ಚಾಲುಕ್ಯ ಜಯಸೇನನ ಶಾಸನ ಮುಂತಾದವು ಅವುಗಳಲ್ಲಿ ಕೆಲವು.

ಸ್ಮೃತಿಕಾರರಲ್ಲಿ ಮನು, ಯಾಜ್ಞವಲ್ಕ್ಯ, ಕಾತ್ಯಾಯನ, ಅಂಗಿರಸ್, ಮಾರ್ಕಂಡೇಯರು ಗಣ್ಯರು—ಎಂಬುದು ಕ್ರಿ.ಶ. ೧೧೧೯ರ ಚಾಹಮಾನ ರತ್ನಪಾಲನ ಶಾಸನದಿಂದ ತಿಳಿದುಬರುತ್ತದೆ. ರಘುವಂಶ—ಮೃಚ್ಛಕಟಿಕೆಗಳು ಮನುಧರ್ಮವನ್ನು ಉಲ್ಲೇಖಿಸಿವೆ. ಗೌತಮ ಧರ್ಮಸೂತ್ರವು ಮನುವನ್ನು ಸ್ಮೃತಿಕಾರನೆಂದು ಹೆಸರಿಸಿದೆ. ಉತಥ್ಯತನಯ, ಅತ್ರಿ, ಭೃಗು, ವಸಿಷ್ಠ, ವಿಖಾನಸ್ ಮತ್ತು ಶೌನಕರು ಮನೂಕ್ತ ಸ್ಮೃತಿಕಾರರು. ಇತರ ಆಕರಗಳಿಂದ ೧೦೦ ಸ್ಮೃತಿಗಳಿದ್ದವೆಂದು ತಿಳಿದುಬರುತ್ತದೆ. ಅವು ಗದ್ಯ, ಪದ್ಯ, ಮಿಶ್ರ ಪದ್ಧತಿಗಳನ್ನು ಹಿಡಿದಂಥವು; ಪದ್ಯಮಯವಾದಂಥವು ಅಧಿಕ. ಗೌತಮ, ಆಪಸ್ತಂಬ, ಬೌಧಾಯನ ಮತ್ತು ಮನುಸ್ಮೃತಿಗಳು (ಕ್ರಿ.ಪೂ.) ಪ್ರಾಚೀನತಮ. ಯಾಜ್ಞವಲ್ಕ್ಯ, ಪರಾಶರ, ನಾರದ ಸ್ಮೃತಿಗಳು ಕ್ರಿ.ಪೂ. ೧ನೆಯ ಶತಮಾನದವು. ಮಿಕ್ಕವು ಕ್ರಿ.ಶ. ೪೦೦ರಿಂದ ೧೦೦೦ದ ನಡುವಿನವು. ಧರ್ಮಸೂತ್ರಗಳನ್ನು ಬಿಟ್ಟರೆ, ಕೇವಲ ೧೨ ಸ್ಮೃತಿ ಗ್ರಂಥಗಳಿಗೂ ವ್ಯಾಖ್ಯಾನಗಳಿದ್ದಂತಿಲ್ಲ. ವ್ಯಾಖ್ಯಾನಗಳ ದೃಷ್ಟಿಯಿಂದ ಮನು–ಯಾಜ್ಞವಲ್ಕ್ಯ ಸ್ಮೃತಿಗಳು ಅತಿಗಣ್ಯ.

ಮನುವು ಮುನಿಯೆಂಬುದನ್ನು ಋಗ್ವೇದ ಸೂಕ್ತಗಳಿಂದ ತಿಳಿಯಬಹುದು. ಅವನ ಹೆಸರಿನಲ್ಲಿ ಯಾರೋ ಮನುಸ್ಮೃತಿಯನ್ನು ರಚಿಸಿದರು. ಮಾನವ ಗೃಹ್ಯಸೂತ್ರಕ್ಕೂ ಮನುಸ್ಮೃತಿಗೂ ಗಣ್ಯವಾದ ಭಿನ್ನಾಭಿಪ್ರಾಯಗಳಿವೆ. ಸದ್ಯದ ಮನುಸ್ಮೃತಿಕಾರನು ಮನುವಿನ ಹೆಸರಿನಲ್ಲಿದ್ದ ಧರ್ಮಶಾಸ್ತ್ರ ಮತ್ತು ಅರ್ಥಶಾಸ್ತ್ರ ಗ್ರಂಥಗಳನ್ನು ಕೌಟಿಲ್ಯನ ಅರ್ಥಶಾಸ್ತ್ರ ರಚಿತವಾಗುವುದಕ್ಕೆ ಸ್ವಲ್ಪ ಮುಂಚೆ ಒಂದುಗೂಡಿಸಿ ತನ್ನ ಮನುಸ್ಮೃತಿಯನ್ನು ರಚಿಸಿರಬೇಕೆಂಬುದು (ಮಾನವೀಯವೆಂದು ಕೌಟಿಲ್ಯನ ಅರ್ಥಶಾಸ್ತ್ರ ಹೇಳಿರುವ ಅಂಶಗಳು ಶಬ್ದಶಃ ಮನುಸ್ಮೃತಿಯಲ್ಲೀಗ ಕಂಡುಬಾರದಿರುವುದರಿಂದ) ಗೊತ್ತಾಗುತ್ತದೆ. ಉಪಲಬ್ಧ ಮನುಸ್ಮೃತಿಯ ಕರ್ತೃತ್ವವನ್ನು ಸ್ವಾಯಂಭುವ ಮತ್ತು ಪ್ರಾಚೇತಸೇತರ ಆರು ಮನುಗಳಿಗೆ ಅನ್ವಯಿಸಿ ಇದರಲ್ಲೇ ಹೇಳಿದೆ. ಇದರ ಅಧ್ಯಾಯಗಳು ೧೨ ಮತ್ತು ಶ್ಲೋಕಗಳು ೨೬೮೪. ವ್ಯಾಸನ ಸಮಕಾಲೀನನಾಗಿರಬಹುದಾದ ಭೃಗುವು ಮೂಲ ಮನುಸ್ಮೃತಿಯನ್ನು ಈ ರೂಪಕ್ಕೆ ತಿರುಗಿಸಿರಬಹುದಾಗಿ ತೋರುತ್ತದೆ. ವ್ಯಾಸನ ಕಾಲ ಸುಮಾರು ಕ್ರಿ.ಪೂ. ೪೦೦–೨೦೦.

ಧರ್ಮಶಾಸ್ತ್ರಗಳಲ್ಲಿ ಬರುವ ವಿಷಯಗಳ ಮೂಲವು ಅತ್ಯಂತ ಪ್ರಾಚೀನವಾದ ವೈದಿಕ ಪರಂಪರೆಯಲ್ಲಿದೆ. ಆದರೆ ವೇದಗಳು ಕೇವಲ ಧರ್ಮಶಾಸ್ತ್ರೀಯ ವಿಷಯಗಳಿಗೆ ಪರಿಮಿತವಾದ ಗ್ರಂಥಗಳಲ್ಲ; ಸ್ವರೂಪತಃ ಅವು ಭಿನ್ನ; ಅವುಗಳಲ್ಲಿ ಅನುಸ್ಯೂತವಾಗಿ

ಧರ್ಮಶಾಸ್ತ್ರೀಯ ವಿಚಾರಗಳು ಉಲ್ಲೇಖಿಸಲ್ಪಟ್ಟಿಲ್ಲ. ಸ್ಮೃತಿಗಳೇ ಔಪಚಾರಿಕವಾಗಿ ಮತ್ತು ಸುಸಂಬದ್ಧವಾಗಿ ಧರ್ಮಕರ್ಮಗಳ ವ್ಯವಸ್ಥೆಯನ್ನು ವಿವರಿಸುವ ಆದ್ಯ ಗ್ರಂಥಗಳು.

ಮಂತ್ರ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳು 'ಶ್ರುತಿ'ಗಳೆನ್ನಿಸಿ ಕೊಳ್ಳುತ್ತವೆ. ಅವುಗಳ ಅಭ್ಯಾಸಕ್ಕೆ ಪೂರಕವಾದಂಥವು ಸೂತ್ರಗ್ರಂಥಗಳು. ಧರ್ಮ ಸೂತ್ರಗ್ರಂಥಗಳು ಅವುಗಳಲ್ಲಿ ಒಂದು ವರ್ಗ. ಸ್ಮೃತಿಗಳು ಅವುಗಳನ್ನೊಳಗೊಳ್ಳುವ ಧರ್ಮಶಾಸ್ತ್ರಗ್ರಂಥಗಳು.

ಪೂರ್ವ ಮೀಮಾಂಸಕರು ಚೋದನಾ ಲಕ್ಷಣವುಳ್ಳ ಅರ್ಥವೇ ಧರ್ಮವೆನ್ನುತ್ತಾರೆ. ಧರ್ಮಾಧರ್ಮಗಳೆಂದರೆ "ಅದೃಷ್ಟ" ಎಂಬುದು ನೈಯಾಯಿಕರ ಮತ. ಔಪನಿಷದಿಕರಿಗೆ ಯೋಗದಿಂದ ಆತ್ಮಸಾಕ್ಷಾತ್ಕಾರ ಮಾಡಿಸಿಕೊಡುವಂತಹದು ಧರ್ಮ. ಸಂಪ್ರದಾಯಸ್ಥರಿಗೆ ಆಚಾರವೇ ಪರಮ ಧರ್ಮ. ಕೆಲವರಿಗೆ ಇಷ್ಟವನ್ನು ಪಡೆಯಲು ಮತ್ತು ಅನಿಷ್ಟವನ್ನು ತೊಡೆಯಲು ಸಾಧನವಾಗುವ ಅಲೌಕಿಕ ಪದಾರ್ಥವು ಧರ್ಮ. ತಮ್ಮ ಇರವಿಗೆ ಅನಿವಾರ್ಯವಾದ ಅರಿವೇ ಧರ್ಮ—ಉಳಿದವರಿಗೆ.

ವೇದ, ಸ್ಮೃತಿ, ಸದಾಚಾರ, ಶುದ್ಧಬುದ್ಧಿಗೆ ಪ್ರಿಯವಾದ ಅಂಶ—ಇವೇ ನಾಲ್ಕು ಧರ್ಮಾಕರಗಳು: ಋಗ್ವೇದ, ಯಜುರ್ವೇದ, ಸಾಮವೇದ, ಹಾಗೂ ಅಥರ್ವವೇದಗಳು ನಾಲ್ಕು ವೇದಗಳು: ಶಿಕ್ಷೆ, ಕಲ್ಪ, ವ್ಯಾಕರಣ, ಛಂದಸ್, ನಿರುಕ್ತ ಮತ್ತು ಜ್ಯೋತಿಷ ಎಂಬಿವು ಆರು ವೇದಾಂಗಗಳು. ಸಾಮಾನ್ಯವಾಗಿ ಅಪೌರುಷೇಯ ವೇದ ಸಾಹಿತ್ಯವನ್ನು 'ಶ್ರುತಿ' ಎಂದೂ, ಋಷಿಪ್ರೋಕ್ತ ಧರ್ಮಗ್ರಂಥಗಳನ್ನು 'ಸ್ಮೃತಿ' ಎಂದೂ ಹೇಳುವ ರೂಢಿ ಇದೆ. ಆದರೆ ಸ್ಮೃತಿ ಶಬ್ದಕ್ಕೆ ಪರಂಪರಾಗತ ಕಾಯದೆ ಎಂಬ ವಿಶೇಷಾರ್ಥವು ಬೇರೆ ಉಂಟು. ಅಂಥ ಕಾಯದೆ ಕಟ್ಟಳೆಗಳ, ವಿಧಿವಿಧಾನಗಳ ಸಂಗ್ರಹ ಅಥವಾ ಸಂಹಿತೆ ಒಂದು ಸ್ಮೃತಿ ಗ್ರಂಥವೆನ್ನಿಸುತ್ತದೆ.

ಯಾಜ್ಞವಲ್ಕ್ಯನ ಪ್ರಕಾರ—ಮನು, ಅತ್ರಿ, ವಿಷ್ಣು, ಹಾರೀತ, ಯಾಜ್ಞವಲ್ಕ್ಯ, ಉಶನಸ್, ಅಂಗಿರಸ್, ಯಮ, ಆಪಸ್ತಂಬ, ಸಂವರ್ತ, ಕಾತ್ಯಾಯನ, ಬೃಹಸ್ಪತಿ, ಪರಾಶರ, ವ್ಯಾಸ, ಶಂಖ, ಲಿಖಿತ, ದಕ್ಷ, ಗೌತಮ, ಶಾತಾತಪ, ಮತ್ತು ವಸಿಷ್ಠರು ಸ್ಮೃತಿಕಾರರು.

ಮನುಸ್ಮೃತಿಯು ಸ್ಮೃತಿಗ್ರಂಥಗಳಲ್ಲೆಲ್ಲ ಮೇಲ್ಪಂಕ್ತಿಯದು. ಅದಕ್ಕೆ ೧೨ ಅಧ್ಯಾಯಗಳಿವೆ. ಅದರ ೭ನೆಯ ಅಧ್ಯಾಯವು ರಾಜಧರ್ಮವನ್ನು ವಿವರಿಸುತ್ತದೆ. ರಾಜಧರ್ಮವು ವರ್ಣಧರ್ಮಗಳಲ್ಲಿ ಒಂದಾದ ಕ್ಷತ್ರಿಯತ್ವದ* ವಿಶಿಷ್ಟ ಧರ್ಮ. ನಾಲ್ಕು ಆಶ್ರಮಧರ್ಮಗಳು ಪ್ರತಿಯೊಂದು ವರ್ಣಕ್ಕೂ ಇವೆ. ರಾಜಧರ್ಮದಲ್ಲಿ, ರಾಜನ ಹುಟ್ಟು, ಪ್ರಾಧಿಕಾರ (Authority ಅಧಿಕಾರ ಸ್ವರೂಪ), ಅವನ ದಿನಚರಿ, ಸರಕಾರದ

* ಎಂಟನೆಯ ಅಧ್ಯಾಯದಲ್ಲಿ ಮನುವು ಆಪತ್ಕಾಲದಲ್ಲಿ ಮೊದಲಿನ ಮೂರು ವರ್ಣದವರಲ್ಲಿ ಎಲ್ಲರೂ ಶಸ್ತ್ರಧಾರಿಗಳಾಗಿ ಅಧಾರ್ಮಿಕರನ್ನು ಶಿಕ್ಷಿಸಬಹುದು ಎಂದಿರುವುದರಿಂದ ಕ್ಷತ್ರಿಯರಲ್ಲಿ ಯೋಗ್ಯರಿಲ್ಲವಾದಾಗ ಬ್ರಾಹ್ಮಣ ಅಥವಾ ವೈಶ್ಯರಲ್ಲಿ ಯಾರಾದರೂ ಸಮರ್ಥರು ರಾಜರಾಗಬಹುದು ಎಂಬರ್ಥ ಉಂಟು.

ರಾಜ. ರಾಜ್ಯ ವಿಭಾಗಗಳು. ರಾಜ್ಯದ ಸಪ್ತಾಂಗಗಳು. ರಾಜನೀತಿ. ರಾಜಮಂತ್ರಿ. ರಾಜ್ಯ ಪ್ರಶಾಸನ (Administration ಆಡಳಿತ). ಗೂಢಚಾರರ ನೇಮಕ. ರಾಜಮಂಡಲದ ದ್ವಾದಶ ಪ್ರಕೃತಿಗಳು. ರಾಜಮಂಡಲ. ಯುದ್ಧನೀತಿ. ದುರ್ಗರಚನೆ. ಕೃತ್ಯಾಕೃತ್ಯವಿವೇಕ. ಷಾಡ್ಗುಣ್ಯ. ವಿಜಯೋತ್ತರ ನೀತಿ ಮುಂತಾದ ಮಹತ್ವದ ವಿಷಯಗಳನ್ನು ವಿವರಿಸಲಾಗಿದೆ.

ರಾಜಾಧಿಕಾರ :

ರಾಜನಿಲ್ಲದ ನಾಡಿನಲ್ಲಿ ಅರಾಜಕತೆ ಇರುತ್ತದೆ—ಇದು ರಾಜ್ಯಶಾಸ್ತ್ರದ ಆರಂಭದ ಮಾತು. ಸರ್ವಜ್ಞ ಕವಿಯು

"ಗುರುಗಳಿಲ್ಲದ ಮಠವು ಹಿರಿಯರಿಲ್ಲದ ಮನೆಯು
ಅರಸಿಲ್ಲದೂರು ಇವು ಮೂರು ಸುಳಿಬೆಂದ
ಹೊರನಾಂತಕ್ಕು ಸರ್ವಜ್ಞ"

ಎಂದು ಹೇಳಿದ್ದಾನೆ. ಸರಕಾರವಿಲ್ಲದಲ್ಲಿ ಸಮಾಜಕಂಟಕರು ಧರ್ಮೋತ್ಪಾದಕ ಚಟುವಟಿಕೆಗಳನ್ನು ನಡೆಸುತ್ತಾರೆ: ಪ್ರಜೆಗಳ ವಿತ್ತಜೀವಿತಗಳ ಸುರಕ್ಷತೆ ಉಳಿಯದು; ಅವರು ಜೀವ ನಿಶ್ಚಯವಾಗಿ ಬಲಿಹೋಗಬೇಕಾಗುವುದು. ಈ ಭಯವನ್ನು ನಿವಾರಿಸಲು ಬ್ರಹ್ಮನು ರಾಜನನ್ನು ಸೃಷ್ಟಿಮಾಡಿದನು—ಎನ್ನುತ್ತಾನೆ ಮನು. ಸಬಲರು ದುರ್ಬಲರನ್ನು ತಿನ್ನುವ ಮಾತ್ಸ್ಯ ನ್ಯಾಯಕ್ಕೆ, ಅವನ ಪ್ರಕಾರ, ಇದೊಂದೇ ಮದ್ದು.

ವೇನ ಮೊದಲಾದ ದುಷ್ಟ ರಾಜರನ್ನು ಜನರಿಂದ ಪೂಜಿತರಾದ ಋಷಿ ಮುನಿಗಳು ಅವರ ದುರ್ನಡತೆಗಾಗಿ ಪದಚ್ಯುತಿಗೊಳಿಸಿದ್ದನ್ನು ಮನು ಹೇಳುತ್ತಾನೆ. ಇದರಿಂದ ರಾಜಾಧಿಕಾರವು ಅಮರ್ಯಾದಿತವಲ್ಲವೆಂಬುದು ಸ್ಪಷ್ಟವಾಗುತ್ತದೆ: ಪ್ರಜಾಪೀಡಕ ಸರಕಾರವನ್ನು ಪ್ರಜೆಗಳು ಉರುಳಿಸಬಹುದೆಂದು ಗೊತ್ತಾಗುತ್ತದೆ. ವೇನನ ಮಗನಾದ ಪೃಥುವು ಪಟ್ಟಾಭಿಷಿಕ್ತನಾದುದು ಅವನ ಯೋಗ್ಯತಾಬಲದಿಂದ. ಕೇವಲ ಆನುವಂಶಿಕ ಹಕ್ಕಿನಿಂದಲ್ಲ. ಸುಸಂಸ್ಕೃತ ಕುಲದಲ್ಲಿ ಹುಟ್ಟಿರುವುದೂ ಗುಣವಿದ್ಯಾದಿ ಸಂಪನ್ನತೆಯೂ ಇಲ್ಲಿ ಸಮವಾಗಿ ಗ್ರಾಹ್ಯತೆಯನ್ನು ಪಡೆದಿವೆ.

ರಾಜನು ದೇವಾಂಶಸಂಭೂತನೆಂದು ಮನು ಹೇಳುತ್ತಾನೆ. ಅದನ್ನು ಕೇಳಿ ಕೆಲವರು ಇಂಗ್ಲೆಂಡಿನಲ್ಲಿ ಹಿಂದೆ ಇದ್ದ "ರಾಜನ ಅಧಿಕಾರವು ದೈವದತ್ತ" ಎಂಬ ಸಿದ್ಧಾಂತಕ್ಕಿದು ಸಂವಾದಿ ಎನ್ನುತ್ತಾರೆ. ಆದರದು ಅಸಮಂಜಸ. ದೇವದತ್ತಾಧಿಕಾರದ ಮುಖ್ಯಾಂಶಗಳಿವು:

೧. ರಾಜಪ್ರಭುತ್ವವು ದೈವೋತ್ಪನ್ನವಾದ ಶಾಸನ ಸಂಸ್ಥೆ.
೨. ಎಂದೂ ರಾಜಾಧಿಕಾರದ ಆನುವಂಶಿಕತೆಯನ್ನು ಉಲ್ಲಂಘಿಸಬಾರದು.
೩. ರಾಜರು ದೇವರಿಗೆ ಮಾತ್ರ ಜವಾಬುದಾರರು.
೪. ಪ್ರಜೆಗಳು ಎಂದೂ ರಾಜನ ನಿರಂಕುಶಾಧಿಕಾರದ ಬಗ್ಗೆ ಮಾತಾಡಬಾರದು; ಅವಜ್ಞೆಯನ್ನು ತೋರುವುದು ಪಾತಕ.

ಈ ನಾಲ್ಕು ಮುಖ್ಯಾಂಶಗಳಲ್ಲಿ ಮೊದಲಿನದೊಂದನ್ನು 'ರಾಜನು ಬ್ರಹ್ಮನಿಂದ ವಿಶಿಷ್ಟ ರೂಪದಲ್ಲಿ ಸೃಷ್ಟಿಸಲ್ಪಟ್ಟವನು' ಎಂಬ ಅಂಶದೊಡನೆ ಸಮನ್ವಯಿಸಬಹುದು. ಉಳಿದ ಯಾವ ಅಂಶವನ್ನೂ ಮನುಮತ ಎನ್ನಲು ಸಾಧ್ಯವಿಲ್ಲ. ರಾಜನಿಲ್ಲಿ ದೇವರಿಗೆ ಜವಾಬುದಾರನಲ್ಲ. ಪ್ರಜೆಗಳಿಗೆ ಜವಾಬುದಾರ. ಪ್ರಜಾಹಿತಕ್ಕಲ್ಲಿ ರಾಜನು ಸಾಧನ; ರಾಜಹಿತಸಾಧನೆಯು ಪ್ರಜಾಹಿತಸಾಧನೆಯನ್ನೇ ಅವಲಂಬಿಸಿದೆ. ಆದುದರಿಂದ ಮನುವಿನ ಕಾಲದ ಭಾರತೀಯ ರಾಜನು ಸಾಂಕುಶ ಪ್ರಭು. ರಾಜನ ಅಧಿಕಾರವು ದೈವದತ್ತವಾದರೆ ಅವನ ಪ್ರಭುತ್ವವು ನಿರಂಕುಶವಾಗುತ್ತದೆ. ದೈವದತ್ತಾಧಿಕಾರವುಳ್ಳ ರಾಜನು ದುಷ್ಟನಾದರೆ ಅವನನ್ನು ಪದಚ್ಯುತಗೊಳಿಸುವ ಹಕ್ಕು ಪ್ರಜೆಗಳಿಗಿರದು. ಇಂದ್ರಾದಿ ದೇವತೆಗಳ ಅಂಶವು ರಾಜನ ವ್ಯಕ್ತಿತ್ವದಲ್ಲಿದೆ ಎಂದು ಮನು ಹೇಳಿದ್ದು ಪ್ರಜೆಗಳು ಕಾಯಿದೆಯನ್ವಯವಾಗಿ ನಡೆದುಕೊಳ್ಳುವುದು ಕರ್ತವ್ಯ ಎಂಬುದನ್ನು ಬಿಂಬಿಸುವುದಕ್ಕಾಗಿ ಮಾತ್ರ. ಒಬ್ಬ ರಾಜನು ಇನ್ನೊಬ್ಬ ರಾಜನನ್ನು ಸೋಲಿಸಿದಾಗ ಎರಡನೆಯವನ ರಾಜ್ಯಾಧಿಕಾರಕ್ಕೆ ಚ್ಯುತಿ ಬರುವುದು ಮನುವಿಗೆ ಗೊತ್ತು. ಆದುದರಿಂದ ರಾಜ್ಯಾಧಿಕಾರವು ದೈವದತ್ತ ಎಂದು ಅವನು ಹೇಳಿಲ್ಲ. "ರಾಜಾ ಪ್ರತ್ಯಕ್ಷದೇವತಾ ನಾವಿಷ್ಣುಃ ಪೃಥಿವೀಪತಿಃ" ಎಂದು ಮುಂತಾಗಿ ರಾಜನ ದೇವತ್ವದ ಬಗ್ಗೆ ತೆಗೆದ ಉದ್ಗಾರಗಳೆಲ್ಲ ರಾಜಾಜ್ಞೆ ಅನುಲ್ಲಂಘನೀಯ ಎಂಬುದನ್ನು ಸೂಚಿಸುವುದಷ್ಟೇ ತಾತ್ಪರ್ಯ ಎಂದು ತಿಳಿಯಬೇಕು.

ಭಾರತದ ರಾಜನು ವೇದ-ಸ್ಮೃತಿ-ಸದಾಚಾರಗಳಲ್ಲಿ ಕಂಡುಬರುವ ಅರ್ಥ-ಕಾಮಗಳ ವೈಯಕ್ತಿಕ ದೃಷ್ಟಿಯಲ್ಲಿ ಅನಾಸಕ್ತರಾದ ಶುದ್ಧಬುದ್ಧಿಯವರು ಉಸುರಿದ ಅಂಶಗಳನ್ನು ಧರ್ಮವೆಂದು ತಿಳಿದು. ಅವುಗಳನ್ನು ಜಾರಿಗೆ ತರಬೇಕಲ್ಲದೆ, ತಾನೇ ತನ್ನ ಮನಸ್ಸಿಗೆ ಬಂದಂತೆ ಯಾವ ಕಾಯಿದೆಯನ್ನೂ ರಚಿಸಲಾರ ಮತ್ತು ಹಾಗೆ ರಚಿಸಿ ಅದನ್ನು ಪಾಲಿಸಬೇಕೆಂದು ರಾಜಾಜ್ಞೆ ಹೊರಡಿಸಲಾರ—ಎಂಬುದು ರಾಜನ ದೈವದತ್ತ ನಿರಂಕುಶ ಪ್ರಭುತ್ವದ ಕಲ್ಪನೆಗೆ ವಿರುದ್ಧವಾಗಿದೆ. ರಾಜನಿಗೆ ರಾಜ್ಯವೆಲ್ಲ ಸ್ವಂತದ ಜಮೀನಾಗಿರಲಿಲ್ಲ. "ಭಾರತೀಯ ಸಂಸ್ಕೃತಿ" ಎಂಬ ಪ್ರಮಾಣಗ್ರಂಥದಲ್ಲಿ ಡಾ. ಎಸ್. ಶ್ರೀಕಂಠ ಶಾಸ್ತ್ರಿಗಳು ಎತ್ತಿ ತೋರಿಸಿರುವಂತೆ (ಪುಟ ಸಂಖ್ಯೆ: ೨೩೦). ಚಕ್ರವರ್ತಿಯು ಭೂಮಿಗೆಲ್ಲ ಅಧಿಕಾರಿ, ಜನರು ಅವನ ಅನುಮತಿಯಿಂದ ಜೀವಿಸುವರು ಎಂಬ ತತ್ವಕ್ಕೆ ಬ್ರಿಟಿಷರೇ ಮೂಲ; ಪ್ರಜೆಗಳು ರಾಜನ ಪೂರ್ವಾನುಮತಿಯಿಲ್ಲದೆ ಭೂದಾನ ಮಾಡಬಹುದಾಗಿತ್ತು. ಈ ಎಲ್ಲ ಅಂಶಗಳನ್ನೂ ಗಮನಿಸಿಯೇ ಡಾ. ಪಿ. ವಿ. ಕಾಣೆ ಅವರು ಭಾರತದ ರಾಜಪ್ರಭುತ್ವವನ್ನು "ಪರಿಮಿತ ಶಾಸಕತ್ವದ ರಾಜಪ್ರಭುತ್ವ" ಎಂದು ಕರೆದಿದ್ದಾರೆ. ಹೀಗೆ ಮನುವಿನ ಅಭಿಪ್ರಾಯದಂತೆ ರಾಜನ ಪ್ರಶಾಸನಾಧಿಕಾರ ಅಥವಾ ದಂಡಾಧಿಕಾರವು ಕಟ್ಟಳೆಗೆ ಸೀಮಿತ (ಸಾಂಕುಶ)ವಾಗಿತ್ತೆಂಬುದು ತಾತ್ಪರ್ಯ.*

* " Divine in the person of the king, contractive in this functional aspact, hereditary and primogenital in succession under ordinary circumstances and limited in his legislative power."

ಆಡಳಿತದ ಮೂಲತತ್ತ್ವ :

ರಾಜನು ಅತಿಕಠಿಣನಾಗಿ ಉಗ್ರದಂಡನೂ ಆಗಬಾರದು, ಶಿಥಿಲದಂಡನೂ ಆಗಬಾರದು—ಇದುವೇ ದಂಡನೀತಿಯ ಮೂಲತತ್ತ್ವ. "ದಂಡ" ಎಂದರೆ ದಂಡಿಸುವ ಅಥವಾ ಶಿಕ್ಷಿಸುವ ಅಧಿಕಾರ. ರಾಜಶಾಸನಗಳನ್ನು ಮೀರುವವರನ್ನು ಬಲಪ್ರಯೋಗದಿಂದ ಅಂಕೆಯಲ್ಲಿಡುವುದು ಪ್ರಜಾಹಿತಕ್ಕಾಗಿ ರಾಜನು ಮಾಡುವ ಕರ್ತವ್ಯ. (ರಾಜನ) ಸರಕಾರವೆಂದರೆ ಮೂಲತಃ ದುಷ್ಟದಂಡನೆ—ಶಿಷ್ಟ ಪರಿಪಾಲನೆಗಳನ್ನು ಮಾಡಲು ಸ್ಥಾಪಿತವಾದ ಪ್ರಾಧಿಕಾರ ಸಂಸ್ಥೆ. ಭಾರತದ ಸಾಮಾಜಿಕ ನ್ಯಾಯದ ಕಲ್ಪನೆಯು ಇದೇ. ಇದನ್ನೇ ಎಲ್. ಟಿ. ಹಾಬ್‌ಹೌಸ್ ಮಹಾಶಯರು ಇನ್ನೂ ಸ್ಪಷ್ಟವಾಗಿ, ಸರ್ವ ಪ್ರಜಾಹಿತದಲ್ಲಿರುವ ಅನುಪಾತಿಕ ಸಮಾನತೆಯು (Proportionate Equality) ಮೂಲತತ್ತ್ವ—ಎಂದು ಹೇಳಿದ್ದಾನೆ. (ನೋಡಿರಿ: Elements of Social Justice, ಪುಟ ಸಂಖ್ಯೆ : ೧೧೭). ನಿರಪರಾಧಿಗಳಾದ ಪ್ರಜೆಗಳು ತಮಗೆ ಧರ್ಮಬದ್ಧವಾಗಿ ದೊರೆತ ವಿತ್ತ-ಜೀವಿತಗಳನ್ನು ನಿರಾತಂಕವಾಗಿ ಅನುಭವಿಸಲು ರಾಜಪ್ರಶಾಸನವು ಅವಕಾಶ ಕೊಡಬೇಕು. ಅದಕ್ಕೆ ವಿರೋಧ ಮಾಡುವವರು ಸಮಾಜಕಂಟಕರು. ಅವರ ತಪ್ಪಿಗೆ ತಕ್ಕ ಶಿಕ್ಷೆಯನ್ನು ವಿಧಿಸಲು ರಾಜದಂಡವು ಸದಾ ಜಾಗರೂಕವಾಗಿರಬೇಕು. ದಂಡದ ಉಗ್ರತೆ-ಶಿಥಿಲತೆಗಳು ನಿಷ್ಪಕ್ಷಪಾತ ನ್ಯಾಯಕ್ಕೆ ವಿರುದ್ಧವಾದಂಥವುಗಳು ಅರ್ಥಾತ್ ಭ್ರಷ್ಟಾಚಾರಗಳು. ಉಗ್ರದಂಡಕ್ಕೆ ವಾಕ್ಪಾರುಷ್ಯ, ದಂಡಪಾತನ ಮತ್ತು ಅರ್ಥದೂಷಣೆಗಳು ಉದಾಹರಣೆಗಳು.

ಮನುವಿನ ಮಾತಿನಲ್ಲಿ ದಂಡವೇ ಧರ್ಮ. ಅದು ಬ್ರಹ್ಮಸೂತ್ರ. ಯಮನಂತೆ ಅನ್ಯಾಯನಿಷ್ಠುರತೆಯಿಂದ (ದುರ್ಜನರಿಗೆ) ಭಯಂಕರ. ಸರಕಾರದ (ರಾಜನ) ಅರ್ಥನೀತಿಯು ಒಬ್ಬ ವ್ಯಕ್ತಿಯ ಅಥವಾ ಒಂದು ರಾಷ್ಟ್ರದ ನೈತಿಕ ಕ್ಷೇಮಕ್ಕೆ ಭಂಗ ತರುವಂತಿದ್ದರೆ ಅದು ಅನೈತಿಕ, ಪಾಪಕರ—ಎಂದು ಮಹಾತ್ಮ ಗಾಂಧಿಯವರೆಂದದ್ದು ದಂಡದ ಪ್ರಯೋಗವು ನೀತಿ (ಧರ್ಮ) ಸೂತ್ರಗಳಿಂದ ಬದ್ಧ ಎಂಬ ಅಂಶವನ್ನು ಎತ್ತಿ ತೋರಿಸುತ್ತದೆ. ವ್ಯಕ್ತಿಧರ್ಮ-ಸಮಾಜಧರ್ಮಗಳ ಅಂತರಕ್ಕೆ ಅವಿರುದ್ಧವಾಗಿ ಸಮನ್ವಯತೆ ನೋಡಿಕೊಳ್ಳುವುದು ರಾಜಧರ್ಮದ ದಂಡನೀತಿಯ ನ್ಯಾಯಸೂತ್ರ.

ರಾಜನ ವಿದ್ಯಾಭ್ಯಾಸ :

ತ್ರಯಿ, ವಾರ್ತೆ, ದಂಡನೀತಿ, ಆನ್ವೀಕ್ಷಿಕಿ ಮತ್ತು ಆತ್ಮವಿದ್ಯೆಗಳನ್ನು ರಾಜನು ಕಲಿತಿರಬೇಕು—ಎನ್ನುತ್ತಾನೆ ಮನು. ಋಕ್, ಯಜುಸ್, ಸಾಮ, ಅಥರ್ವವೇದಗಳ ಜ್ಞಾನವು ರಾಜನ ಧರ್ಮಜ್ಞತೆಗೆ ಅಗತ್ಯ; ದಂಡನೀತಿಯು ಅವನ ಅರ್ಥಜ್ಞತೆಗೆ ಆವಶ್ಯಕ; ತರ್ಕವಿದ್ಯೆಯು ಯುಕ್ತಾಯುಕ್ತ ವಿವೇಕದಿಂದ ನ್ಯಾಯ, ಸತ್ಯಗಳನ್ನು ಗುರ್ತಿಸಲು ಬೇಕಾದ ಸಾಧನ; ವೇದಾಂತ ಜ್ಞಾನವು ಲಾಭ-ನಷ್ಟ, ಸುಖ-ದುಃಖಗಳಲ್ಲಿ ಹಿಗ್ಗದೆ-ಕುಗ್ಗದೆ ಇರುವ ಸಮತ್ವವನ್ನು ಸಾಧಿಸಿಕೊಳ್ಳಲು ಅಗತ್ಯ. ಇತರ ಶಾಸ್ತ್ರಗಳನ್ನು ರಾಜನು ಓದಿರಬಹುದಾದರೂ ಅವು ಈ ಐದರಷ್ಟು ಅಗತ್ಯವಾದವುಗಳಲ್ಲ.

ಅವಿದ್ಯೆ–ಅಪವಿದ್ಯೆಗಳಿಂದ ಅತ್ಯಂತ ಹೊಣೆಗಾರಿಕೆಯುಳ್ಳ ರಾಜ್ಯಪ್ರಶಾಸನವನ್ನು ಯಾರೂ ಚೆನ್ನಾಗಿ ನಡೆಸಲಾರರು. ಆದುದರಿಂದ ಭಾರತದ ಧರ್ಮಶಾಸ್ತ್ರಕಾರರೂ ಅರ್ಥಶಾಸ್ತ್ರ ಸಂಪ್ರದಾಯದವರೂ ರಾಜನ ವಿದ್ಯಾಭ್ಯಾಸಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದಾರೆ. ವಿದ್ಯೆಯಿಂದ ಜ್ಞಾನ–ಶೀಲಗಳೆರಡೂ ಅಂದು ಲಭ್ಯವಾಗುತ್ತಿದ್ದವು. ರಾಜತ್ವ ಮತ್ತು ಋಷಿತ್ವಗಳೆರಡೂ ಕೂಡಿರಬೇಕೆಂಬುದು ಭಾರತದ ರಾಜಾದರ್ಶ. ಶೀಲ. ಸಂಯಮ. ಶಿಸ್ತುಗಳಲ್ಲಿ ರಾಜನು ಮಾದರಿಯಾಗಿರಬೇಕೆಂಬುದು ಮನುಮತ. ರಾಜನು ಅಜ್ಞಾನಿಯೂ ಕುಶೀಲನೂ ಆದರೆ ಆಡಳಿತವು ಜನಹಿತವನ್ನು ಸಾಧಿಸದು. ದುಷ್ಟತನ–ದಡ್ಡತನಗಳಲ್ಲಿ ಯಾವುದೇ ಒಂದಿದ್ದರೂ ರಾಜ್ಯಭಾರ ಚೆನ್ನಾಗದು. ಆದುದರಿಂದ ರಾಜನು ನಿತ್ಯವೂ ವೃದ್ಧಸೇವೆ ಮಾಡಿ ವಿನಯವಂತಿಕೆಯನ್ನು ಹೆಚ್ಚಿಸಿಕೊಳ್ಳುತ್ತಿರಬೇಕೆಂಬುದನ್ನು ಮನು ಒತ್ತಿ ಹೇಳಿದ್ದಾನೆ: ನಯಜ್ಞತೆಯೊಂದೇ ಸಾಲದು. ವಿನಯಜ್ಞತೆಯೂ ರಾಜನಿಗೆ ಅತ್ಯಗತ್ಯ ಎಂಬುದು ತಾತ್ಪರ್ಯ.

ಮಹಾಭಾರತ–ರಾಮಾಯಣಗಳ ಕಥಾನಾಯಕರು ಯೋಗ್ಯ ರಾಜರ ಮಾದರಿಗಳೆಂಬುದು ಭಾರತದಲ್ಲಿ ಪ್ರಸಿದ್ಧ. ನಮ್ಮ ಪರಂಪರೆಯಲ್ಲಿ ಮಾಂಧಾತ. ನಹುಷ. ಅಂಬರೀಷ. ಸಗರ. ಪೃಥು. ಹೈಹಯ. ಯುಧಿಷ್ಠಿರ. ನಳ. ದಶರಥ. ರಾಮ, ಪರಶುರಾಮ. ಇಕ್ಷ್ವಾಕು. ವಿಭೀಷಣ. ಭರತ. ಉತ್ತಾನಪಾದ ಮತ್ತು ಧ್ರುವ ಎಂಬ ಚಕ್ರವರ್ತಿಗಳು ನಯ–ವಿನಯಗಳನ್ನುಳ್ಳ ಆದರ್ಶ ರಾಜರೆಂದು ಹೆಸರಾಗಿದ್ದಾರೆ. ಪ್ಲೇಟೋ ಕೂಡ ತತ್ತ್ವಜ್ಞಾನಿ ರಾಜನು ಅತ್ಯುತ್ತಮನೆಂದಿರುವುದಿಲ್ಲಿ ಸ್ಮರಣೀಯ. ರಾಜನೂ ಅವನ ಅಧಿಕಾರಿಗಳೂ ಅಜ್ಞರಾದರೆ ಅಥವಾ ಅವಿನೀತರಾದರೆ ಬೇಲಿ ಎದ್ದು ಹೊಲವನ್ನು ಮೇಯುವ ಪರಿಸ್ಥಿತಿ ರಾಜ್ಯದಲ್ಲಿ ತಲೆದೋರುವುದು ಇಂದಿಗೂ ಸತ್ಯ.

ದುರ್ವ್ಯಸನಗಳು :

ರಾಜನೂ ಮಂತ್ರಿಗಳೂ ಕರ್ಮಸಚಿವರೂ ಉನ್ನತಾಧಿಕಾರಿಗಳೂ ಕಾಮಜ ಮತ್ತು ಕ್ರೋಧಜ ದುರ್ವ್ಯಸನಗಳಿಂದ ದೂರವಿರಬೇಕೆಂಬುದು ಮನುಹೃದಯ. ವಾಗ್ದಂಡ ಪಾರುಷ್ಯಗಳೂ ಅರ್ಥದೂಷಣಗಳೂ ರಾಜನಿಂದ ಸಂಭವಿಸುವುದು ಅವನು ದುರ್ವ್ಯಸನದಾಸನಾಗಿ ಇಂದ್ರಿಯ ತೃಪ್ತಿಗಿಳಿದಾಗ ಎಂಬುದು ಸುಲಭವಾಗಿ ಊಹ್ಯ. ಆತ್ಮಸಂಯಮ ಅಥವಾ ಇಂದ್ರಿಯನಿಗ್ರಹವು ದುರ್ವ್ಯಸನಿಗಳಿಗೆ ಅಸಾಧ್ಯ. ಆದುದರಿಂದ ಅವರು ಭ್ರಷ್ಟಾಚಾರಪರಾಯಣರಾಗಿ ಪರಿಣಮಿಸುವುದು ಸಹಜ. ದುಶ್ಚಟದ ದಾಸರ ಮನಶ್ಚಾಂಚಲ್ಯವನ್ನು ಸರ್ವಜ್ಞಕವಿಯು—

"ಹರಿವ ನೀರೆಲೆವಳ್ಳಿ ತುರಗ ಭೃತ್ಯರು ಬಂಡಿ
ಅರಸಿನಾ ಮನವು ಚಲಿಸೆಲ್ಲ ಇವು ಏಳು
ತಿರುಮದವರಿಚ್ಚೆ ಸರ್ವಜ್ಞ"

ಎಂಬ ತ್ರಿಪದಿ ಚೆನ್ನಾಗಿ ವರ್ಣಿಸಿದೆ. 'ಮೂಢಃ ಪರಪ್ರತ್ಯಯನೇಯಬುದ್ಧಿಃ' ಎಂಬ ಕಾಳಿದಾಸೋಕ್ತಿಯು ಅನುಭವಸಿದ್ಧ. ದುರಭ್ಯಾಸದ ದಾಸ್ಯವು ಬುದ್ಧಿವಂತರ ಬುದ್ಧಿ

ಯಾವುದು ಪರೀಕ್ಷೆಯಿಂದ ದುಃಖ್ಯತ್ತದೆ. ರಾಜ. ಅನಂತರ ಅವನ ಮಂತ್ರಿಗಳು. ಆಮೇಲೆ ಅವರ ಕೆಳಗಿನ ಹಿರಿಯ ಅಧಿಕಾರಿಗಳು—ಹೀಗೆ ಒಂದು ವರ್ಗ ಆದ ಮೇಲೆ ಇನ್ನೊಂದು ಹಣ-ದುರ್ನೀತಿ-ಭ್ರಷ್ಟಲೋಲುಪವಾಗುತ್ತ ಹೋದರೆ ಉಗ್ರಾಣಿಯ ವರೆಗಿನ ಕೆಳ ಅಧಿಕಾರಿಗಳೂ "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ" ಎಂಬ ಗೀತೋಕ್ತಿಯಂತೆ ದುರಾಚಾರಿಗಳಾಗುವುದು ಕ್ರಮಪ್ರಾಪ್ತ. ಅನಂತರ ಅವರ ಸಹಕಾರಿಗಳಾಗಲು "ನಾನಾ ಕಾಕರು" ಒಟ್ಟುಗೂಡುತ್ತಾರೆ. ಅದರ ಫಲವಾಗಿ "ರಾಜನಿದ್ದ ದೇಶ ಅರಾಜಕ" ಎಂಬ ಪರಿಸ್ಥಿತಿಯುಂಟಾಗುತ್ತದೆ. ಭ್ರಷ್ಟಾಚಾರದ ಈ ರಶನಾಲಂಕಾರ ಕ್ರಮವನ್ನು ಸರಿಯಾಗಿ ತಿಳಿದಿದ್ದ ಮನುವು ರಾಜನು ಹತ್ತು ಕಾಮಜ ಮತ್ತು ಎಂಟು ಕ್ರೋಧಜ ದುರ್ವ್ಯಸನಗಳಿಂದ ದೂರ ಇರಬೇಕೆಂದು ಸ್ಪಷ್ಟವಾಗಿ ಸಾರಿದ್ದಾನೆ. ಭ್ರಷ್ಟಾಚಾರ ಪರನಾದ ರಾಜನಿಂದ ಹೀಗೆ ಧರ್ಮಗ್ಲಾನಿಯುಂಟಾದರೆ "ಹರ ಕೊಲ್ಲಲ್ ಪರ ಕಾಯ್ವನೇ?" ಎಂದು ಕೇಳುವ ದುರ್ಗತಿ ಸತ್ಪ್ರಜೆಗಳಿಗುಂಟಾಗುತ್ತದೆ. "ಪಂಚತಂತ್ರವು" ಅನುಯಾಯಿಗಳ ಬಗ್ಗೆ—

"ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕಿತಾ
ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಂ"

ಎಂದು ಹೇಳಿದ್ದು ದುರ್ವ್ಯಸನಿಯಾದ ರಾಜನಿಗೆ ಚೆನ್ನಾಗಿ ಅನ್ವಯಿಸುತ್ತದೆ. ಆದುದರಿಂದ ದುರ್ವ್ಯಸನಗಳು ಪ್ರಜೆಗಳಿಗೂ ಹಾನಿಕರವಾದರೂ ಅವರ ಧರ್ಮನಿಯಾಮಕನಾದ ರಾಜನಿಗೆ ಹಿಡಿದರೆ ಅವನಿಗಲ್ಲದೆ ಎಲ್ಲರಿಗೂ ಹೆಚ್ಚಿನ ಪ್ರಮಾಣದಲ್ಲಿ ಹಾನಿಕರವಾಗುತ್ತದೆ—ಎಂಬುದು ಅನುಭವಸಿದ್ಧ.

ಮಂತ್ರಿಗಳ ನೇಮಕ:

ರಾಜನು ತನ್ನ ಅಪ್ಪ-ಅಜ್ಜಂದಿರ ಕಾಲದಿಂದ ಬಂದವರಾಗಿ, ತನ್ನ ಪ್ರಧಾನರ ಮಂತ್ರಿಗಳಾಗಿ ಕೆಲಸ ಮಾಡುತ್ತ ಬಂದವರ ಮಕ್ಕಳು ಶಾಸ್ತ್ರಜ್ಞರೂ ಶೂರರೂ ಕುಲೀನರೂ ಪರೀಕ್ಷಿತರೂ ದಕ್ಷರೂ ಆಗಿದ್ದರೆ ಅವರನ್ನೇ ಮಂತ್ರಿಗಳನ್ನಾಗಿ ತೆಗೆದುಕೊಳ್ಳಬೇಕು—ಎಂದಿದ್ದಾನೆ ಮನು. ವಿಧೇಯತೆ ಮತ್ತು ಯೋಗ್ಯತೆಗಳನ್ನು ಉಳ್ಳವರಿಗೆ ಮೇಲಿನ ಹುದ್ದೆಯನ್ನು ಕೊಡುವ ಸಂಪ್ರದಾಯ ಸನಾತನ. ಪ್ರಾಮಾಣಿಕತೆ ಮತ್ತು ದಕ್ಷತೆಗಳನ್ನು ಉಳ್ಳವರ ನೇಮಕಕ್ಕೆ ಸರಿದೊರೆ. ಆದ್ದರಿಂದ ಈ ಸಂಪ್ರದಾಯ ಸನಾತನಸಂಪ್ರದಾಯವೆನಿಸಿದೆ. ಇತ್ತೀಚೆಗೆ ಭಾರತದ ಜಾಗೃತಾ ಆಯೋಗದ ಕಮಿಷನರರು—ಮದ್ರಾಸು ಸರಕಾರದ ಬಹು ಪ್ರಾಮಾಣಿಕರಾಗಿ ದುಡಿದು ಅನಂತರ ಮೇಲಿನ ಹುದ್ದೆಗೆ ಹೋದ ತನ್ನ ಹಿರಿಯರನೇಕರು ತಮ್ಮ ಹಿಂದಿನ ಪ್ರಾಮಾಣಿಕತೆಯ ಬದಲಾಗಿ ಉನ್ನತಾಧಿಕಾರಿಗಳ ವಿಶ್ವಾಸವನ್ನು ಗಳಿಸಿಕೊಂಡದ್ದನ್ನು ಈಗ ದುರುಪಯೋಗ ಮಾಡಿಕೊಳ್ಳುತ್ತಿರುವುದರಿಂದ ಇಂದು ಭ್ರಷ್ಟಾಚಾರ ಹೆಚ್ಚಾಗುತ್ತಿದೆ—ಎಂದು ಹೇಳಿದ್ದಾರೆ. ದಕ್ಷತೆ-ಪ್ರಾಮಾಣಿಕತೆಗಳೆರಡೂ ಇದ್ದವರು ಇಷ್ಟರಿಂದಲೇ ರಾಜನ ಕೆಲಸ ಮುಗಿಯದು. ರಾಜ್ಯಕ್ಕೆ ಧಕ್ಕೆಯುಂಟಾಗದಂತೆ ನಡೆದು

ಕೊಳ್ಳಲಾರನು. ಈ ಅಂಶವನ್ನು ತಿಳಿದೇ ಮನುವು ಆನುವಂಶಿಕವಾಗಿ ಬಂದ ಪ್ರಾಮಾಣಿಕತೆ ಮತ್ತು ಶಾಸ್ತ್ರಜ್ಞಾನಾದಿ ವಿದ್ವತ್ತೆಗಳೆರಡೂ ಕೂಡಿರುವವರನ್ನು ಅತ್ಯಂತ ಜವಾಬುದಾರಿಯುದಾದ ಮಂತ್ರಿಪದವಿಗಳಲ್ಲಿ ನೇಮಿಸಿಕೊಳ್ಳಬೇಕು ಎಂದು ಹೇಳಿದ್ದು. "ಯೋಗ್ಯವಾದ ನ್ಯಾಯಾಂಗ ಮತ್ತು ಕಾರ್ಯಾಂಗ ಪದ್ಧತಿಗಳನ್ನು ರಚಿಸಿಕೊಳ್ಳದೆ ಹೋದುದರ ಫಲವಾಗಿ ಅನೇಕ ಸಂದರ್ಭಗಳಲ್ಲಿ ರಾಷ್ಟ್ರಗಳೆಷ್ಟೋ ವಿಘಟಿತವಾಗಿ ಹಾಳಾಗಿ ಹೋದದ್ದುಂಟು" ಎಂದು ಪ್ರೊ. ಸತ್ಯನಾಥ ಅಯ್ಯರರೆಂದಿರುವುದು ಮನುಮತವನ್ನು ಮನಸ್ಸಿನಲ್ಲಿಟ್ಟುಕೊಂಡೇ ಎನ್ನಬಹುದು. ಉಭಯಪಕ್ಷಗಳಲ್ಲಿ ಯಾವುದು ಅಯೋಗ್ಯ ಅಥವಾ ಅಪ್ರಾಮಾಣಿಕವೆನ್ನಿಸಿದರೂ ಪ್ರಜಾಹಾನಿಯುಂಟಾಗುವುದು ತಪ್ಪದು.

ವರ್ಣಧರ್ಮ :

ಮನುವು ವರ್ಣಧರ್ಮ. ಆಶ್ರಮಧರ್ಮ. ದೇಶಧರ್ಮ. ಕುಲಧರ್ಮ. ಜಾತಿಧರ್ಮ. ಪಾಷಂಡ ಗಣಧರ್ಮ ಎಂದು ಧರ್ಮದ ಷಡಂಗಗಳನ್ನು ಉಲ್ಲೇಖಿಸಿದ್ದಾನೆ. ಡಾ. ಪಿ. ವಿ. ಕಾಣೆಯವರು—"ವರ್ಣದ ಕಲ್ಪನೆಯು ಕುಲ. ಸಂಸ್ಕೃತಿ. ಚಾರಿತ್ರ್ಯ ಮತ್ತು ವೃತ್ತಿಗಳನ್ನು ಆಧರಿಸಿತ್ತು: ಮೊದಲು ಅದು ಮುಖ್ಯವಾಗಿ ಮನುಷ್ಯನ ನೈತಿಕ ಹಾಗೂ ಬೌದ್ಧಿಕ ಯೋಗ್ಯತೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿತ್ತು. ಆದ್ದರಿಂದ ಅದು ಮಾಡಿದ ಸಮಾಜವರ್ಗೀಕರಣವು ಸ್ವಾಭಾವಿಕವಾಗಿತ್ತು. ಸ್ಮೃತಿಗಳಲ್ಲಿ ಕೂಡ ವರ್ಣದ ಆದರ್ಶವು ಕರ್ತವ್ಯಗಳಿಗೂ ಉನ್ನತತರ ಮಟ್ಟಕ್ಕೂ ಕೊಟ್ಟಷ್ಟು ಪ್ರಾಶಸ್ತ್ಯವನ್ನು ಆನುವಂಶಿಕ ಅಥವಾ ಜನ್ಮಸಿದ್ಧವೆನ್ನಿಸುವ ಹಕ್ಕು ಹಾಗೂ ವಿಶೇಷಾಧಿಕಾರಗಳಿಗೆ ಕೊಟ್ಟಿಲ್ಲ. ಜಾತಿಪದ್ಧತಿಯಾದರೋ ಹುಟ್ಟು ಮತ್ತು ಆನುವಂಶಿಕತೆಗಳಿಗೆ ಸರ್ವಪ್ರಾಧಾನ್ಯವನ್ನು ಕೊಡುತ್ತದೆ: ಅಲ್ಲದೆ ಸಂಬಂಧಿಸಿದ ಕರ್ತವ್ಯಗಳನ್ನು ಮಾಡಲು ಪ್ರಯತ್ನಿಸದೆ ಕೇವಲ ಅಂಥ ಹಕ್ಕುಗಳಿಗೇ ಅಂಟಿಕೊಳ್ಳುವ ಮನೋಧರ್ಮದತ್ತ ಬೆಳೆಯುತ್ತದೆ"—ಎಂದು ಹೇಳಿದ್ದಿಲ್ಲಿ ಗಮನಾರ್ಹ.

ಗೂಢಚಾರರ ಮಹತ್ವ :

"ಚಾರೈಃ ಪಶ್ಯಂತಿ ರಾಜಾನಃ" ಎಂಬ ತತ್ವವನ್ನು ಕೌಟಿಲ್ಯನಂತೆ ಮನುವೂ ದೃಢವಾಗಿ ನಂಬಿದವನು. ರಾಜಪುರುಷರ ಮತ್ತು ವಿವಿಧ ವೃತ್ತಿಗಳನ್ನು ಹಿಡಿದ ಪ್ರಜೆಗಳ ದಕ್ಷತೆ–ಪ್ರಾಮಾಣಿಕತೆಗಳನ್ನು ಕಾಲಕಾಲಕ್ಕೆ ಅರಿತುಕೊಳ್ಳಲು ರಾಜನಿಗೆ ಇರುವ ಒಂದೇ ಒಂದು ಅಭೇದ್ಯ ಯೋಜನೆಯೆಂದರೆ ಗೂಢಚಾರರನ್ನು ನಿಯಮಿಸಿಕೊಳ್ಳುವ ಪದ್ಧತಿ. ಅವರು ರಾಷ್ಟ್ರದ ಒಳಗೂ ಅಗತ್ಯ. ಹೊರಗೂ ಅಗತ್ಯ ಎನ್ನಿಸಿದವರು. ಅವರ ದಕ್ಷತೆ–ಪ್ರಾಮಾಣಿಕತೆಗಳನ್ನು ಅತ್ಯಂತ ಜಾಗರೂಕತೆಯಿಂದ ಕಾಯ್ದುಕೊಂಡಿರುವುದು ರಾಜನ ರಾಜ್ಯಭಾರದಕ್ಷತೆಯ ಮೂಲಾಧಾರ. ಅವರ ಸ್ವಾಮಿನಿಷ್ಠೆಯು ಅಭೇದ್ಯವಾಗಿರಬೇಕಲ್ಲದೆ, ಅವರ ಕಾರ್ಯಕೌಶಲವೂ ಅಸಾಧಾರಣವಾಗಿರಬೇಕು. ಈ ಸಂದರ್ಭದಲ್ಲಿ ರಾಜನೇ ಅಪ್ರಾಮಾಣಿಕನಾಗಿ ಅವರ ಸೇವೆಯನ್ನು ದುರುಪಯೋಗ ಮಾಡಿಕೊಂಡರೇನು

ಗತಿ? ಎಂದು ಯಾರಾದರೂ ಕೇಳಬಹುದು. ಅಂಥ ಸಂದರ್ಭದಲ್ಲಿ ಅವನ ಮಂತ್ರಿ ಮಂಡಲ ಜನರು ಸಂಘಟಿತರಾಗಬೇಕು ಎಂಬುದೊಂದೇ ಉತ್ತರ.

ರಾಜನ ವಿವಿಧ ಕರ್ತವ್ಯಗಳಲ್ಲಿ ಗೂಢಚಾರಣೆ ಅತ್ಯಂತ ಹೆಚ್ಚಿನದು. ಸ್ವ-ಪರ ರಾಷ್ಟ್ರಗಳ ರಾಜಪುರುಷರ ಮತ್ತು ಪ್ರಜೆಗಳ ವರ್ತನೆಗಳನ್ನು ಅವನಿಗೆ ಗೊತ್ತಾಗುವಂತೆ ತಿಳಿಸಬೇಕೆಂದು. ಆ ಮೂಲಕ ತನ್ನ ರಾಜ್ಯನೀತಿಯ ಬಗೆಗೆ ಅನುಸರಿಸಬೇಕಾದ ನೀತಿಗಳಲ್ಲಿ ಮತ್ತು ಕ್ರಮಗಳಲ್ಲಿ ತಕ್ಕ ಬದಲಾವಣೆಗಳನ್ನು ರಾಜನು ಮಾಡಿಕೊಳ್ಳುವುದು ಅಗತ್ಯ. ಗೋಪ್ಯವಿಷಯವನ್ನರಿಯುವ ಬಗೆಗೆ ಗೂಢಚಾರರ ಬಲವಾಗಿಲ್ಲದ ರಾಷ್ಟ್ರವು ಅಧೋಗತಿಗಿಳಿಯುವುದು ನಿಶ್ಚಿತ. ಜಾಗತಿಕ ಮಹಾಯುದ್ಧಗಳ ಕಾಲದಲ್ಲಿ ಇಂಗ್ಲೆಂಡ್, ಅಮೇರಿಕ, ಜರ್ಮನಿ ಮತ್ತು ರಷಿಯಾಗಳು ತಮ್ಮ ಗೂಢಚಾರ ಪಡೆಗಳಿಗೆ ಹೆಸರಾದವು.

ಕಾಪಟಿಕ, ಉದಾಸ್ಥಿತ, ಗೃಹಪತಿ, ವೈದೇಹಿಕ, ತಾಪಸ ಎಂಬ ಪಂಚವರ್ಗಗಳನ್ನು ಗೂಢಚಾರ ಸಂಘಟನೆಯಲ್ಲಿ ನಾವು ನೋಡಬಹುದು. "ಸರ್ವೋಪಿ ದಂಡನೀತೌ ಲೋಕಃ ಮೂಲರ್ಥೋ ಹಿ ರಾಜತಂತ್ರ" ಎಂಬ ಅವನ ಅಭಿಪ್ರಾಯವನ್ನು ಅರ್ಥೈಸಬೇಕು. ಆ ಅಭಿಪ್ರಾಯ ಭಾರತದ ಸಂವಿಧಾನದಲ್ಲಿ ಪ್ರಜಾಪ್ರಭುತ್ವದ ರೀತಿಗೆ ಈಗಲೂ ಉಳಿದಿದೆ. ಅದರಿಂದ ಆಡಳಿತ ದಕ್ಷತೆಗೆ "ಜಾಗ್ರತಾ ಆಯೋಗ" ಹುಟ್ಟಿ ಹುಟ್ಟಿ ಜಾಗರಿತವಾಗಿ ಮತ್ತು ಜಾಗರೂಕ ಕರ್ತವ್ಯನಿರ್ವಹಣೆ ಮಾಡಬೇಕಾದುದು ಇಂದಿನ ಕಾಲಕ್ಕಷ್ಟೇ ಸೀಮಿತವಲ್ಲ. ಅನಾಗರಿಕರೂ ಅನುಸರಿಸಬೇಕಾದ ಪದ್ಧತಿ. ಅಧಿಕಾರದ ಅನುಪಯೋಗ-ದುರುಪಯೋಗಗಳನ್ನು ತಡೆಯಲು ಅದೊಂದೇ ತಾರಕೋಪಾಯ.

ಧರ್ಮಯುದ್ಧ :

ಧರ್ಮಯುದ್ಧ ಪದ್ಧತಿಯು ಹಿಂದೆ ಬಹಳ ದೇಶಗಳಲ್ಲಿತ್ತು. ಇಂದಿನ ವಿಶ್ವಶಾಂತಿ ಕರಾರು ಒಪ್ಪಂದಗಳ ಹಿಂದೆ ಧರ್ಮದ ಪ್ರೇರಣೆಯಿದೆ. ಅಂತಾರಾಷ್ಟ್ರೀಯ ನಿಯಮ ಗಳನ್ನು ಮೀರಿದ ಯುದ್ಧ ನಡೆದದ್ದು ಎರಡನೆಯ ಜಾಗತಿಕ ಮಹಾಯುದ್ಧದಲ್ಲಿ. ಗುಪ್ತಯುದ್ಧ, ವಿಷಾನಿಲಯುದ್ಧ, ಅಣುಬಾಂಬು ಆಯುಧ, ಮುಂತಾದವುಗಳ ಬಳಕೆ ಯನ್ನು ನಿಷೇಧ ಮಾಡಿದ್ದು ಮನುಷ್ಯನ ಮಾನವೀಯತೆಗೆ ಸಾಕ್ಷಿಯಾಗಿದೆ. ಯುದ್ಧದ ಹೇಯತೆಯನ್ನು ಅವನು ತೋರಿಸಿರುವುದು ದ್ರುಪದಾದಿ ಸತ್ಯವನ್ನು ಧರಿಸಿದೆ. "ಸ್ವಧರ್ಮೋ ರಾಜಪುತ್ರಃ" ಎಂಬುದು ಅವನಿಗೆ ಗೊತ್ತು. ಮತ್ತುರಿರುವುದರಿಂದಲೇ ಅವರನ್ನು ನಡೆಸಲು ಸರಕಾರ ಹೇಗೆ ಅಗತ್ಯವೋ ಹಾಗೆ ಅಕ್ರಮಣಕಾರಿ ಸರಕಾರಗಳಿಂದ ಪರರ ಒಂದು ರಾಷ್ಟ್ರ ರಕ್ಷಣಾರ್ಥವಾಗಿ ಯುದ್ಧವಾದರೂ ಯುದ್ಧನೀತಿ ತಿಳಿಯುವ ನಾವು ಕೊಂಡೇ ಇರಬೇಕಾಗುತ್ತದೆ. ಮಾರ. ಶರಣಾಗತ. ಹಿರಿಯ ಬಿಡುವ ಹೇತು. ಸ್ತ್ರೀ. ವಿಪ್ರ, ಮಠ. ಶಿಶು. ವೃದ್ಧ. ಅಶಕ್ತ. ಧರ್ಮ. ಅರ್ಧ. ಮಹಾಸ್ತ್ರ. ಅವನ್ನು ದಂಡ ನೀತಿ ಶಸ್ತ್ರ ಪ್ರಯೋಗ ಮಾಡಬಾರದೆಂದು ಮನುವು ಹೇಳಿದ್ದಾನೆ. ಇದು ಇಂದಿಗೂ ಮಾನ್ಯವಾಗಿದೆ.

ಯುದ್ಧವನ್ನು ಕಾಣುವುದು ನಿರಂತರವಾಗಿರುವುದು ನಮಗೆ ಪ್ರತ್ಯಕ್ಷವಾಗುತ್ತದೆ

ರನ್ನು ದೇಶರಕ್ಷಣೆಗಾಗಿ ಹೋರಾಡಲು ಪ್ರೇರಿಸುತ್ತದೆ—ಎಂಬುದು ಹಾಬ್‌ಹೌಸ್ ಮಹಾಶಯನ ಮತ. ಸಮಾಜದಲ್ಲಿ ಕ್ಷಾತ್ರಕ್ಕೆ ಗೌರವ ಕಡಿಮೆಯಾದಾಗ. ವೈಶ್ಯಸಾಧನೆಗೆ ಅತಿ ಮಹತ್ವ ಉಂಟಾದಾಗ, ರಾಜ್ಯದಲ್ಲಿ ಅಂತಃಕ್ಷೋಭೆ ಮತ್ತು ಅಂತಾರಾಜ್ಯ ಕಲಹಗಳ ಮೂಲಕ ಜನಶೋಷಣೆಗಳು ಪ್ರಾರಂಭವಾಗುತ್ತವೆ. ವೇದ. ಸ್ಮೃತಿ. ಸದಾಚಾರ. ಶುದ್ಧ ಬುದ್ಧಿಮತ್ತೆಗಳುಳ್ಳ ವಿದ್ವಾಂಸರಿಂದ ಸಾರ್ವಜನಿಕ ಸಭಾವಳಿಗಳು ಬೆಳೆದು ಬಂದದ್ದೂ ಇಲ್ಲಿ ಹೆಚ್ಚು. ಧರ್ಮಯುದ್ಧ ನೀತಿಯ ಆದರ್ಶಗಳನ್ನು ಮನು ಹೇಳಿದ್ದು ಇತರ ಆದರ್ಶಗಳಂತೆಯೇ ಶ್ರೇಷ್ಠರಾದ ಋಷಿಮುನಿಗಳ ಉಪದೇಶದ ಸಾಂಪ್ರದಾಯಿಕ ಮೂಲ ಆಕರಗಳನ್ನಾಧರಿಸಿಯೇ ಎಂಬುದು ಐತಿಹಾಸಿಕ ಸತ್ಯ. ಬೌದ್ಧರ ಪಂಚಶೀಲವು ಮನೂಕ್ತ ಪಂಚ ಸಾಮಾನ್ಯ ಧರ್ಮಗಳನ್ನಾಧರಿಸಿರುವುದು ಸ್ಪಷ್ಟ. ಅಹಿಂಸಾತತ್ವವು ಪಂಚ ಶಾಶ್ವತ (ಸಾಮಾನ್ಯ) ಧರ್ಮಗಳಲ್ಲಿ ಮೊದಲನೆಯದು. ಅದಕ್ಕೆ ಉತ್ಸರ್ಗದ ಸ್ಥಾನ: ಯುದ್ಧಕ್ಕೆ ಅಪವಾದದ ಸ್ಥಾನ.

ಧರ್ಮಯುದ್ಧದಲ್ಲಿ ಸಾಯುವ ರಾಜನಿಗೆ ಸ್ವರ್ಗ ಸಿಗುವುದೆಂದ ಮನುವಿನ ಮಾತು ಅಂದಿನ ಸಮಾಜವು ಯುದ್ಧವೀರನಿಗೆ ಸಾಕಷ್ಟು ಗೌರವ ನೀಡುತ್ತಿತ್ತೆಂಬುದನ್ನು ಸೂಚಿಸುತ್ತದೆ. ಯುದ್ಧದಿಂದ ಸೋತು ಓಡಿಬರಬಾರದೆಂಬ ಮಾತೂ ಅದೇ ಪ್ರಕಾರ ಅಂದಿನ ಯುದ್ಧಧರ್ಮ. ಅದು ನಾಗರಿಕತೆಯ ಔನ್ನತ್ಯಕ್ಕೊಂದು ನಿದರ್ಶನ. ನೀತಿ ಬಾಹಿರ ಯುದ್ಧದಲ್ಲಿ ಮಾತ್ರ ಪಲಾಯನವು ಪರಾಕ್ರಮವಾದೀತು. ಗೆಲುವಿಗಾಗಿ ಗೆಲುವಲ್ಲ: ಅರ್ಥಕ್ಕಾಗಿ ಧರ್ಮವಲ್ಲ: ಧರ್ಮಬಾಹಿರವಾದ ಗೆಲುವೂ ಅರ್ಥಲಾಭವೂ ಅಧರ್ಮ. ಅನಾಗರಿಕ. ಅಸಂಸ್ಕೃತ—ಎಂದು ಸಾರಿದ ನಾಗರಿಕತೆಯನ್ನು ಮನು ಪ್ರತಿನಿಧಿಸುವುದಿಲ್ಲಿ ಸುವೇದ್ಯ.

ರಾಜನ ಅರ್ಥಶಾಸ್ತ್ರ :

ರಾಜನು ಅರ್ಥಾರ್ಜನೆ ಮಾಡುವುದು (ಕಾಳಿದಾಸನ ಮಾತಿನಲ್ಲಿ "ಅಪ್ಯರ್ಥ-ಕಾಮೌ ತಸ್ಯಾಸ್ತಾಂ ಧರ್ಮ ಏವ ಮನೀಷಿಣಃ") ಪ್ರಜಾಹಿತಸಾಧನೆಗಾಗಿಯೇ ಎಂಬುದು ಗೃಹೀತ. ಯೋಗ. ಕ್ಷೇಮ. ವೃದ್ಧಿ. ವ್ಯಯಗಳು ಭಾರತೀಯ ಅರ್ಥಶಾಸ್ತ್ರದ ಚತುರಂಗ. ಇಲ್ಲದ್ದನ್ನು ಪಡೆಯುವುದು ಯೋಗ: ಪಡೆದದ್ದನ್ನು ರಕ್ಷಿಸಿಕೊಳ್ಳುವುದು ಕ್ಷೇಮ: ರಕ್ಷಿತವನ್ನು ಬೆಳೆಯಿಸಿಕೊಳ್ಳುವುದು ವೃದ್ಧಿ: ಹಾಗೆ ಅಭಿವೃದ್ಧಿ ಮಾಡಿಕೊಂಡ ಅರ್ಥವನ್ನು (ಐಶ್ವರ್ಯವನ್ನು) ಸದ್ವಿನಿಯೋಗ ಮಾಡುವುದು ವ್ಯಯ. ಮನುವಿನ ಪ್ರಕಾರ ಕರಾಕರಣೆಯು ರಾಜಾದಾಯದ ಧರ್ಮಬದ್ಧವಾದ ಮೊದಲನೆಯ ಆಕರ. ಅಧರ್ಮ ಮಾರ್ಗಗಳಿಂದ ರಾಜನು ತನ್ನ ಬೊಕ್ಕಸವನ್ನು ತುಂಬಿಕೊಳ್ಳಕೂಡದು. ಆದರೆ ಆ ಯಾವ ಕರವೂ ಪ್ರಜೆಗಳ ಶೋಷಣೆಗೆ ಕಾರಣವಾಗುವಷ್ಟಿರಬಾರದು. ಅರ್ಥಸಮಾವರ್ತನೆಯ ಕರ್ಮ ಸಚಿವನು ಅರ್ಥ (ವಿತ್ತ ಅಥವಾ ದ್ರವ್ಯ) ಮಂತ್ರಿ. ಜಮೀನುಗಳ ಮೇಲಿನ ಕಂದಾಯ. ನೀರಾವರಿಯ ಮೇಲಿನ ತೆರಿಗೆ. ಸರಕಾರಿ ವ್ಯಾಪಾರಗಳಿಂದ ಬರುವ ಲಾಭ, ಸುಂಕಗಳು. ವಾರಸುದಾರರಿಲ್ಲದೆ ಸತ್ತುಹೋದವರ ಆಸ್ತಿಗಳು. ಸ್ವಾಧೀನ

ಪಡಿಸಿಕೊಳ್ಳುವುದು. ಮತ್ತು ಗೆದ್ದ ರಾಜರಿಂದ ಕಪ್ಪ ಕಾಣಿಕೆಗಳನ್ನು ಸ್ವೀಕರಿಸುವುದು— ರಾಜಾದಾಯದ ಪ್ರಮುಖ ಆಕರಗಳಾಗಿದ್ದವು.

"ಅಲಬ್ಧಮಿಚ್ಛೇದ್ದಂಡೇನ" ಎಂಬ ಮಾತಿನಲ್ಲಿ ಮನುವು ದುಷ್ಟ ರಾಜರನ್ನು ದಂಡದಿಂದ ದಮನ ಮಾಡಿ ಅವರಿಂದ ಕಪ್ಪ ಕಾಣಿಕೆಗಳನ್ನು ತರುವುದು ಧರ್ಮವೆಂಬುದನ್ನು ಸೂಚಿಸಿದ್ದಾನೆ. ತನ್ನ ಪ್ರಜೆಗಳು ಸ್ವಧರ್ಮನಿರತರಾಗಿರುವಂತೆ ನೋಡಿಕೊಳ್ಳುವಷ್ಟೇ ಇತರ ರಾಜರೂ ಧರ್ಮನಿರತರಾಗಿರುವಂತೆ ನೋಡಿಕೊಳ್ಳುವುದು ರಾಜಧರ್ಮ. ಇದರ ಪಾಲನೆಯಿಂದ ಅರ್ಥಲಾಭ.

ರಾಜಾದಾಯದ ವೃದ್ಧಿಗೆ ವ್ಯಾಪಾರ. ದುರ್ವ್ಯಯ ನಿರೋಧ. ಮತ್ತು ರಾಜೋದ್ಯಮಗಳು ಗಣ್ಯ ಸಾಧನಗಳೆಂಬುದೂ ಮನೂಕ್ತ. ರಾಜನ ಕೋಶಬಲವೂ ರಕ್ಷಣಾಬಲದ ಸಂವರ್ಧನೆಗೆ ಆಧಾರವೆಂಬುದು ಸರ್ವವೇದ್ಯ.

ಮನುಯುಗದ ರಾಜೋದ್ಯಮಗಳಲ್ಲಿ ಸೇತುವೆ ನಿರ್ಮಾಣ. ಜಲಯಾನ ವ್ಯವಸ್ಥೆ, ಕೃಷಿ. ಹುಲ್ಲುಗಾವಲಿನ ಪಾಲನೆ. ಗೋರಕ್ಷೆ ಮತ್ತು ಆನೆಗಳನ್ನು ಹಿಡಿಯುವುದು ಮುಖ್ಯವಾಗಿದ್ದವು.

ಅರಣ್ಯೋತ್ಪನ್ನಗಳಾದ ನಾರು. ಮಾಂಸ. ಜೇನು. ಗಂಧದ ಮರ, ಗಂಧದೆಣ್ಣೆ. ಹಣ್ಣಿನ ರಸ. ಹೂವುಗಳು. ಕಂದಮೂಲಗಳು. ಸೊಪ್ಪು. ತರಕಾರಿ. ಹುಲ್ಲು. ಚರ್ಮ. ಬೇಳೆಕಾಳುಗಳು ಮುಂತಾದವುಗಳ ಮೇಲೆ ಸುಂಕವನ್ನು ಆಕರಿಸಲಾಗುತ್ತಿತ್ತು. ಕಲ್ಲು. ಮಣ್ಣು ಮತ್ತು ಲೋಹಗಳಿಂದ ಮಾಡಿದ ಪಾತ್ರೆ-ಪಡಗ ಮೊದಲಾದ ವಸ್ತುಗಳ ಮಾರಾಟದ ಮೇಲೆ ಕರಗಳನ್ನು ಹೇರಲಾಗುತ್ತಿತ್ತು. ಆದರೆ ಈ ಯಾವ ಸುಂಕ ಅಥವಾ ಕರವೇ ಆಗಲಿ. ಕೊಡುವ ಪ್ರಜೆಗೆ ಭಾರವೆನ್ನಿಸುವಷ್ಟಿರಲಿಲ್ಲ. ಹಾಗೆ ಭಾರವೆನ್ನಿಸುವಂತಾದರೆ ಕರೆಯುವ ದನದ ಕೆಚ್ಚಲನ್ನು ಕೊಯ್ದಂತಾಗಿ ರಾಷ್ಟ್ರವು ದುರ್ಗತಿಗೀಡಾಗುವುದು.

ರಾಜಮಂಡಲ :

ಹನ್ನೆರಡು ರಾಜರ ಗುಂಪಿಗೆ "ರಾಜಮಂಡಲ" ಎಂದು ಹೆಸರು. ಇವರಲ್ಲಿ ಒಬ್ಬೊಬ್ಬ ರಾಜನಿಗೆ ಐದೈದು "ದ್ರವ್ಯ ಪ್ರಕೃತಿಗಳು" ಇರುತ್ತವೆ. ಅಮಾತ್ಯ. ಮಂತ್ರಿ. ರಾಷ್ಟ್ರ. ದುರ್ಗ. ಮತ್ತು ದಂಡಗಳು ದ್ರವ್ಯಪ್ರಕೃತಿಗಳು. ರಾಜಮಂಡಲದ ೧೨ ಜನ ರಾಜರೂ ದ್ರವ್ಯ ಪ್ರಕೃತಿಗಳಿಗೆ ಮೂಲ. ರಾಜಮಂಡಲದಲ್ಲಿ ಮಧ್ಯಮ. ವಿಜಿಗೀಷು. ಉದಾಸೀನ ಮತ್ತು ಶತ್ರುಗಳು ಮೂಲಪ್ರಕೃತಿಗಳು: ಮಿತ್ರ. ಅರಿಮಿತ್ರ. ಮಿತ್ರಮಿತ್ರ. ಅರಿಮಿತ್ರಮಿತ್ರ. ಪಾರ್ಷ್ಣಿಗ್ರಾಹ. ಆಕ್ರಂದ. ಪಾರ್ಷ್ಣಿಗ್ರಾಹಾಸಾರ ಮತ್ತು ಆಕ್ರಂದಾಸಾರರೆಂಬ ರಾಜರು ಶಾಖಾಪ್ರಕೃತಿಗಳು.

ರಾಜಮಂಡಲ

೪ ಮೂಲ ಪ್ರಕೃತಿಗಳು

೮ ಶಾಖಾ ಪ್ರಕೃತಿಗಳು

ಈ ೧೨ ರಾಜಪ್ರಕೃತಿಗಳ ದ್ರವ್ಯಪ್ರಕೃತಿಗಳ ಮೊತ್ತ ೬೦. ಉಭಯ ವರ್ಗಗಳ ಪ್ರಕೃತಿಜಾತಿಗಳ ಒಟ್ಟು ಮೊತ್ತ ೭೨.

	ಅರಿಮಿತ್ರಮಿತ್ರ	
	ಮಿತ್ರಮಿತ್ರ	
	ಅರಿಮಿತ್ರ	ಉದಾಸೀನ
	ಮಿತ್ರ	
ಮಧ್ಯಮ	ಅರಿ (ಶತ್ರು)	
	ವಿಜಿಗೀಷು	
	ಪಾರ್ಷ್ಣಿಗ್ರಾಹ	
	ಆಕ್ರಂದ	
	ಪಾರ್ಷ್ಣಿಗ್ರಾಹಾಸಾರ	
	ಆಕ್ರಂದಾಸಾರ	


ದಂಡ ಯಾತ್ರೆಗೆ ಹೊರಟವನು ವಿಜಿಗೀಷು. ಅವನ ರಾಜ್ಯದ ಹಿಂದು. ಮುಂದು. ಎಡ. ಬಲಗಳ ಭೌಗೋಲಿಕ ದಿಕ್ಕುಗಳನ್ನಾಧರಿಸಿ ಉಳಿದ ೧೧ ರಾಜರ ರಾಜ್ಯಸ್ಥಾನಗಳನ್ನಿಲ್ಲಿ ಚಿತ್ರಿಸಲಾಗಿದೆ. ಸ್ಥಾನವಿಲ್ಲಿ ವಿಜಿಗೀಷುವಿನ ದೃಷ್ಟಿಯಲ್ಲಿ ಇತರ ರಾಜರ ಶತ್ರುತ್ವ-ಮಿತ್ರತ್ವ ಮುಂತಾದ ಸಂಬಂಧಗಳನ್ನು ನಿರ್ಣಯಿಸುತ್ತದೆ.

ಪಾರ್ಷ್ಣಿಗ್ರಾಹ ರಾಜನು ವಿಜಿಗೀಷುವಿಗೆ ಹಿಂದಿನಿಂದ ತೊಂದರೆ ಕೊಡಬಲ್ಲ: ಅವನ ಸ್ಥಾನವೇ ಅಂಥದು. ಅರಿ ಅಥವಾ ಶತ್ರುರಾಜನು ತನ್ನ ರಾಜ್ಯದ ಸ್ಥಾನದಿಂದ ಮುಂದಿನಿಂದ ತೊಂದರೆ ಕೊಡಬಲ್ಲ. ಆಕ್ರಂದ ರಾಜನೂ ಮಿತ್ರರಾಜನೂ ವಿಜಿಗೀಷುವಿಗೆ ತೊಂದರೆ ಕೊಡುವ ಅರಿ ಹಾಗೂ ಪಾರ್ಷ್ಣಿಗ್ರಾಹರೆಂಬ ರಾಜರನ್ನು ತಡೆಯಬಲ್ಲ ಸ್ಥಾನಗಳಲ್ಲಿದ್ದಾರೆ. ಪಾರ್ಷ್ಣಿಗ್ರಾಹಾಸಾರನೆಂಬ ರಾಜನೂ ಅರಿಮಿತ್ರನಾಗಿರುವ ರಾಜನೂ ವಿಜಿಗೀಷುವಿಗೆ ಹಿಂದೆ ಮತ್ತು ಮುಂದೆ ಎದುರೊಡ್ಡಬಲ್ಲ ಸ್ಥಾನಗಳಲ್ಲಿದ್ದಾರೆ: ಆಕ್ರಂದಾಸಾರನೂ ಅರಿಮಿತ್ರಮಿತ್ರನೂ ಅವರನ್ನು ಅನುಕ್ರಮವಾಗಿ ತಡೆಯಬಲ್ಲ ದಿಕ್ಕುಗಳಲ್ಲಿ ಹಾಗೂ ಸ್ಥಾನಗಳಲ್ಲಿ ರಾಜ್ಯವುಳ್ಳವರಾಗಿದ್ದಾರೆ. ಅರಿರಾಜನೂ ವಿಜಿಗೀಷುರಾಜನೂ ಒಟ್ಟಾದರೆ ಅವರಿಗೆ ಸಹಾಯ ಮಾಡಬಲ್ಲ ಮತ್ತು ಅವರು ಬೇರೆಯಾದರೆ ಅವರನ್ನು ನಿಗ್ರಹಿಸಬಲ್ಲ

ರಾಜ್ಯಸ್ಥಾನವು ಮಧ್ಯಮರಾಜನದು. ಹಾಗೇ ವಿಜಿಗೀಷು—ಮಧ್ಯಮರು ಒಟ್ಟಾದರೆ ಅವರನ್ನು ಎದುರಿಸಬಲ್ಲ ಮತ್ತು ಬೇರೆಯಾದರೆ ಅವರನ್ನು ಸೋಲಿಸಬಲ್ಲ ರಾಜ್ಯಸ್ಥಾನವು ಅವರಿಂದ ದೂರದಲ್ಲಿರುವ ಉದಾಸೀನ ರಾಜನದು. ಈ ಪ್ರಕಾರ, ಮಧ್ಯಮ ರಾಜ್ಯಾಧಿಪತಿಯೂ ಉದಾಸೀನ ರಾಜ್ಯಾಧಿಪತಿಯೂ ಸಂದರ್ಭಾನುಸಾರವಾಗಿ ವಿಜಿಗೀಷುವಿಗೆ ಶತ್ರುಗಳೂ ಆದಾರು, ಮಿತ್ರರೂ ಆದಾರು.

ಉಪಾಯ ಮತ್ತು ಷಡ್ಗುಣಗಳು :

ರಾಜತಂತ್ರದಲ್ಲಿ ನಾಲ್ಕು ಉಪಾಯಗಳು ಮತ್ತು ಆರು ಗುಣಗಳು ಮನುಸ್ಮೃತಿ. ಸಾಮ, ದಾನ, ಭೇದ, ದಂಡಗಳು ಚತುರುಪಾಯಗಳಾದರೆ—ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಂಶ್ರಯಗಳು ಷಡ್ಗುಣಗಳು. ವಿದೇಶ ಸಂಬಂಧಗಳಲ್ಲಿ ಈ ಉಪಾಯ ಮತ್ತು ಷಡ್ಗುಣಗಳ ಬಳಕೆ ಅತ್ಯವಶ್ಯಕ; ಸ್ವದೇಶ ರಕ್ಷಣೆಗೆ ರಾಜತಂತ್ರವು ಇಂದಿಗೂ ಬಿಡಲಾರದ ಸಾಧನವಾಗಿದೆ.



ಹಗೆಗೆ ಕೆಲಮಟ್ಟಿಗೆ ಪ್ರಿಯವಾಗುವಂತೆ ನಡೆದುಕೊಳ್ಳುವುದು ಸಾಮೋಪಾಯ. ಅದರಿಂದ ಒಬ್ಬ ರಾಜನಿಗೆ ತನ್ನ ಪ್ರಜೆಗಳನ್ನು ವೈರಿಯ ಹಿಂಸೆಯಿಂದ ಕೆಲವೊಮ್ಮೆ ತಪ್ಪಿಸಲು ಸಾಧ್ಯವಾಗುತ್ತದೆ. ಅದರಿಂದ ವೈರಿಯು ಬಗ್ಗದಿದ್ದರೆ ದಾನೋಪಾಯದ ಪ್ರಯೋಗವನ್ನು ಮಾಡಬೇಕು. ದಾನವೆಂದರಿಲ್ಲಿ ಲಂಚ. ಶತ್ರುವಿಗೆ ಕೈ ಬೆಚ್ಚಗೆ ಮಾಡಿ ಅವನು ರಾಜ್ಯದ ಮೇಲೆ ದಾಳಿ ಮಾಡದಂತೆ ಸುಮ್ಮನಿರಿಸುವುದು ಎರಡನೆಯ ಉಪಾಯ. ಅದೂ ಫಲಿಸದಿದ್ದರೆ ಹಗೆಯ ಪಕ್ಷದಲ್ಲಿ ಒಳಜಗಳವನ್ನುಂಟುಮಾಡುವುದು ಮೂರನೆಯದಾದ ಭೇದೋಪಾಯ. ಒಡೆದಾಳುವ ಈ ಉಪಾಯದಿಂದ ಶತ್ರುರಾಜನು ದುರ್ಬಲನಾಗುವುದೂ ಆ ಮೂಲಕ ಅವನು ನಮ್ಮ ರಾಜ್ಯದ ಮೇಲೆ ದಂಡೆತ್ತಿ ಬರಲಾರದಂತಾಗುವುದೂ ಸಂಭವನೀಯ. ಈ ಉಪಾಯವೂ ಯಶಸ್ವಿಯಾಗದೆ ಹೋದರೆ, ನಾಲ್ಕನೆಯದಾದ ದಂಡೋಪಾಯವನ್ನು ಪ್ರಯೋಗಿಸಬೇಕು—ಅರ್ಥಾತ್ ಯುದ್ಧ ಮಾಡಿ ಹಗೆಯನ್ನು ಸೋಲಿಸಬೇಕು.

ರಾಜ್ಯರಕ್ಷಣೆಗಾಗಿ ಸಮರ್ಥ ರಾಜನು ಕೊನೆಯದಾಗಿ ಯುದ್ಧ ಮಾಡಬೇಕೆಂದಿರುವುದು—ಅನಿವಾರ್ಯವಾದರೆ ಮಾತ್ರ ಯುದ್ಧ ಮಾಡಬೇಕು, ಇಲ್ಲವಾದರೆ ಮೊದಲ ಮೂರು ಉಪಾಯಗಳನ್ನೇ ಪ್ರಯೋಗಿಸಬೇಕು—ಎಂಬ ಅರ್ಥವನ್ನು ಕೊಡುತ್ತದೆ.

ಆದುದರಿಂದ ಆದಷ್ಟು ಮಟ್ಟಿಗೆ ಯುದ್ಧವನ್ನು ತಪ್ಪಿಸಬೇಕು—ಎಂಬುದು ಮನುವಿನ ಆಶಯ. ಏಕೆಂದರೆ, ಯುದ್ಧವು ಒಂದು ಹಿಂಸಾಕಾರ್ಯ: ಸ್ವಪಕ್ಷ-ಪರಪಕ್ಷಗಳೆರಡರಲ್ಲೂ ವಿತ್ತ-ಜೀವಿತಗಳ ಹಾನಿ ಅದರಿಂದ ಸಂಭವಿಸುತ್ತದೆ.

ಷಡ್ಗುಣಗಳಲ್ಲಿ ಮೊದಲನೆಯದು ಸಂಧಿ. ಅದು ದ್ವಿವಿಧ: (೧) ಸಮಾನ ಯಾನ ಕರ್ಮ ಮತ್ತು (೨) ಅಸಮಾನ ಯಾನ ಕರ್ಮ—ಎಂದು. ಮೂರನೆಯವನಾದ ಒಬ್ಬ ಶತ್ರುರಾಜನೊಡನೆ ಇಬ್ಬರು ರಾಜರು ತಾತ್ಕಾಲಿಕ ಅಥವಾ ಕಾಲಾಂತರದ ಲಾಭಕ್ಕಾಗಿ ಹೋರಾಡಲೆಂದು ಪರಸ್ಪರ ಸಂಧಿ ಮಾಡಿಕೊಳ್ಳುವುದು ಸಮಾನಯಾನ ಕರ್ಮ. ಅಂಥ ಲಾಭಕ್ಕಾಗಿ ಅವರು ಮೊದಲಿನಂತೆ ಒಟ್ಟಾಗಿ ದಾಳಿ ಮಾಡದೆ ಶತ್ರುರಾಜನನ್ನು ವಂಚಿಸಲೋಸುಗ ಆ ರಾಜನು ಆ ಕಡೆಯಿಂದ ಮತ್ತು ಈ ರಾಜನು ಈ ಕಡೆಯಿಂದ ಅವನ ಮೇಲೆ ಏರಿ ಹೋಗಲು ಸಂಧಿ (ಒಪ್ಪಂದ) ಮಾಡಿಕೊಳ್ಳುವುದು ಅಸಮಾನ ಯಾನ ಕರ್ಮ.

ವಿಗ್ರಹದಲ್ಲಿ ಎರಡು ಬಗೆಗಳು: ಶತ್ರು ಕಷ್ಟದಲ್ಲಿ ಸಿಕ್ಕಿರುವಾಗ ಉಕ್ತ ಅಥವಾ ಅನುಕ್ತ ಕಾಲದಲ್ಲಿ ಯುದ್ಧವನ್ನು ತಾನು ಆರಂಭಿಸುವುದು ಒಂದು ವಿಧದ ವಿಗ್ರಹ: ಮಿತ್ರರಾಜನೊಬ್ಬನ ಮೇಲೆ ಇನ್ನೊಬ್ಬ ದಾಳಿ ಮಾಡಿದಾಗ ಅವನನ್ನು ರಕ್ಷಿಸಲು ಮಾಡುವ ಯುದ್ಧ ಇನ್ನೊಂದು ಬಗೆಯ ವಿಗ್ರಹ.

ಸಮರ್ಥನಾದ ರಾಜನು ಶತ್ರು ಕಷ್ಟದಲ್ಲಿ ಸಿಕ್ಕಿರುವಾಗ ಅವನ ಮೇಲೆ ಏರಿಹೋಗುವುದು ಒಂದು ಬಗೆಯ ಯಾನ: ತಾನು ದುರ್ಬಲನಾಗಿದ್ದರೂ ಮಿತ್ರರಾಜನ ಸಹಾಯದೊಡನೆ ಶತ್ರುವಿನ ಮೇಲೇರಿ ಹೋಗುವುದು ಇನ್ನೊಂದು ಬಗೆಯ ಯಾನ.

ತಾನು ದುರ್ಬಲನಿರಲಿ ಅಥವಾ ಬಲಿಷ್ಠನಿರಲಿ ರಾಜನೊಬ್ಬನು ಸ್ವಕಾರ್ಯಸಿದ್ಧಿಗಾಗಿ ವೈರಿಯ ವಿರುದ್ಧವಾಗಿ ಯಾವುದಾದರೊಂದು ನೆಲೆಯನ್ನು ಆಕ್ರಮಿಸಿರುವುದು ಒಂದು ವಿಧದ ಆಸನ: ಮಿತ್ರಕಾರ್ಯಸಿದ್ಧಿಗಾಗಿ ಹಾಗೆ ಮಾಡುವುದು ಇನ್ನೊಂದು ವಿಧದ ಆಸನ.

ಸ್ವಕಾರ್ಯಸಿದ್ಧಿಗಾಗಿ ತನ್ನ ಸೈನ್ಯವನ್ನು ಇಬ್ಭಾಗ ಮಾಡಿ ಒಂದನ್ನು ವೈರಿಯೊಡನೆ ಹೋರಾಡಲು ಮತ್ತು ಇನ್ನೊಂದನ್ನು ತನ್ನ ರಾಜಧಾನಿಯನ್ನು ಕಾಯಲು ನಿಲ್ಲಿಸುವುದು—ಎಂದು ದ್ವೈಧವು ಇಬ್ಬಗೆಯಾಗಿದೆ. ಶತ್ರುವಿನ ಉಪದ್ರವವನ್ನು ಪರಿಹರಿಸಿಕೊಳ್ಳಲು ಮೊದಲಿನ ದ್ವೈಧದಲ್ಲಿ ಸೇನಾಪತಿಯು ಅರ್ಧ ಸೈನ್ಯವನ್ನು ರಾಜಧಾನಿಯಿಂದ ಹೊರಡಿಸಿಕೊಂಡುಹೋಗುತ್ತಾನೆ: ಉಳಿದರ್ಧವನ್ನು ರಾಜ ತಾನೇ ಕೋಟೆಯಲ್ಲಿಟ್ಟುಕೊಂಡಿರುವುದು ಎರಡನೆಯ ಬಗೆಯ ದ್ವೈಧ.

ವೈರಿಗಳಿಂದ ತೊಂದರೆಗೀಡಾದ ಕಾಲದಲ್ಲಿ ದುರ್ಬಲ ರಾಜನು ಪ್ರಬಲ ರಾಜನನ್ನಾಶ್ರಯಿಸುವುದು (ಅವನ ರಕ್ಷಣೆಯಲ್ಲಿ ಇರುವುದು) ಒಂದು ಬಗೆಯ ಸಂಶ್ರಯ: ಅಂಥ ತೊಂದರೆ ಮುಂದೆ ಬಂದೀತೆಂದು ಈಗಲೇ ಹಾಗೆ ಮಾಡುವುದು ಎರಡನೆಯ ಬಗೆಯ ಸಂಶ್ರಯ.

ತನ್ನ ದೇಶದ ವಿವಿಧ ಹಿತಗಳ ರಕ್ಷಣೆಗಾಗಿ ರಾಜನು ವಿದೇಶಗಳ ರಾಜರೊಡನೆ ನಡೆದುಕೊಳ್ಳಬೇಕಾದ ವಿವಿಧ ಸಂದರ್ಭಗಳನ್ನು ಮನು ಈ ರಾಜತಂತ್ರ ವಿಧಾನಗಳಿಂದ ವಿವರಿಸಿದ್ದಾನೆ ಮತ್ತು ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಈಗಲೂ ಒಂದಲ್ಲ ಒಂದು ರೀತಿಯಿಂದ ಆಚರಣೆಯಲ್ಲಿ ಇವು ಉಳಿದಿವೆ. ಅಂದಿನಿಂದ ಇಂದಿನ ವರೆಗೂ ಹಾಗೂ ಮುಂದೆ ಸಹ ಉಳಿಯಬಹುದಾದ ಆಲೋಚನೆಗಳನ್ನು ಮಾಡಿದ ಅವನ ಮೇಧಾವಿತ್ವವನ್ನು ಯಾರಾದರೂ ಕೊಂಡಾಡಲೇ ಬೇಕು. "ಮಾನವ ಕುಲಮೊಂದೆ ವಲಂ" ಎಂದು ಪಂಪ ಮಹಾಕವಿ ಉದ್ಗರಿಸಿದಂತೆ. ರಾಜಕೀಯ ವ್ಯವಹಾರಗಳ ಸಾಮಾನ್ಯ ಲಕ್ಷಣಗಳೂ ಹಾಗೇ ನಿರ್ದಿಷ್ಟ ರೂಪರೇಖೆಗಳನ್ನುಳ್ಳವುಗಳೆಂಬುದು ಮನೂಕ್ತ ರಾಜತಂತ್ರದ ವಿವರಗಳಿಂದ ಸ್ಪಷ್ಟವಾಗುತ್ತದೆ.

ಮನುಸ್ಮೃತಿಯ ಕಾಲ :

ಮನುಸ್ಮೃತಿಗೆ ಮಾನವ ಧರ್ಮಶಾಸ್ತ್ರವೆಂಬ ನಾಮಾಂತರವು ಉಂಟು. ಮನು ಎಂಬ ಹೆಸರು ವೇದದಷ್ಟು ಪ್ರಾಚೀನವಾದುದು. "**यद्वै किञ्च मनुरवदत् तद्भेषजम्**" (ಮನು ಹೇಳಿದ್ದೆಲ್ಲವೂ ಹಿತಕರ) ಎಂಬ ವಾಕ್ಯವು ಯಜುರ್ವೇದದ ತೈತ್ತಿರೀಯ ಸಂಹಿತೆ (II, 10. 2)ಯಲ್ಲಿ ಬರುತ್ತದೆ. ಇಲ್ಲಿ ಮನು ಎಂದರೆ ಬ್ರಹ್ಮನ ಮಗನೆನ್ನಲಾಗುವ ಆದಿ ಮಾನವನೇ ಹೊರತು ಸ್ಮೃತಿಕಾರನಲ್ಲ.

ಈಗ ನಮಗೆ ದೊರಕಿದ ಮನುಸ್ಮೃತಿ ಗ್ರಂಥವು ಭೃಗುವಿನಿಂದ ಪ್ರೋಕ್ತವಾದುದು ಎಂದು ಹೇಳಲಾಗಿದೆ. ಅವನು ಈ ಸಂಹಿತೆಯನ್ನು ರಚಿಸಿದ ಕಾಲಾವಧಿ ಕ್ರಿ.ಪೂ. ೨೦೦ ಮತ್ತು ಕ್ರಿ.ಶ. ೨೦೦ ವರ್ಷಗಳ ನಡುವಿನದೆಂದು ಡಾ. ಪಿ. ವಿ. ಕಾಣೆಯವರೂ ಡಾ. ಎ. ಬಿ. ಕೀತರೂ ಅಭಿಪ್ರಾಯ ಪಟ್ಟಿದ್ದಾರೆ. ಜರ್ಮನ್ ವಿದ್ವಾಂಸ ಡಾ. ಬ್ಯೂಲರ್ ಮಹಾಶಯನು ಕ್ರಿ.ಶ. ೨ನೆಯ ಶತಮಾನದಲ್ಲಿ ಈ ಸ್ಮೃತಿ ಗ್ರಂಥಕ್ಕೆ ಇಂದಿನ ರೂಪ ಬಂತು ಎಂದು ಸಂಶೋಧಿಸಿದ್ದಾನೆ. ಡಾ. ಕೆ. ಪಿ. ಜಯಸ್ವಾಲರು ಇದರ ಕಾಲ ಕ್ರಿ.ಶ. ೧೫೦ ಎಂದು ನಿರ್ಧರಿಸಿದ್ದಾರೆ.

ಮೊದಲು ಮನುಸ್ಮೃತಿಯು ಒಂದು ಲಕ್ಷ ಶ್ಲೋಕಗಳಿಂದ ತುಂಬಿತ್ತೆಂದು ಐತಿಹ್ಯ. ಇವುಗಳನ್ನು ೨೪ ಅಧ್ಯಾಯಗಳಲ್ಲಿ ವಿಂಗಡಿಸಿ ಇಡಲಾಗಿತ್ತಂತೆ. ನಾರದ ಮುನಿಯು ಅದನ್ನು ೧೨೦೦೦ ಶ್ಲೋಕಗಳಿಗಿಳಿಸಿದನೆಂದು ಪ್ರತೀತಿ. ಆಮೇಲೆ ಸುಮತಿಯು ಆ ೧೨೦೦೦ ಶ್ಲೋಕಗಳನ್ನು ೪೦೦೦ಕ್ಕೆ ಇಳಿಸಿದನೆಂದು ನಂಬಲಾಗಿದೆ. ಈಗ ನಮಗೆ ದೊರಕಿದ ಮನುಸ್ಮೃತಿಯಲ್ಲಿ ೨೬೮೪ ಶ್ಲೋಕಗಳಿವೆ. ಆಗ, ಈಗ ಇದರಲ್ಲಿ ಬೃಹನ್ಮನುವಿನ ಅಥವಾ ವೃದ್ಧಮನುವಿನ ಉಲ್ಲೇಖ ಕಂಡುಬರುವುದರಿಂದ ಈ ರೂಪವನ್ನು ತಾಳುವದಕ್ಕಿಂತ ಮೊದಲು ಬಹಳ ಸಲ ವಿವಿಧ ಪರಿಮಾಣದ ಸಂಹಿತೆಗಳಾಗಿ ರೂಪಿಸಲ್ಪಟ್ಟಿತ್ತೆನ್ನಬಹುದು. ಆದರೆ ಆ ಸಂಹಿತೆಗಳಲ್ಲಿ ಒಂದೂ ಈಗ ಉಪಲಬ್ಧವಾಗಿಲ್ಲ. ಬ್ಯೂಲರ್ ಮುಂತಾದ ವಿದ್ವಾಂಸರ ಅಭಿಪ್ರಾಯದಲ್ಲಿ ಮನುಸ್ಮೃತಿಯು ಇದಕ್ಕೆ ಪೂರ್ವದಲ್ಲಿ ಸೂತ್ರರೂಪವಾಗಿದ್ದ "ಮಾನವೀಯ ಧರ್ಮಸೂತ್ರ"ದ

ಶ್ಲೋಕಬದ್ಧವಾದ ರೂಪಾಂತರವಾಗಿದೆ. ಕೃಷ್ಣ ಯಜುರ್ವೇದದ ಮೈತ್ರಾಯಣೀಯ ಶಾಖೆಯ ಮಾನವ ಸೂತ್ರ ಚರಣವು ಪ್ರಸಿದ್ಧವಿದೆ. ಮಾನವೀಯ ಧರ್ಮಸೂತ್ರವು ಆ ಚರಣಕ್ಕೆ ಸೇರಿದವರಿಂದ ನಿರ್ಮಿತವಾಗಿರಬಹುದು. ಯಾಸ್ಕನ ನಿರುಕ್ತದಲ್ಲಿ (III. 4) ಒಮ್ಮೆ ಹಾಗೂ ಮಹಾಭಾರತದಲ್ಲಿ ಅನೇಕ ಸಲ 'ಮನುರಬ್ರವೀತ್' ಎಂಬ ಉಕ್ತಿಯೊಡನೆ ಧರ್ಮಾಚಾರಗಳ ಉಲ್ಲೇಖಗಳು ಬರುತ್ತವೆ. ಇವೊಂದೂ ಈಗಿನ ಮನು-ಸ್ಮೃತಿಯಲ್ಲಿ ಕಾಣಸಿಗುವುದಿಲ್ಲ. ಆದ್ದರಿಂದ ಈ ಉಲ್ಲೇಖಗಳು ಪೂರ್ವದ ಮಾನವೀಯ ಧರ್ಮಸೂತ್ರಕ್ಕೆ ಅನ್ವಯಿಸುತ್ತವೆಯೋ ಏನೋ ಎಂದು ವಿದ್ವಾಂಸರು ಊಹಿಸುತ್ತಾರೆ.

ಮನುಸ್ಮೃತಿಗೆ ಭಾರತದ ಪ್ರಸಿದ್ಧ ಇತಿಹಾಸ–ಪುರಾಣ ಗ್ರಂಥಗಳೊಡನೆ ಸಮಾನ ಸ್ಥಾನವಿದೆ. ಕೌಟಿಲ್ಯನ ಅರ್ಥಶಾಸ್ತ್ರದಂತೆಯೇ ಇದೂ ಭಾರತದ ವಿವಿಧ ರಾಜರಿಗೆ ಸಾವಿರಾರು ವರ್ಷಗಳ ವರೆಗೆ ರಾಜಧರ್ಮದ ಮಾರ್ಗದರ್ಶಕವಾಗಿತ್ತು. ಇಲ್ಲಿ ಬಹುಕಾಲ ಯುದ್ಧ. ಶಾಂತಿ, ಆಡಳಿತ ನಿರ್ವಹಣೆ ಮತ್ತು ಇತರ ವಿವಿಧ ಆಚಾರ—ವಿಚಾರಗಳು ಮನುಸ್ಮೃತಿಯನ್ನಾಧರಿಸಿಯೇ ಪ್ರಗತಿ ಹೊಂದಿದ್ದು ಇದರ ಪೂಜ್ಯತೆಗೆ ಕಾರಣ. ರಾಜಧರ್ಮದ ಬಗೆಗೆ ಮಹಾಭಾರತ ಹಾಗೂ ಮನುಸ್ಮೃತಿಗಳ ಅಭಿಪ್ರಾಯಗಳು ಹೆಚ್ಚು ಕಡಿಮೆ ಒಂದೇ ಆಗಿವೆ ಎಂದು ಹೇಳಬಹುದು. ವರ್ತಮಾನ ಭಾರತದ ಪ್ರಜೆಗಳೂ ಶಾಸಕರೂ ಈ ಗ್ರಂಥದ ಅಭ್ಯಾಸದಿಂದ ಬಹುವಿಧವಾಗಿ ಬುದ್ಧಿವಿಕಾಸವನ್ನೂ ಮಾರ್ಗದರ್ಶನವನ್ನೂ ಪಡೆಯಬಹುದು.

ಮನುಸ್ಮೃತಿ

ಏಳನೆಯ ಅಧ್ಯಾಯ

राजधर्मान्प्रवक्ष्यामि यथावृत्तो भवेन्नृपः ।
संभवश्च यथा तस्य सिद्धिश्च परमा यथा ॥ १ ॥

ರಾಜಧರ್ಮಾನ್ ಪ್ರವಕ್ಷ್ಯಾಮಿ ಯಥಾವೃತ್ತೋ ಭವೇನ್ನೃಪಃ ।
ಸಂಭವಶ್ಚ ಯಥಾ ತಸ್ಯ ಸಿದ್ಧಿಶ್ಚ ಪರಮಾ ಯಥಾ ॥ ೧ ॥

೧. ನಾನು ರಾಜಧರ್ಮಗಳನ್ನು ಹೇಳುತ್ತೇನೆ. ರಾಜನ ಆಚಾರ ಹೇಗಿರಬೇಕು? ಅವನ ಹುಟ್ಟು ಹೇಗಾಯಿತು? ಮತ್ತು ಅವನು ಪರಮಸಿದ್ಧಿಯನ್ನು ಹೇಗೆ ಪಡೆಯುತ್ತಾನೆ? (ಎಂಬುದನ್ನೂ ಹೇಳುತ್ತೇನೆ.)

೧. ಇಲ್ಲಿ ರಾಜಧರ್ಮವೆಂದರೆ ರಾಜನ ಕರ್ತವ್ಯಗಳು. धर्मशब्दः कर्तव्यतावचनः—मेधातिथि । परमा सिद्धिः—ಯುದ್ಧದಲ್ಲಿ ಹಾಗೂ ಮಿಕ್ಕೆಲ್ಲ ಕಾರ್ಯಗಳಲ್ಲಿ ದೊರಕುವ ಪೂರ್ಣಸಿದ್ಧಿ.

ब्राह्मं प्राप्तेन संस्कारं क्षत्रियेण यथाविधि ।
सर्वस्यास्य यथान्यायं कर्त्तव्यं परिरक्षणम् ॥ २ ॥

ಬ್ರಾಹ್ಮಂ ಪ್ರಾಪ್ತೇನ ಸಂಸ್ಕಾರಂ ಕ್ಷತ್ರಿಯೇಣ ಯಥಾವಿಧಿ ।
ಸರ್ವಸ್ಯಾಸ್ಯ ಯಥಾನ್ಯಾಯಂ ಕರ್ತವ್ಯಂ ಪರಿರಕ್ಷಣಮ್ ॥ ೨ ॥

೨. ಶಾಸ್ತ್ರೋಕ್ತವಾಗಿ ವೈದಿಕ ಸಂಸ್ಕಾರವನ್ನು ಪಡೆದ ಕ್ಷತ್ರಿಯನು (ರಾಜನು) ಈ ಇಡೀ ಜಗತ್ತಿನ ರಕ್ಷಣೆಯನ್ನು ನ್ಯಾಯಸಮ್ಮತವಾಗಿ ಮಾಡಬೇಕು.

೨. संस्कार—उपनयन (मेधातिथि, गोविन्दराज, कुल्लूक, सर्वज्ञनारायण)—राज्याभिषेक (नन्दन)—ಬ್ರಹ್ಮವೆಂದರೆ ವೇದ. ವೇದಾಧ್ಯಯನಾರ್ಹವಾಗಿ ಇರುವ ಸಂಸ್ಕಾರವೆಂದರೆ ಉಪನಯನ; ಆದರೆ ಕೆಲವರ ಮತಾನುಸಾರ, ಇದು 'ರಾಜಧರ್ಮ ಪ್ರಕರಣ'ವಾದ್ದರಿಂದ 'ರಾಜ್ಯಾಭಿಷೇಕ'ವನ್ನು ಸೂಚಿಸುತ್ತದೆ. यथाविधि—ಶಾಸ್ತ್ರೋಕ್ತವಾಗಿ.

अराजके हि लोकेऽस्मिन्सर्वतो विद्रुते भयात् ।
रक्षार्थमस्य सर्वस्य राजानमसृजत्प्रभुः ॥ ३ ॥

ಅರಾಜಕೇ ಹಿ ಲೋಕೇಽಸ್ಮಿನ್ ಸರ್ವತೋ ವಿದ್ರುತೇ ಭಯಾತ್ ।
ರಕ್ಷಾರ್ಥಮಸ್ಯ ಸರ್ವಸ್ಯ ರಾಜಾನಮಸೃಜತ್ಪ್ರಭುಃ ॥ ೩ ॥

೩. ರಾಜನಿಲ್ಲದಿರಲು ಜನರೆಲ್ಲ ಹೆದರಿ ದಿಕ್ಕಾಪಾಲಾಗಿ ಓಡುತ್ತಿರುವಾಗ, ಈ ಜಗತ್ತಿನ ರಕ್ಷಣೆಗಾಗಿ ಬ್ರಹ್ಮನು ರಾಜನನ್ನು ಸೃಷ್ಟಿಮಾಡಿದನು.

೩. प्रभुः—ಪ್ರಜಾಪತಿ, ಬ್ರಹ್ಮ. सर्वतो विद्रुते भयात्—ದುರ್ಜನರ ಭೀತಿಯಿಂದ ಹೆದರಿ ಎಲ್ಲೆಡೆಗೂ ಓಡತೊಡಗಿದಾಗ, ಬ್ರಹ್ಮನು ರಾಜನನ್ನು ಸೃಷ್ಟಿಸಿದನೆಂದರೆ ರಾಜಶಕ್ತಿಯನ್ನು, ರಾಜಸ್ಥಾನವನ್ನು ಅಥವಾ ರಾಜತ್ವರೂಪದ ಪ್ರಜಾನಿಯಾಮಕ ಶಕ್ತಿಕೇಂದ್ರವನ್ನು ಸ್ಥಾಪಿಸಿಕೊಳ್ಳಲು ಜನನಾಯಕರಿಗೆ ಅವನು ಪ್ರೇರಣೆ ಕೊಟ್ಟನೆಂದರ್ಥ.

इन्द्रानिलयमार्काणामग्नेश्च वरुणस्य च ।
चन्द्रवित्तेशयोश्चैव मात्रा निर्हृत्य शाश्वतीः ॥ ४ ॥

ಇಂದ್ರಾನಿಲಯಮಾರ್ಕಾಣಾಮಗ್ನೇಶ್ಚ ವರುಣಸ್ಯ ಚ ।
ಚಂದ್ರವಿತ್ತೇಶಯೋಶ್ಚೈವ ಮಾತ್ರಾ ನಿರ್ಹೃತ್ಯ ಶಾಶ್ವತೀಃ ॥ ೪ ॥

೪. ಇಂದ್ರ, ವಾಯು, ಯಮ, ಸೂರ್ಯ, ಅಗ್ನಿ, ವರುಣ, ಚಂದ್ರ ಮತ್ತು ಕುಬೇರರ ಸಾರಭೂತ ನಿತ್ಯಾಂಶಗಳನ್ನು ತೆಗೆದುಕೊಂಡು (ಬ್ರಹ್ಮನು ರಾಜನನ್ನು ಸೃಷ್ಟಿಸಿದನು).

೪. मात्राः—सारभूतांशाः,—दधिमण्डस्य नवनीतवत् (राघवानन्द)—ಸಾರವತ್ತಾದ ಅಂಶಗಳನ್ನು ಕೆನೆಮೊಸರನ್ನು ಕಡೆದು ಬೆಣ್ಣೆ ತೆಗೆಯುವಂತೆ ತೆಗೆದು—ಎಂದು ತಾತ್ಪರ್ಯ: ಇಂದ್ರಾದಿಗಳಿಗೆ ದುಷ್ಟಶಿಕ್ಷಣ, ಶಿಷ್ಟಪರಿಪಾಲನೆ ಮಾಡುವ ದಿವ್ಯಶಕ್ತಿಯೇ ಸಾರಭೂತವಾದ ಅಂಶ.

यस्मादेषां सुरेन्द्राणां मात्राभ्यो निर्मितो नृपः ।
तस्मादभिभवत्येष सर्वभूतानि तेजसा ॥ ५ ॥

ಯಸ್ಮಾದೇಷಾಂ ಸುರೇಂದ್ರಾಣಾಂ ಮಾತ್ರಾಭ್ಯೋ ನಿರ್ಮಿತೋ ನೃಪಃ ।
ತಸ್ಮಾದಭಿಭವತ್ಯೇಷ ಸರ್ವಭೂತಾನಿ ತೇಜಸಾ ॥ ೫ ॥

೫. ರಾಜನು ಇಂದ್ರಾದಿ ದೇವತೆಗಳ ಅಂಶಗಳಿಂದ ನಿರ್ಮಿತನಾಗಿದ್ದಾನೆ. ಆದ್ದರಿಂದ ಅವನು ಎಲ್ಲ ಜೀವಿಗಳನ್ನು ಶಕ್ತಿಯಲ್ಲಿ ಮೀರಿಸುತ್ತಾನೆ.

೫. ಮನುವು 'ರಾಜನ ರಾಜತ್ವವು ಅವನಿಗೆ ಹುಟ್ಟಿನೊಡನೆಯೇ ಬಂದ ದೈವದತ್ತಾಧಿಕಾರ' ಎಂಬ ಸಿದ್ಧಾಂತವನ್ನಿಲ್ಲಿ ಹೇಳಿಲ್ಲ (ಪೀಠಿಕೆಯಲ್ಲಿ ವಿವರಗಳನ್ನು ಓದಿರಿ). ರಾಜಶಾಸನವು ಅನುಲ್ಲಂಘನೀಯ ಎಂದು ಪ್ರಜೆಗಳಿಗೆ ಬೋಧಿಸುವುದಷ್ಟೇ ಇಲ್ಲಿಯ ಉದ್ದೇಶ.

तपत्यादित्यवच्चैष चक्षूंषि च मनांसि च ।
न चैनं भुवि शक्नोति कश्चिदप्यभिवीक्षितुम् ।। ६ ।।

ತಪತ್ಯಾದಿತ್ಯವಚ್ಚೈಷ ಚಕ್ಷೂಂಷಿ ಚ ಮನಾಂಸಿ ಚ ।
ನ ಚೈನಂ ಭುವಿ ಶಕ್ನೋತಿ ಕಶ್ಚಿದಪ್ಯಭಿವೀಕ್ಷಿತುಮ್ ॥ ೬ ॥

೬. ಅವನು ಸೂರ್ಯನಂತೆ ನೋಡುವವರ ಕಣ್ಮನಗಳನ್ನು ಕುಕ್ಕುತ್ತಾನೆ. (ಆದ್ದರಿಂದ) ಭೂಮಿಯ ಮೇಲಿರುವ ಯಾವನೂ ಅವನನ್ನು ದಿಟ್ಟಿಸಿ ನೋಡಲಾರ.

೬. ಸೂರ್ಯನ ಕಿರಣಗಳು ಪ್ರಖರವಾಗಿರುವುದರಿಂದ ಜನರು ಅವನನ್ನು ದಿಟ್ಟಿಸಿ ನೋಡಲಾರರು; ಹಾಗೇ ರಾಜನಿಗೆ ಅಪಾರವಾದ ದಂಡಶಕ್ತಿ ಇರುವುದರಿಂದ ಪ್ರಜೆಗಳು ಅವನ ಮುಖವನ್ನು ನೇರವಾಗಿ ನೋಡಲಾರರು. ದಂಡಶಕ್ತಿಯಿಂದ ಭಯ. ಭಯದಿಂದ ಭಕ್ತಿ. ಭಕ್ತಿಯಿಂದ ವಿಧೇಯತೆ ಅವರಲ್ಲಿ ಉಂಟಾಗುತ್ತದೆ.

सोऽग्निर्भवति वायुश्च सोऽर्कः सोमः स धर्मराट् ।
स कुबेरः स वरुणः स महेन्द्रः प्रभावतः ।। ७ ।।

ಸೋಽಗ್ನಿರ್ಭವತಿ ವಾಯುಶ್ಚ ಸೋಽರ್ಕಃ ಸೋಮಃ ಸ ಧರ್ಮರಾಟ್ ।
ಸ ಕುಬೇರಃ ಸ ವರುಣಃ ಸ ಮಹೇಂದ್ರಃ ಪ್ರಭಾವತಃ ॥ ೭ ॥

೭. ಅವನು (ತನ್ನ) ಪ್ರಭಾವದಲ್ಲಿ ಅಗ್ನಿ. ವಾಯು. ಸೂರ್ಯ. ಚಂದ್ರ. ಯಮ. ಕುಬೇರ. ಮಹೇಂದ್ರ!

೭. ದೇವಾಂಶಸಂಭೂತನೆಂದು ಪ್ರಜೆಗಳು ಗ್ರಹಿಸಿರುವುದರಿಂದ ಅವನಲ್ಲಿ ದೇವತಾಪ್ರಭಾವವಿದೆಯೆಂದು ಅವರು ನಂಬಿ, ಅವನ ಆಜ್ಞೆಗಳನ್ನು ಪಾಲಿಸುತ್ತಾರೆ. ದೇವತಾಮೂಲವೆಂದು ನಂಬಿದ ಯಾವ ಅಧಿಕಾರಕ್ಕೂ ಜನರು ಕೊನೆಯ ತನಕ ವಿಧೇಯರಾಗಿ ವರ್ತಿಸುವರು ಎಂಬುದು ಮನುವಿನ ಸಮಾಜಮನೋವಿಜ್ಞಾನ.

बालोऽपि नावमन्तव्यो मनुष्य इति भूमिपः ।
महती देवता ह्येषा नररूपेण तिष्ठति ।। ८ ।।

ಬಾಲೋಽಪಿ ನಾವಮಂತವ್ಯೋ ಮನುಷ್ಯ ಇತಿ ಭೂಮಿಪಃ ।
ಮಹತೀ ದೇವತಾ ಹ್ಯೇಷಾ ನರರೂಪೇಣ ತಿಷ್ಠತಿ ॥ ೮ ॥

೮. ರಾಜನು ಮನುಷ್ಯನೆಂದು ತಿಳಿದು ಬಾಲಕನಾಗಿದ್ದರೂ ಅವನನ್ನು ಅವಮಾನಿಸಬಾರದು: ಏಕೆಂದರೆ. ಅವನು (ಮನುಷ್ಯನಲ್ಲ) ಮನುಷ್ಯರೂಪದಲ್ಲಿರುವ ಒಂದು ದೊಡ್ಡ ದೇವತೆಯೇ ಸರಿ.

೮. ರಾಜನು ದೇವತಾಶಕ್ತಿಗಳ ಮೂರ್ತಸ್ವರೂಪ; ಆದ್ದರಿಂದ ಅವನೊಬ್ಬ ಚಿಕ್ಕವನಾಗಿದ್ದರೂ ಅವನಿಗೆ ಅಪಮಾನ ಮಾಡಬಾರದು. ಅವನ ಅಪಮಾನವೆಂದರೆ ದೇವತೆಗಳ ಅಪಮಾನವೇ ಸರಿ. ಅವನಿಲ್ಲಿ 'ಮನುಷ್ಯ'ನೆಂದು ಸ್ಪಷ್ಟಪಡಿಸಿರುವುದು ಹಿಂದೆ ಹೇಳಿದ ವಿವರಣೆಯನ್ನು ಸಮರ್ಥಿಸುತ್ತದೆ.

एकमेव दहत्यग्निर्नरं दुरुपसर्पिणम् ।
कुलं दहति राजाग्निः सपशुद्रव्यसंचयम् ।। ९ ।।

ಏಕಮೇವ ದಹತ್ಯಗ್ನಿರ್ನರಂ ದುರುಪಸರ್ಪಿಣಮ್ ।
ಕುಲಂ ದಹತಿ ರಾಜಾಗ್ನಿಃ ಸಪಶುದ್ರವ್ಯಸಂಚಯಮ್ ॥ ೯ ॥

೯. ಬೆಂಕಿಯು ಅಜಾಗರೂಕತೆಯಿಂದ ತನ್ನ ಬಳಿಗೆ ಬರುವ ಒಬ್ಬನನ್ನು ಮಾತ್ರ ಸುಡುತ್ತದೆ. ಆದರೆ ರಾಜನೆಂಬ ಬೆಂಕಿಯು ದನಕರುಧನಧಾನ್ಯಾದಿ ಸಂಪತ್ತಿನೊಡನೆ ಅವನ (ಅಪರಾಧಿಯ) ವಂಶವನ್ನೇ ನಾಶಮಾಡುತ್ತದೆ.

೯. अग्नितोऽपि राजा दाहशक्तौ विशिष्टतरः (न०)—ಬೆಂಕಿಗಿಂತ ರಾಜನ ಕೋಪ ಹೆಚ್ಚು ಹಾನಿಕರ (ವ್ಯತಿರೇಕಾಲಂಕಾರ). ಈ ಶ್ಲೋಕವೂ ಹಿಂದಿನವುಗಳಂತೆಯೇ ಪ್ರಜೆಗಳಲ್ಲಿ ಕಾಯಿದೆಬದ್ಧ ವರ್ತನೆಯ ಬಗ್ಗೆ ನಂಬಿಗೆಯನ್ನು ದೃಢಪಡಿಸಲು ಹೇಳಿದ್ದು.

कार्यं सोऽवेक्ष्य शक्तिं च देशकालौ च तत्त्वतः ।
कुरुते धर्मसिद्ध्यर्थं विश्वरूपं पुनः पुनः ।। १० ।।

ಕಾರ್ಯಂ ಸೋಽವೇಕ್ಷ್ಯ ಶಕ್ತಿಂ ಚ ದೇಶಕಾಲೌ ಚ ತತ್ತ್ವತಃ ।
ಕುರುತೇ ಧರ್ಮಸಿದ್ಧ್ಯರ್ಥಂ ವಿಶ್ವರೂಪಂ ಪುನಃ ಪುನಃ ॥ ೧೦ ॥

೧೦. ಅವನು ತನ್ನ ಕರ್ತವ್ಯವನ್ನೂ ಶಕ್ತಿಯನ್ನೂ ದೇಶಕಾಲಗಳನ್ನೂ ಸರಿಯಾಗಿ ವಿಮರ್ಶಿಸಿ ರಾಜಕಾರ್ಯದ ಸಿದ್ಧಿಗಾಗಿ ಮತ್ತೆ ಮತ್ತೆ ಅನೇಕ ರೂಪಗಳನ್ನು ತಾಳುತ್ತಾನೆ.

೧೦. ರಾಜನು ದುರ್ಬಲನಾದಾಗ ಅಪರಾಧಿಯನ್ನು ಕ್ಷಮಿಸುತ್ತಾನೆ; ಶಕ್ತನಾಗಿರುವಾಗ ಶಿಕ್ಷಿಸುತ್ತಾನೆ; ತನ್ನ ಉದ್ದೇಶಾನುಸಾರವಾಗಿ ಅವನು ಬೇರೆ ಬೇರೆ ದೇಶಕಾಲಗಳಲ್ಲಿ ಶತ್ರು, ಮಿತ್ರ ಅಥವಾ ಉದಾಸೀನನಾಗಿರುತ್ತಾನೆ. ಹೀಗಿರುವಾಗ ತಾನು ರಾಜನಿಗೆ ಬೇಕಾದವನೆಂಬ ಭ್ರಮೆಯಿಂದ ಯಾರೂ ಅವನನ್ನು ಕಡೆಗಣಿಸಿ ಮನಬಂದಂತೆ ವರ್ತಿಸಬಾರದು—ಎಂಬುದು ಕುಲ್ಲೂಕಾದಿಗಳ ವಿವರಣೆ. ಇದು 'ರಾಜ್ಞಾಂ ಮಿತ್ರಂ ಕೇನ ದೃಷ್ಟಂ ಶ್ರುತಂ ವಾ' ಎಂಬ ಸುಭಾಷಿತವನ್ನು ದೃಢಪಡಿಸುತ್ತದೆ.

यस्य प्रसादे पद्मा श्रीर्विजयश्च पराक्रमे ।
मृत्युश्च वसति क्रोधे सर्वतेजोमयो हि सः ।। ११ ।।

ಯಸ್ಯ ಪ್ರಸಾದೇ ಪದ್ಮಾ ಶ್ರೀರ್ವಿಜಯಶ್ಚ ಪರಾಕ್ರಮೇ ।
ಮೃತ್ಯುಶ್ಚ ವಸತಿ ಕ್ರೋಧೇ ಸರ್ವತೇಜೋಮಯೋ ಹಿ ಸಃ ॥ ೧೧ ॥

೧೧. ರಾಜನ ಪ್ರಸನ್ನತೆಯಲ್ಲಿ ಮಹಾಲಕ್ಷ್ಮಿ ನೆಲೆಸಿದ್ದಾಳೆ; ಅವನ ಪರಾಕ್ರಮದಲ್ಲಿ ಗೆಲುವು ನೆಲೆನಿಂತಿದೆ: ಅವನ ಸಿಟ್ಟಿನಲ್ಲಿ ಮೃತ್ಯು ಕುಳಿತಿದೆ. ಆದ್ದರಿಂದ ಅವನು ಸರ್ವ (ದೇವತಾ) ಶಕ್ತಿಸಂಪನ್ನನಾಗಿರುತ್ತಾನೆ.

೧೧. ಹಣದಾಸೆಯುಳ್ಳವನು. ಹಗೆಯ ನಾಶವನ್ನು ಬಯಸುವವನು ಮತ್ತು ಜೀವಿತವ ಬಯಸುವವನು ರಾಜನ ಸೇವೆ ಮಾಡಬೇಕು; ಅವನ ವಿರುದ್ಧ ಹೋಗಬಾರದು—ಏಕೆಂದರೆ, ಅವನಲ್ಲಿ ದೇವತಾಶಕ್ತಿ ಅಡಗಿದೆ.

तं यस्तु द्वेष्टि संमोहात्स विनश्यत्यसंशयम् ।
तस्य ह्याशु विनाशाय राजा प्रकुरुते मनः ।। १२ ।।

ತಂ ಯಸ್ತು ದ್ವೇಷ್ಟಿ ಸಂಮೋಹಾತ್ಸ ವಿನಶ್ಯತ್ಯಸಂಶಯಮ್ ।
ತಸ್ಯ ಹ್ಯಾಶು ವಿನಾಶಾಯ ರಾಜಾ ಪ್ರಕುರುತೇ ಮನಃ ॥ ೧೨ ॥

೧೨. ಅಜ್ಞಾನದಿಂದ ರಾಜನನ್ನು ದ್ವೇಷಿಸುವವನು ನಿಃಸಂದೇಹವಾಗಿ ನಾಶವಾಗುತ್ತಾನೆ; ಏಕೆಂದರೆ, ಅವನ ನಾಶಕ್ಕಾಗಿ ರಾಜನು ಕೂಡಲೇ ಸಂಕಲ್ಪಿಸುತ್ತಾನೆ.

೧೨. द्वेष्टि—प्रातिकूल्येन वर्तते (मे०); अप्रीतिमुत्पादयति (कु०)—ರಾಜನಿಗೆ ಪ್ರತಿಕೂಲವಾಗಿ ವರ್ತಿಸುವವನು—ಎಂದು ತಾತ್ಪರ್ಯ.

तस्माद्धर्मं यमिष्टेषु स व्यवस्येन्नराधिपः ।
अनिष्टं चाप्यनिष्टेषु तं धर्मं न विचालयेत् ।। १३ ।।

ತಸ್ಮಾದ್ಧರ್ಮಂ ಯಮಿಷ್ಟೇಷು ಸ ವ್ಯವಸ್ಯೇನ್ನರಾಧಿಪಃ ।
ಅನಿಷ್ಟಂ ಚಾಪ್ಯನಿಷ್ಟೇಷು ತಂ ಧರ್ಮಂ ನ ವಿಚಾಲಯೇತ್ ॥ ೧೩ ॥

೧೩. ಆದುದರಿಂದ ಅಂಥ ರಾಜನು ತನ್ನ ಇಷ್ಟಕಾರ್ಯಗಳ ಬಗೆಗೆ ಮಾಡುವ ನಿಯಮವನ್ನೂ ಇಷ್ಟಕ್ಕೆ ಬಾರದ ಕಾರ್ಯಗಳ ಬಗೆಗೆ ಮಾಡುವ ಅನಿಷ್ಟವಾದ ನಿಯಮವನ್ನೂ (ಪ್ರಜೆಗಳು) ಉಲ್ಲಂಘಿಸಬಾರದು.

೧೩. 'ಈ ದಿನ ಮಂತ್ರಿಯ ಮನೆಯಲ್ಲಿ ಮದುವೆಯಿರುವುದರಿಂದ ಎಲ್ಲರೂ ಉತ್ಸವವನ್ನು ಆಚರಿಸಬೇಕು' ಅಥವಾ 'ಈ ಮನುಷ್ಯನು ಪಾತಕಿಯಾದುದರಿಂದ ಯಾರೂ ಇವನಿಗೆ ಮನೆಯಲ್ಲಿ ಪ್ರವೇಶಕೊಡಲಾಗದು' ಎಂಬಂತಹ ಆಜ್ಞೆಗಳನ್ನು ರಾಜನು ಮಾಡಿದಾಗ ಪ್ರಜೆಗಳು ಅವನ್ನು ಪಾಲಿಸಬೇಕು—ಎಂದು ಮೇಧಾತಿಥಿ ವಿವರಿಸಿದ್ದಾನೆ. ಇದರಲ್ಲಿ ಮೊದಲನೆಯದು 'ಇಷ್ಟ' ಶಾಸನಕ್ಕೂ

ವಿವಡನೆಯುದು 'ಅನಿಷ್ಟ' ಶಾಸನಕ್ಕೂ ಉದಾಹರಣೆಗಳು. ಇಷ್ಟಾನಿಷ್ಟಗಳೆಂದರಿಲ್ಲಿ ವಿಧಿ-ನಿಷೇಧ-ಗಳೆಂದು ತಾತ್ಪರ್ಯವಿದ್ದಂತಿದೆ.

तस्यार्थे सर्वभूतानां गोप्तारं धर्ममात्मजम् ।
ब्रह्मतेजोमयं दण्डमसृजत्पूर्वमीश्वरः ।। १४ ।।

ತಸ್ಯಾರ್ಥೇ ಸರ್ವಭೂತಾನಾಂ ಗೋಪ್ತಾರಂ ಧರ್ಮಮಾತ್ಮಜಮ್ ।
ಬ್ರಹ್ಮತೇಜೋಮಯಂ ದಂಡಮಸೃಜತ್ಪೂರ್ವಮೀಶ್ವರಃ ॥ ೧೪ ॥

೧೪. ಹಿಂದೆ ಬ್ರಹ್ಮನು ಅವನಿಗಾಗಿ ಬ್ರಹ್ಮತೇಜೋಮಯವಾದ, ಸ್ವಸುತ-ರೂಪವ, ಎಲ್ಲ ಜೀವಿಗಳಿಗೂ ರಕ್ಷಕವಾದ, ಧರ್ಮಸ್ವರೂಪದ ದಂಡವನ್ನು ಸೃಷ್ಟಿಸಿದನು.

೧೪, ದಂಡವು ಮೂರ್ತಿಮತ್ತಾದ ಧರ್ಮವೇ: ಏಕೆಂದರೆ, ಅದರಿಂದ ಪ್ರಜಾರಕ್ಷಣೆ-ಯಾಗುವುದು. ಬ್ರಹ್ಮನಿಂದ ಹುಟ್ಟಿದ್ದರಿಂದ ಅದು ಬ್ರಹ್ಮನ ಮಗನಂತೆಯೇ!

न च अयं प्राणधनहारित्वादधमो विज्ञेयः (मे०)—ಪ್ರಜೆಗಳ ವಿತ್ತಜೀವಿತ-ಗಳಿಗೆ ಹಾನಿಯುಂಟುಮಾಡುವುದೆಂದು ಅದನ್ನು ಕೀಳ್ಗಳೆಯಬಾರದು.

तस्य सर्वाणि भूतानि स्थावराणि चराणि च ।
भयाद्भोगाय कल्पन्ते स्वधर्मान्न चलन्ति च ।। १५ ।।

ತಸ್ಯ ಸರ್ವಾಣಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಭಯಾದ್ಭೋಗಾಯ ಕಲ್ಪಂತೇ ಸ್ವಧರ್ಮಾನ್ನ ಚಲಂತಿ ಚ ॥ ೧೫ ॥

೧೫. ಅವನ (ದಂಡದ) ಭಯದಿಂದ ಚರಾಚರ ಜೀವಜಾತಗಳು ಭೋಗ-ಯೋಗ್ಯವಾಗುತ್ತವೆ ಮತ್ತು ಅವು ತಮ್ಮ ತಮ್ಮ ಕರ್ತವ್ಯಗಳಿಂದ ಚ್ಯುತವಾಗುವುದಿಲ್ಲ.

೧೫. ದಂಡದ ಭಯವಿಲ್ಲದೆ ಹೋದರೆ, ಮಾತ್ಸ್ಯನ್ಯಾಯದಂತೆ, ದುರ್ಬಲನನ್ನು ಬಲಿಷ್ಠನು ಪೀಡಿಸುತ್ತಾನೆ ಮತ್ತು ಆ ಬಲಿಷ್ಠನಿಗಿಂತ ಹೆಚ್ಚು ಸಮರ್ಥನಾದವನು ಅವನನ್ನು ಪೀಡಿಸುತ್ತಾನೆ. ದಂಡಭಯವಿದ್ದರೆ ಯಾರೂ ಇಂತಹ ವರ್ತನೆಗಿಳಿಯುವುದಿಲ್ಲ: ಅದ್ದರಿಂದಲೇ ಎಲ್ಲರೂ ಸುಖ-ವಾಗಿರುತ್ತಾರೆ.

तं देशकालौ शक्तिं च विद्यां चावेक्ष्य तत्त्वतः ।
यथार्हतः संप्रणयेन्नरेष्वन्यायवर्तिषु ।। १६ ।।

ತಂ ದೇಶಕಾಲೌ ಶಕ್ತಿಂ ಚ ವಿದ್ಯಾಂ ಚಾವೇಕ್ಷ್ಯ ತತ್ತ್ವತಃ ।
ಯಥಾರ್ಹತಃ ಸಂಪ್ರಣಯೇನ್ನರೇಷ್ವನ್ಯಾಯವರ್ತಿಷು ॥ ೧೬ ॥

೧೬. ದೇಶ. ಕಾಲ. (ತನ್ನ) ದಂಡಶಕ್ತಿ ಮತ್ತು ಔಚಿತ್ಯಗಳನ್ನು ಸರಿಯಾಗಿ ಅರಿತುಕೊಂಡು. ಅನ್ಯಾಯದಿಂದ ವರ್ತಿಸುವವರಿಗೆ. ರಾಜನು ತಕ್ಕಂತೆ ಶಿಕ್ಷೆಯನ್ನು ವಿಧಿಸಬೇಕು.

೧೬. शक्ति—ಅಪರಾಧಿಯ ಸಾಮರ್ಥ್ಯ (ಅಥವಾ ದುರ್ಬಲತೆ).
विद्या—ಯಾವ ಅಪರಾಧಕ್ಕೆ ಯಾವ ಶಿಕ್ಷೆ ಯೋಗ್ಯ ಎಂಬುದರ ಜ್ಞಾನ.

स राजा पुरुषो दण्डः स नेता शासिता च सः ।
चतुर्णामाश्रमाणां च धर्मस्य प्रतिभूः स्मृतः ॥ १७ ॥

ಸ ರಾಜಾ ಪುರುಷೋ ದಂಡಃ ಸ ನೇತಾ ಶಾಸಿತಾ ಚ ಸಃ ।
ಚತುರ್ಣಾಮಾಶ್ರಮಾಣಾಂಚ ಧರ್ಮಸ್ಯ ಪ್ರತಿಭೂಃ ಸ್ಮೃತಃ ॥ ೧೭ ॥

೧೭. ಆ ದಂಡವೇ ಪೌರುಷ: ಆ ದಂಡವೇ ರಾಜ: ಅದೇ ನಾಯಕ ಹಾಗೂ ಶಾಸಕ: ನಾಲ್ಕು ಆಶ್ರಮಗಳ ಧರ್ಮಕ್ಕೆ ಅದೇ ಭದ್ರತೆ ಕೊಡತಕ್ಕದ್ದು ಎಂದು ಹೇಳಲಾಗಿದೆ.

೧೭. ಆ ದಂಡವೇ ರಾಜ: ಏಕೆಂದರೆ. ಅದು ಪ್ರಜೆಗೆ ಸುಖವನ್ನುಂಟುಮಾಡುತ್ತದೆ (राजा प्रजारञ्जनलब्धवर्णः—रघुवंश ६–२१).
धर्मस्य प्रतिभूः—ನಾಲ್ಕು ವರ್ಣಾಶ್ರಮ ಧರ್ಮಗಳ ಆಚರಣೆಗೆ ಭದ್ರತೆ ಅಥವಾ ಜಾಮೀನಿದ್ದಂತೆ.

दण्डः शास्ति प्रजाः सर्वा दण्ड एवाभिरक्षति ।
दण्डः सुप्तेषु जागर्ति दण्डं धर्मं विदुर्बुधाः ॥ १८ ॥

ದಂಡಃ ಶಾಸ್ತಿ ಪ್ರಜಾಃ ಸರ್ವಾ ದಂಡ ಏವಾಭಿರಕ್ಷತಿ ।
ದಂಡಃ ಸುಪ್ತೇಷು ಜಾಗರ್ತಿ ದಂಡಂ ಧರ್ಮಂ ವಿದುರ್ಬುಧಾಃ ॥ ೧೮ ॥

೧೮. ದಂಡವು ಪ್ರಜೆಗಳನ್ನೆಲ್ಲ ಆಳುತ್ತದೆ: ದಂಡವೇ ಅವರನ್ನು ಕಾಯುತ್ತದೆ: ಜನರು ನಿದ್ರಿಸುತ್ತಿರುವಾಗಲೂ ದಂಡವು ಎಚ್ಚರವಾಗಿರುತ್ತದೆ. ಆದ್ದರಿಂದ ವಿದ್ವಾಂಸರು ದಂಡವನ್ನೇ ಧರ್ಮವೆಂದು ತಿಳಿಯುತ್ತಾರೆ.

೧೮. सुप्तेषु जागर्ति—ದಂಡದ ಭಯವಿರುವುದರಿಂದ ಕಳ್ಳರು ಇರುಳಲ್ಲಿ ಕೂಡ ಕಳವು ಮಾಡಲು ಸಹಜವಾಗಿ ಹೊರಡರು.
दण्डं धर्मं विदुः—ದಂಡವು ಧರ್ಮಕ್ಕೆ ಮುಖ್ಯಾಧಾರ; ಆದ್ದರಿಂದ ದಂಡ-ಧರ್ಮಗಳಲ್ಲಿ ಅಭೇದವನ್ನು ಆರೋಪಿಸಲಾಗಿದೆ (आयुर्घृतम् ಎನ್ನುವಂತೆ).

समीक्ष्य स धृतः सम्यक्सर्वा रञ्जयति प्रजाः ।
असमीक्ष्य प्रणीतस्तु विनाशयति सर्वतः ॥ १९ ॥

ಸಮೀಕ್ಷ್ಯ ಸ ಧೃತಃ ಸಮ್ಯಕ್‌ಸರ್ವಾ ರಂಜಯತಿ ಪ್ರಜಾಃ ।
ಅಸಮೀಕ್ಷ್ಯ ಪ್ರಣೀತಸ್ತು ವಿನಾಶಯತಿ ಸರ್ವತಃ ॥ ೧೯ ॥

೧೯. ಸಮಗ್ರವಾಗಿ ಪರ್ಯಾಲೋಚಿಸಿ ಸರಿಯಾಗಿ ವಿಧಿಸಿದ ದಂಡವು ಎಲ್ಲ ಪ್ರಜೆಗಳಲ್ಲಿ ರಾಜನ ಬಗ್ಗೆ ಪ್ರೀತಿ ಹುಟ್ಟಿಸುತ್ತದೆ. ಅವಿಚಾರದಿಂದ ವಿಧಿಸಿದ ದಂಡವು ಎಲ್ಲವನ್ನೂ ನಾಶಮಾಡುತ್ತದೆ.

೧೯. समीक्ष्य—ರಾಜನೀತಿಶಾಸ್ತ್ರಾನುಸಾರ ಸಂಪೂರ್ಣ ವಿಚಾರ ಮಾಡಿ.

यदि न प्रणयेद्राजा दण्डं दण्डयेष्वतन्द्रितः ।
शूले मत्स्यानिवापक्ष्यन्दुर्बलान्बलवत्तराः ॥ २० ॥

ಯದಿ ನ ಪ್ರಣಯೇದ್ರಾಜಾ ದಂಡಂ ದಂಡ್ಯೇಷ್ವತಂದ್ರಿತಃ ।
ಶೂಲೇ ಮತ್ಸ್ಯಾನಿವಾಪಕ್ಷ್ಯನ್‌ದುರ್ಬಲಾನ್‌ಬಲವತ್ತರಾಃ ॥ ೨೦ ॥

೨೦. ರಾಜನು ಆಲಸ್ಯರಹಿತನಾಗಿ ದಂಡಾರ್ಹರ ಮೇಲೆ ದಂಡಪ್ರಯೋಗವನ್ನು ಮಾಡದಿದ್ದರೆ. ಮೀನುಗಳನ್ನು ಶೂಲಗಳಲ್ಲಿ ಚುಚ್ಚಿ ಸುಡುವಂತೆ ಬಲಿಷ್ಠರು ದುರ್ಬಲರನ್ನು ಪೀಡಿಸಿಯಾರು.

೨೦. शूले मत्स्यान् इव—ಮೀನು ದುರ್ಬಲ ಪ್ರಾಣಿ. ಆದ್ದರಿಂದ ಅದನ್ನು ಹಿಡಿದು ಶೂಲಕ್ಕೆ ಚುಚ್ಚಿ ಬೆಂಕಿಯಲ್ಲಿ ಸುಡುತ್ತಾರೆ. ದಂಡದ ಭಯವಿಲ್ಲದಿದ್ದರೆ ಈ ಪ್ರಕಾರ ಬಲಿಷ್ಠರು ದುರ್ಬಲರನ್ನು ಹಿಂಸಿಸುವ ಸಾಧ್ಯತೆ ಇದೆ.

अद्यात्काकः पुरोडाशं श्वा च लिह्याद्धविस्तथा ।
स्वाम्यं च न स्यात्कस्मिंश्चित्प्रवर्तेताधरोत्तरम् ॥ २१ ॥

ಅದ್ಯಾತ್ಕಾಕಃ ಪುರೋಡಾಶಂ ಶ್ವಾ ಚ ಲಿಹ್ಯಾದ್ಧವಿಸ್ತಥಾ ।
ಸ್ವಾಮ್ಯಂ ಚ ನ ಸ್ಯಾತ್ಕಸ್ಮಿಂಶ್ಚಿತ್ಪ್ರವರ್ತೇತಾಧರೋತ್ತರಮ್ ॥ ೨೧ ॥

೨೧. ರಾಜದಂಡದ ಭಯವಿಲ್ಲದಿದ್ದರೆ ಕಾಗೆ ಪುರೋಡಾಶವನ್ನು ತಿನ್ನಬಹುದು. ಮತ್ತು ನಾಯಿ ಹವಿಸ್ಸನ್ನು ನೆಕ್ಕಬಹುದು; ಯಾವ ವಸ್ತುವಿನ ಮೇಲೂ ಯಾರ ಒಡೆಯತನವೂ ಉಳಿಯಲಾರದು. (ಹೀಗೆ) ಮೇಲುಕೀಳಿನ ವ್ಯವಸ್ಥೆ ತಲೆಕೆಳಗಾದೀತು.

೨೧. ಪುರೋಡಾಶ ಹಾಗೂ ಹವಿಸ್ಸು ಯಜ್ಞದ ಆಹುತಿಗಳಾದುದರಿಂದ ಕಾಗೆ-ನಾಯಿಗಳ ಸ್ಪರ್ಶ ಅವುಗಳಿಗಾಗಬಾರದು. ಆದರೆ ಅವ್ಯವಸ್ಥೆಯಾದಾಗ ಎಲ್ಲವೂ ತಿರುವು-ಮುರುವು ಆಗುವುವು. ಪುರೋಡಾಶ—ದೇವತೆಗಳಿಗೆ ಯಜ್ಞದಲ್ಲಿ ಅರ್ಪಿಸಲು ಹಿಟ್ಟಿನಿಂದ ಮಾಡಿದ ನೈವೇದ್ಯ.

सर्वो दण्डजितो लोको दुर्लभो हि शुचिर्नरः ।
दण्डस्य हि भयात्सर्वं जगद्भोगाय कल्पते ॥ २२ ॥

ಸರ್ವೋ ದಂಡಜಿತೋ ಲೋಕೋ ದುರ್ಲಭೋ ಹಿ ಶುಚಿರ್ನರಃ ।
ದಂಡಸ್ಯ ಹಿ ಭಯಾತ್ಸರ್ವಂ ಜಗದ್ಭೋಗಾಯ ಕಲ್ಪತೇ ॥ ೨೨ ॥

೨೨. ಎಲ್ಲರೂ ದಂಡಕ್ಕೆ ಬಗ್ಗುವವರೇ; ಶುದ್ಧಶೀಲನಾದ ಮನುಷ್ಯನು ದುರ್ಲಭ. ದಂಡದ ಭಯದಿಂದಲೇ ಜಗತ್ತು ಭೋಗಯೋಗ್ಯವಾಗುತ್ತದೆ.

೨೨. ಶಾಸನದ (ದಂಡದ) ಭಯದಿಂದ ಮನುಷ್ಯನು ಹೀನಕೃತ್ಯಗಳನ್ನು ಮಾಡುವುದಿಲ್ಲ. ಸ್ವಭಾವತಃ ಮನುಷ್ಯನು ಅಶುದ್ಧನು.

देवदानवगन्धर्वा रक्षांसि पतगोरगाः ।
तेऽपि भोगाय कल्पन्ते दण्डेनैव निपीडिताः ॥ २३ ॥

ದೇವದಾನವಗಂಧರ್ವಾ ರಕ್ಷಾಂಸಿ ಪತಗೋರಗಾಃ ।
ತೇಽಪಿ ಭೋಗಾಯ ಕಲ್ಪಂತೇ ದಂಡೇನೈವ ನಿಪೀಡಿತಾಃ ॥ ೨೩ ॥

೨೩. ದೇವ. ದಾನವ. ಗಂಧರ್ವ. ರಾಕ್ಷಸ. ಪಕ್ಷಿ. ಹಾವುಗಳು ಕೂಡ (ಪರಮಾತ್ಮನ) ದಂಡಕ್ಕಂಜಿಯೇ ಭೋಗಯೋಗ್ಯರಾಗುತ್ತಾರೆ.

೨೩. ದೇವತೆಗಳು ಕೂಡ ಜಗದೊಡೆಯನಾದ ಪರಮಾತ್ಮನ ಭಯದಿಂದ ತಮ್ಮ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುತ್ತಾರೆ. ಹೋಲಿಸಿರಿ :

भीषाऽस्माद् वातः पवते भीषोदेति सूर्यः ।
भीषाऽस्माद् अग्निश्चेन्द्रश्च मृत्युर्धावति पञ्चमः ॥
—तैत्तिरीयोपनिषत् २-८-१.

दुष्येयुः सर्ववर्णाश्च भिद्येरन्सर्वसेतवः ।
सर्वलोकप्रकोपश्च भवेद्दण्डस्य विभ्रमात् ॥ २४ ॥

ದುಷ್ಯೇಯುಃ ಸರ್ವವರ್ಣಾಶ್ಚ ಭಿದ್ಯೇರನ್ಸರ್ವಸೇತವಃ ।
ಸರ್ವಲೋಕಪ್ರಕೋಪಶ್ಚ ಭವೇದ್ದಂಡಸ್ಯ ವಿಭ್ರಮಾತ್ ॥ ೨೪ ॥

೨೪. ದಂಡದ ದುರುಪಯೋಗದಿಂದ ಎಲ್ಲ ವರ್ಣದವರೂ ಕೆಟ್ಟುಹೋದಾರು, ಎಲ್ಲ ಕಟ್ಟುಗಳೂ ಒಡೆದುಹೋದಾವು ಮತ್ತು ಎಲ್ಲೆಲ್ಲೂ ಜನಕ್ಷೋಭೆಯುಂಟಾದೀತು.

೨೪. ದಂಡದ ಅಭಾವ ಮತ್ತು ಅನುಚಿತ ಪ್ರಯೋಗವಾದರೆ ವರ್ಣಸಂಕರವಾಗುವುದು, ಶಾಸ್ತ್ರನಿಯಮಗಳ ಉಲ್ಲಂಘನೆಯಾಗುವುದು ಮತ್ತು ಸಮಾಜದಲ್ಲಿ ಅಶಾಂತಿ ಉದ್ಭವಿಸುವುದು. ವರ್ಣಗಳು ವೃತ್ತಿನಿಷ್ಠ. ಎಲ್ಲರೂ ಎಲ್ಲ ಕೆಲಸಗಳನ್ನು ಮಾಡಹೋದರೆ ಅನಾರೋಗ್ಯಕರ ಸ್ಪರ್ಧೆಯುಂಟಾಗಿ ಎಲ್ಲರಿಗೂ ನಷ್ಟ ಸಂಭವಿಸುತ್ತದೆ.

यत्र श्यामो लोहिताक्षो दण्डश्चरति पापहा ।
प्रजास्तत्र न मुह्यन्ति नेता चेत्साधु पश्यति ॥ २५ ॥

ಯತ್ರ ಶ್ಯಾಮೋ ಲೋಹಿತಾಕ್ಷೋ ದಂಡಶ್ಚರತಿ ಪಾಪಹಾ ।
ಪ್ರಜಾಸ್ತತ್ರ ನ ಮುಹ್ಯಂತಿ ನೇತಾ ಚೇತ್ಸಾಧು ಪಶ್ಯತಿ ॥ ೨೫ ॥

೨೫. ಪಾಪಹರವಾದ ಕಾರೊಡಲ ಕೆಂಗಣ್ಣ ದಂಡವು ತಿರುಗುತ್ತಿರುವೆಡೆಯಲ್ಲಿ ಪ್ರಜೆಗಳು ತಪ್ಪುಮಾಡರು; ರಾಜನು ಸರಿಯಾಗಿ ನೋಡಿ ದಂಡವನ್ನು ಪ್ರಯೋಗಿಸುವುದು ಅದಕ್ಕೆ ಅಗತ್ಯ.

೨೫. नेता चेत् साधु पश्यति—ರಾಜನು ಶಿಕ್ಷೆರಕ್ಷೆಗಳನ್ನು (ಉಚಿತವಾಗಿ) ಸರಿಯಾಗಿ ಮಾಡಿದರೆ.

तस्याहुः संप्रणेतारं राजानं सत्यवादिनम् ।
समीक्ष्यकारिणं प्राज्ञं धर्मकामार्थकोविदम् ॥ २६ ॥

ತಸ್ಯಾಹುಃ ಸಂಪ್ರಣೇತಾರಂ ರಾಜಾನಂ ಸತ್ಯವಾದಿನಂ ।
ಸಮೀಕ್ಷ್ಯಕಾರಿಣಂ ಪ್ರಾಜ್ಞಂ ಧರ್ಮಕಾಮಾರ್ಥಕೋವಿದಂ ॥ ೨೬ ॥

೨೬. ಸತ್ಯಭಾಷಿಯೂ ವಿಚಾರ ಮಾಡಿ ಕೆಲಸಮಾಡುವವನೂ ಬುದ್ಧಿವಂತನೂ ಧರ್ಮ. ಕಾಮ. ಅರ್ಥ (ಎಂಬ ಪುರುಷಾರ್ಥ) ಗಳನ್ನು ಬಲ್ಲವನೂ ಆದ ರಾಜನೇ ದಂಡವನ್ನು ವಿಧಿಸಬೇಕೆಂದು (ವಿದ್ವಾಂಸರು) ಹೇಳಿದ್ದಾರೆ.

೨೬. ಶಿಷ್ಟರಕ್ಷಣೆ ಮತ್ತು ದುಷ್ಟದಂಡನೆಗಳನ್ನು ಮಾಡಲು ಅರ್ಹನಾದ ರಾಜನ ಗುಣಗಳನ್ನು ಹೇಳಲಾಗಿದೆ.

तं राजा प्रणयन्सम्यक् त्रिवर्गेणाभिवर्धते ।
कामात्मा विषमः क्षुद्रो दण्डेनैव निहन्यते ॥ २७ ॥

ತಂ ರಾಜಾ ಪ್ರಣಯನ್‌ಸಮ್ಯಕ್ ತ್ರಿವರ್ಗೇಣಾಭಿವರ್ಧತೇ ।
ಕಾಮಾತ್ಮಾ ವಿಷಮಃ ಕ್ಷುದ್ರೋ ದಂಡೇನೈವ ನಿಹನ್ಯತೇ ॥ ೨೭ ॥

೨೭. ಅಂಥ ದಂಡವನ್ನು ಸರಿಯಾಗಿ ವಿಧಿಸುವ ರಾಜನು ಧರ್ಮಾರ್ಥಕಾಮಗಳ ಸಿದ್ಧಿಯಿಂದ ಏಳಿಗೆ ಹೊಂದುತ್ತಾನೆ. (ಹಾಗಲ್ಲದೆ) ವಿಷಯಲಂಪಟನೂ (ಬಹುಬೇಗ) ಕೆರಳುವವನೂ ಅಲ್ಪನೂ ಆದರೆ. ಅಂಥ ರಾಜನು ಆ ದಂಡದಿಂದಲೇ ನಾಶ ಹೊಂದುತ್ತಾನೆ

೨೭. ದಂಡವು ಸರಿಯಾಗಿ ಪ್ರಯುಕ್ತವಾಗದಿದ್ದರೆ (ದುರಾಡಳಿತ ನಡೆದರೆ) ಜನರಲ್ಲಿ ಕ್ಷೋಭೆಯುಂಟಾಗಿ ಮಂತ್ರಿ ಮೊದಲಾದವರ ಪ್ರಯತ್ನದಿಂದ ರಾಜನ ಅಧಿಕಾರ ಕೊನೆಗೊಳ್ಳುತ್ತದೆ.

दण्डो हि सुमहत्तेजो दुर्धरश्चाकृतात्मभिः ।
धर्माद्विचलितं हन्ति नृपमेव सबान्धवम् ॥ २८ ॥

ದಂಡೋ ಹಿ ಸುಮಹತ್ತೇಜೋ ದುರ್ಧರಶ್ಚಾಕೃತಾತ್ಮಭಿಃ ।
ಧರ್ಮಾದ್ವಿಚಲಿತಂ ಹಂತಿ ನೃಪಮೇವ ಸ ಬಾಂಧವಮ್ ॥ ೨೮ ॥

೨೮. ದಂಡವೆಂಬುದೊಂದು ಮಹಾತೇಜಸ್ಸು: ಅದ್ದರಿಂದಲೇ ಅಸಂಯಮಿಗಳದನ್ನು ಹಿಡಿಯಲಾರರು: ಧರ್ಮಭ್ರಷ್ಟ ರಾಜನನ್ನದು ಪರಿವಾರ ಸಮೇತ ನಾಶಮಾಡುತ್ತದೆ,

೨೮. अकृतात्मभिः—ಧರ್ಮಶಾಸ್ತ್ರದ ಸಂಸ್ಕಾರವಿಲ್ಲದ ಸ್ವೇಚ್ಛಾಚಾರಿಗಳಿಗೆ ದಂಡಪ್ರಯೋಗದ ತಿಳಿವಳಿಕೆ ಬರುವುದು ಕಠಿನ: ಏಕೆಂದರೆ ಅದು ಬೆಂಕಿಯಂತಿದೆ. ದಂಡದ ದುರುಪಯೋಗದಿಂದ ರಾಜನಲ್ಲದೆ ಅವನ ಪುತ್ರ-ಬಾಂಧವಾದಿಗಳೂ ಹಾಳಾಗುತ್ತಾರೆ. ಅಪಪ್ರಶಾಸನ ನಡೆದರೆ ಜನರು ಸರಕಾರವನ್ನು ಉರುಳಿಸುತ್ತಾರೆ—ಎಂದರ್ಥ. ಶಿಕ್ಷೆ-ರಕ್ಷೆಗಳನ್ನು ಮಾಡದಿರುವುದು ಮತ್ತು ತಪ್ಪಾಗಿ ಮಾಡುವುದು ಅಪಪ್ರಶಾಸನ (ದುರಾಡಳಿತ).

ततो दुर्गं च राष्ट्रं च लोकं च सचराचरम् ।
अन्तरिक्षगतांश्चैव मुनीन्देवांश्च पीडयेत् ॥ २९ ॥

ತತೋ ದುರ್ಗಂ ಚ ರಾಷ್ಟ್ರಂಚ ಲೋಕಂ ಚ ಸಚರಾಚರಮ್ ।
ಅಂತರಿಕ್ಷಗತಾಂಶ್ಚೈವ ಮುನೀನ್ದೇವಾಂಶ್ಚ ಪೀಡಯೇತ್ ॥ ೨೯ ॥

೨೯. ಆಮೇಲೆ ಅದು ಕೋಟೆ. ನಾಡು ಮತ್ತು ಚರಾಚರ ಜಗತ್ತನ್ನಷ್ಟೇ ಅಲ್ಲದೆ. ಅಂತರಿಕ್ಷದಲ್ಲಿರುವ ಮುನಿಗಳನ್ನೂ ದೇವತೆಗಳನ್ನೂ ಪೀಡಿಸೀತು !

೨೯. ದಂಡದ ದುರುಪಯೋಗವು ರಾಜನನ್ನು ಮತ್ತು ಅವನ ಬಳಗವನ್ನಲ್ಲದೆ ಎಲ್ಲರನ್ನೂ ಪೀಡಿಸುವುದು. ಸ್ವರ್ಗಸ್ಥರಾದ ಮುನಿಗಳಿಗೆ ಮತ್ತು ದೇವತೆಗಳಿಗೆ ಸಹ ಹವಿರ್ಭಾಗ ಸಿಗದೆ ತೊಂದರೆಯುಂಟಾಗುವುದು.

सोऽसहायेन मूढेन लुब्धेनाकृतबुद्धिना ।
न शक्यो न्यायतो नेतुं सक्तेन विषयेषु च ॥ ३० ॥

ಸೋಽಸಹಾಯೇನ ಮೂಢೇನ ಲುಬ್ಧೇನಾಕೃತಬುದ್ಧಿನಾ ।
ನ ಶಕ್ಯೋ ನ್ಯಾಯತೋ ನೇತುಂ ಸಕ್ತೇನ ವಿಷಯೇಷು ಚ ॥ ೩೦ ॥

೩೦. (ಮಂತ್ರಿ ಮೊದಲಾದವರ) ಬೆಂಬಲವಿಲ್ಲದವನೂ ಅಜ್ಞಾನಿಯೂ ಲೋಭಿಯೂ ಶಾಸ್ತ್ರನಿಶ್ಚಯವಿಲ್ಲದವನೂ ವಿಷಯಾಸಕ್ತನೂ ಆದ ರಾಜನು ದಂಡವನ್ನು ನ್ಯಾಯದಂತೆ ವಿಧಿಸಲು ಸಮರ್ಥನಾಗನು.

೩೦. अकृतबुद्धिः—ಶಾಸ್ತ್ರದ ಅಭ್ಯಾಸದಿಂದ ಬರುವ ನಿಶ್ಚಯಬುದ್ಧಿ ಇಲ್ಲದವನು.

असहायेन—मन्त्रि-सेनापतिपुरोहितादिसहायरहितेन (कु०) — ಮಂತ್ರಿ ಪುರೋಹಿತಾದಿಗಳ ಬೆಂಬಲವಿಲ್ಲದ (ರಾಜನಿಂದ).

शुचिना सत्यसंधेन यथाशास्त्रानुसारिणा ।
प्रणेतुं शक्यते दण्डः सुसहायेन धीमता ॥ ३१ ॥

ಶುಚಿನಾ ಸತ್ಯಸಂಧೇನ ಯಥಾಶಾಸ್ತ್ರಾನುಸಾರಿಣಾ ।
ಪ್ರಣೇತುಂ ಶಕ್ಯತೇ ದಂಡಃ ಸುಸಹಾಯೇನ ಧೀಮತಾ ॥ ೩೧ ॥

೩೧. ಶುದ್ಧನೂ ಸತ್ಯಸಂಧನೂ ಶಾಸ್ತ್ರದಂತೆ ನಡೆದುಕೊಳ್ಳುವವನೂ ಒಳ್ಳೆಯ ಬೆಂಬಲವುಳ್ಳವನೂ ಬುದ್ಧಿವಂತನೂ ಆದ ರಾಜನು ದಂಡವನ್ನು ವಿಧಿಸಲು ಸಮರ್ಥ.

೩೧. सत्यसन्ध—ಸತ್ಯವೇ ಮುಖ್ಯವೆಂದು ತಿಳಿಯುವವನು (ಮೇ.); ಕೊಟ್ಟ ಮಾತನ್ನು ಪಾಲಿಸುವವನು (ಗೋ. ಗು. ರಾಘು.).

स्वराष्ट्रे न्यायवृत्तः स्याद्भृशदण्डश्च शत्रुषु ।
सुहृत्स्वजिह्मः स्निग्धेषु ब्राह्मणेषु क्षमान्वितः ॥ ३२ ॥

ಸ್ವರಾಷ್ಟ್ರೇ ನ್ಯಾಯವೃತ್ತಃ ಸ್ಯಾದ್ಭೃಶದಂಡಶ್ಚ ಶತ್ರುಷು ।
ಸುಹೃತ್ಸ್ವಜಿಹ್ಮಃ ಸ್ನಿಗ್ಧೇಷು ಬ್ರಾಹ್ಮಣೇಷು ಕ್ಷಮಾನ್ವಿತಃ ॥ ೩೨ ॥

೩೨. ರಾಜನು ತನ್ನ ರಾಜ್ಯದಲ್ಲಿ ನ್ಯಾಯದಿಂದ ನಡೆಯಬೇಕು. ಹಗೆಗಳ ಮೇಲೆ ತೀಕ್ಷ್ಣವಾಗಿ ದಂಡಪ್ರಯೋಗ ಮಾಡುವವನಾಗಿರಬೇಕು. ಪ್ರಿಯ ಮಿತ್ರರಲ್ಲಿ ನೇರ್ಪಾಡೆ-ಯುಳ್ಳವನಾಗಿರಬೇಕು ಮತ್ತು ಬ್ರಾಹ್ಮಣರಲ್ಲಿ ಕ್ಷಮಾವಂತನಾಗಿರಬೇಕು.

೩೨. स्वराष्ट्रे—कश्मीरकस्य काश्मीरः, पञ्चालस्य पाञ्चालः (मे०)—ತನ್ನ ರಾಜ್ಯದಲ್ಲಿರುವ ನಿಯಮಗಳಂತೆ ರಾಜನು ತನ್ನ ರಾಜ್ಯದ ಪ್ರಜೆಗಳಿಗೆ ನ್ಯಾಯವನ್ನು ಕೊಡಬೇಕು; ಬೇರೆ ಬೇರೆ ರಾಜ್ಯಗಳ ಶಾಸನಗಳು ಬೇರೆ ಬೇರೆ ಯಾಗಿದ್ದಾಗ ಅವುಗಳಂತೆಯೇ ಅಲ್ಲಲ್ಲಿ ನ್ಯಾಯದಾನ ಮಾಡಬೇಕು.

ब्राह्मणेषु कृताल्पापराधेषु (कु०)—ಒಂದು ವೇಳೆ ವಿದ್ವಾಂಸರೂ ಚಿಕ್ಕ ತಪ್ಪು ಮಾಡಿದ್ದರೆ ಅವರನ್ನು ಕ್ಷಮಿಸಬೇಕು. ('A word for the wise and a rod for the fool').

एवंवृत्तस्य नृपतेः शिलोञ्छेनापि जीवतः ।
विस्तीर्यते यशो लोके तैलबिन्दुरिवाम्भसि ॥ ३३ ॥

ಏವಂವೃತ್ತಸ್ಯ ನೃಪತೇಃ ಶಿಲೋಂಛೇನಾಪಿ ಜೀವತಃ ।
ವಿಸ್ತೀರ್ಯತೇ ಯಶೋ ಲೋಕೇ ತೈಲಬಿಂದುರಿವಾಂಭಸಿ ॥ ೩೩ ॥

೩೩. ಹೀಗೆ ವರ್ತಿಸುವ ರಾಜನಿಗೆ ಹಕ್ಕಲಾರಿಸುವಷ್ಟು ದಟ್ಟದಾರಿದ್ರ್ಯ ಬಂದರೂ ಅವನ ಕೀರ್ತಿಯು ನೀರಲ್ಲಿ ಬಿದ್ದ ಎಣ್ಣೆಯ ಹನಿಯಂತೆ ಲೋಕದಲ್ಲೆಲ್ಲ ಹರಡುತ್ತದೆ.

೩೩. शिलोञ्छेन—उञ्छो धान्यकणादानं काणिशाद्यर्जनं शिलम्—ಗದ್ದೆಯಲ್ಲಿ ಸುಗ್ಗಿಯಾದ ಮೇಲೆ ಬಿದ್ದಿರುವ ಧಾನ್ಯಕಣಗಳನ್ನು ಆರಿಸಿಕೊಳ್ಳುವುದಕ್ಕೆ 'ಉಂಛ' ಎಂದೂ ಒಂದೊಂದೇ ತೆನೆಯನ್ನು ಎತ್ತಿಕೊಳ್ಳುವುದಕ್ಕೆ 'ಶಿಲ' ಎಂದೂ ಹೆಸರು. ಹೀಗೆ ಬಾಳಬೇಕಾದ (ಅತಿ ಬಡತನದ) ಪ್ರಸಂಗ ಬಂದರೂ ರಾಜನು ನ್ಯಾಯಶೀಲನಾಗಿಯೇ ಇರಬೇಕು; ಅದರಿಂದಲೇ ಅವನಿಗೆ ಕೀರ್ತಿ ಬರುತ್ತದೆ. ಅಂದಿನ ಭಾರತದಲ್ಲಿ ಹಣಕ್ಕಿಲ್ಲದ ಬೆಲೆ ನ್ಯಾಯಕ್ಕಿತ್ತು !

अतस्तु विपरीतस्य नृपतेरजितात्मनः
संक्षिप्यते यशो लोके घृतबिन्दुरिवाम्भसि ॥ ३४ ॥

ಅತಸ್ತು ವಿಪರೀತಸ್ಯ ನೃಪತೇರಜಿತಾತ್ಮನಃ ।
ಸಂಕ್ಷಿಪ್ಯತೇ ಯಶೋ ಲೋಕೇ ಘೃತಬಿಂದುರಿವಾಂಭಸಿ ॥ ೩೪ ॥

೩೪. ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಅಸಂಯಮಿಯಾದ ರಾಜನ ಕೀರ್ತಿಯು ನೀರಲ್ಲಿ ಬಿದ್ದ ತುಪ್ಪದ ಹನಿಯಂತೆ ಲೋಕದಲ್ಲಿ ಕ್ಷೀಣವಾಗಿ ಹೋಗುತ್ತದೆ.

೩೪. अजितात्मनः—लोभाद्यासक्तचित्तस्य (राम०)—ಆರು ವರ್ಗಗಳಿಗೆ ಆಳಾದವನ.

स्वे स्वे धर्मे निविष्टानां सर्वेषामनुपूर्वशः ।
वर्णानामाश्रमाणां च राजा सृष्टोऽभिरक्षिता ॥ ३५ ॥

ಸ್ವೇ ಸ್ವೇ ಧರ್ಮೇ ನಿವಿಷ್ಟಾನಾಂ ಸರ್ವೇಷಾಮನುಪೂರ್ವಶಃ ।
ವರ್ಣಾನಾಮಾಶ್ರಮಾಣಾಂ ಚ ರಾಜಾ ಸೃಷ್ಟೋಽಭಿರಕ್ಷಿತಾ ॥ ೩೫ ॥

೩೫. ತಮ್ಮ ತಮ್ಮ ಧರ್ಮದಲ್ಲಿ ಅನುಕ್ರಮವಾಗಿ ಇದ್ದುಕೊಂಡಿರುವ ಎಲ್ಲ ವರ್ಣಗಳ ಹಾಗೂ ಆಶ್ರಮಿಗಳ ರಕ್ಷಕನನ್ನಾಗಿ (ಬ್ರಹ್ಮನು) ರಾಜನನ್ನು ಹುಟ್ಟಿಸಿದನು.

೩೫. वर्णानामाश्रमाणां च—ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು: ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸ ಎಂಬ ನಾಲ್ಕು ಆಶ್ರಮಗಳು. ವರ್ಣಾಶ್ರಮ ನಿಯಮಗಳಂತೆ ನಡೆಯುವ ಜನರ ರಕ್ಷಣೆಯನ್ನು ಮಾಡುವುದು ರಾಜನ ಕರ್ತವ್ಯ; ಹಾಗೆ ನಡೆಯದವರನ್ನು ಶಿಕ್ಷಿಸುವುದೂ (ಅಂದು) ಅವನ ಕರ್ತವ್ಯವಾಗಿತ್ತು. ಸಾಮಾಜಿಕ-ಕೌಟುಂಬಿಕ ಸಂಬಂಧಗಳ ಬಗೆಗಿನ ಕಾಯಿದೆಗಳನ್ನು ಉಲ್ಲಂಘಿಸಿದರೆ ಈಗಲೂ ಸರಕಾರ ಶಿಕ್ಷಿಸಬೇಕು.

तेन यद्यत्सभृत्येन कर्तव्यं रक्षता प्रजाः ।
तत्तद्वोऽहं प्रवक्ष्यामि यथावदनुपूर्वशः ॥ ३६ ॥

ತೇನ ಯದ್ಯತ್ಸಭೃತ್ಯೇನ ಕರ್ತವ್ಯಂ ರಕ್ಷತಾ ಪ್ರಜಾಃ ।
ತತ್ತದ್ವೋಽಹಂ ಪ್ರವಕ್ಷ್ಯಾಮಿ ಯಥಾವದನುಪೂರ್ವಶಃ ॥ ೩೬ ॥

೩೬. ಆದ್ದರಿಂದ ಭೃತ್ಯವರ್ಗದೊಂದಿಗೆ ಪ್ರಜಾಪಾಲನೆ ಮಾಡುತ್ತಿರುವ ರಾಜನು ಮಾಡಬೇಕಾದುದೆಲ್ಲವನ್ನೂ ಸರಿಯಾಗಿ ನಾನು ನಿಮಗೆ ಕ್ರಮಶಃ ಹೇಳುವೆನು.

೩೬. सभृत्येन—ಇಲ್ಲಿ 'ಭೃತ್ಯ' ಎಂದರೆ ಅಮಾತ್ಯಾದಿಗಳೆಂದು ಗ್ರಹಿಸಬೇಕು.
यथावत्—ಶಾಸ್ತ್ರದಲ್ಲಿ ಹೇಳಿದಂತೆ, ಸರಿಯಾಗಿ.

ब्राह्मणान्पर्युपासीत प्रातरुत्थाय पार्थिवः ।
त्रैविद्यवृद्धान्विदुषस्तिष्ठेत्तेषां च शासने ॥ ३७ ॥

ಬ್ರಾಹ್ಮಣಾನ್ ಪರ್ಯುಪಾಸೀತ ಪ್ರಾತರುತ್ಥಾಯ ಪಾರ್ಥಿವಃ ।
ತ್ರೈವಿದ್ಯವೃದ್ಧಾನ್‌ವಿದುಷಸ್ತಿಷ್ಠೇತ್ತೇಷಾಂ ಚ ಶಾಸನೇ ॥ ೩೭ ॥

೩೭. ಬೆಳಿಗ್ಗೆ ಎದ್ದು ರಾಜನು ಮೂರು ವೇದಗಳನ್ನೋದಿ ವಿದ್ವಾಂಸರಾದ ಬ್ರಾಹ್ಮಣರನ್ನು ಪೂಜಿಸಬೇಕು ಮತ್ತು ಅವರ ಆಜ್ಞೆಯಂತೆ ನಡೆದುಕೊಳ್ಳಬೇಕು.

೩೭. त्रैविद्यवृद्धान्– ಋಕ್, ಯಜುಸ್, ಸಾಮವೇದಗಳಲ್ಲಿ ಪಾರಂಗತರು; ವೇದವೇತ್ತರು.
विदुषः—ವೇದಗಳ ಅರ್ಥವನ್ನು ಬಲ್ಲವರು (ಮೇ.).
—ರಾಜನೀತಿ ಪಂಡಿತರು (ಕು.).

वृद्धांश्च नित्यं सेवेत विप्रान्वेदविदः शुचीन् ।
वृद्धसेवी हि सततं रक्षोभिरपि पूज्यते ॥ ३८ ॥

ವೃದ್ಧಾಂಶ್ಚ ನಿತ್ಯಂ ಸೇವೇತ ವಿಪ್ರಾನ್ವೇದವಿದಃ ಶುಚೀನ್ ।
ವೃದ್ಧಸೇವೀ ಹಿ ಸತತಂ ರಕ್ಷೋಭಿರಪಿ ಪೂಜ್ಯತೇ ॥ ೩೮ ॥

೩೮. ವೇದವನ್ನೋದಿ ಪವಿತ್ರಹೃದಯರಾದ ವೃದ್ಧಬ್ರಾಹ್ಮಣರ ಸೇವೆಯನ್ನು ರಾಜನು ನಿತ್ಯವೂ ಮಾಡಬೇಕು. ಏಕೆಂದರೆ, ಹಳಬರ ಸೇವೆಯನ್ನು ಯಾವಾಗಲೂ ಮಾಡುವವನನ್ನು ರಾಕ್ಷಸರು ಕೂಡ ಗೌರವಿಸುತ್ತಾರೆ (ಎಂದ ಮೇಲೆ ಮನುಷ್ಯರು ಅಂಥವನನ್ನು ಗೌರವಿಸಿದರೆ ಅದರಲ್ಲೇನಾಶ್ಚರ್ಯವಿದೆ?).

೩೮. वृद्धान्—वयोवृद्धान्, तेषां पुरावृत्तज्ञतया ऊहापोहशक्तत्वात् (स०).
रक्षोभिरपि—ದುಷ್ಟರಿಂದ ಕೂಡ ಎಂದು ತಾತ್ಪರ್ಯ.

तेभ्योऽधिगच्छेद्विनयं विनीतात्मापि नित्यशः ।
विनीतात्मा हि नृपतिर्न विनश्यति कर्हिचित् ॥ ३९ ॥

ತೇಭ್ಯೋಽಧಿಗಚ್ಛೇದ್ವಿನಯಂ ವಿನೀತಾತ್ಮಾಪಿ ನಿತ್ಯಶಃ ।
ವಿನೀತಾತ್ಮಾ ಹಿ ನೃಪತಿರ್ನ ವಿನಶ್ಯತಿ ಕರ್ಹಿಚಿತ್ ॥ ೩೯ ॥

೩೯. ಆಗಲೇ ತಾನು ವಿನೀತನಾಗಿದ್ದರೂ ಅವರಿಂದ ರಾಜನು ದಿನವೂ ವಿನಯವನ್ನು ಕಲಿತುಕೊಳ್ಳಬೇಕು. ಏಕೆಂದರೆ, ವಿನೀತನಾದ ರಾಜನು ಎಂದೂ ನಾಶಹೊಂದನು.

೩೯. विनीतात्मा अपि—तं (चन्द्रापीडं) आरूढविनयमपि विनीततरमिच्छन् कर्तुं शुकनासः सविस्तरमुवाच (कादम्बरीपूर्वभाग).

बहवोऽविनयान्नष्टा राजानः सपरिच्छदाः ।
वनस्था अपि राज्यानि विनयात्प्रतिपेदिरे ॥ ४० ॥

ಬಹವೋಽವಿನಯಾನ್ನಷ್ಟಾ ರಾಜಾನಃ ಸಪರಿಚ್ಛದಾಃ ।
ವನಸ್ಥಾ ಅಪಿ ರಾಜ್ಯಾನಿ ವಿನಯಾತ್ಪ್ರತಿಪೇದಿರೇ ॥ ೪೦ ॥

೪೦. ಅವಿನಯದ ದೆಸೆಯಿಂದ ಅನೇಕ ರಾಜರು ಸರ್ವಸ್ವದೊಡನೆ ನಾಶಹೊಂದಿದರು. ಕಾಡುಪಾಲಾದ ರಾಜರು ಕೂಡ (ತಮ್ಮ) ವಿನಯದ ದೆಸೆಯಿಂದ ರಾಜ್ಯಗಳನ್ನು ಪಡೆದರು.

೪೦. ವಿನಯ (ನಮ್ರತೆ) ರಹಿತರಾದ ಮತ್ತು ವಿನಯ ಸಹಿತರಾದ ರಾಜರ ಹೆಸರುಗಳನ್ನು ಮುಂದಿನ ಎರಡು ಶ್ಲೋಕಗಳಲ್ಲಿ ಹೇಳಲಾಗಿದೆ. ರಾಜನು ನಮ್ರನಾಗಿರುವುದು ಬಹಳ ಅಗತ್ಯ. ಶಾಸ್ತ್ರೋಕ್ತ ನೀತಿಗಳಿಗನುಸಾರವಾಗಿ ವಿಧೇಯತೆಯಿಂದ ವರ್ತಿಸುವುದು ವಿನಯ ಅಥವಾ ನಮ್ರತೆ.

वेनो विनष्टोऽविनयान्नहुषश्चैव पार्थिवः ।
सुदाः पैजवनश्चैव सुमुखो निमिरेव च ॥ ४१ ॥
ವೇನೋ ವಿನಷ್ಟೋऽವಿನಯಾನ್ನಹುಷಶ್ಚೈವ ಪಾರ್ಥಿವಃ ।
ಸುದಾಃ ಪೈಜವನಶ್ಚೈವ ಸುಮುಖೋ ನಿಮಿರೇವ ಚ ॥ ೪೧ ॥

೪೧. ಅವಿನಯದ ದೆಸೆಯಿಂದ ರಾಜರಾಗಿದ್ದ ವೇನ, ನಹುಷ, ಪಿಜವನನ ಮಗ ಸುದಾಸ, ಸುಮುಖ ಮತ್ತು ನಿಮಿಗಳೇ ನಾಶಹೊಂದಿದರು !

೪೧. **वेन**—ಇವನು ಬಹಳ ಕ್ರೂರಿಯಾದ ರಾಜ: ತನ್ನ ರಾಜ್ಯದಲ್ಲಿ ಯಜ್ಞಯಾಗಾದಿಗಳನ್ನು ಮಾಡದೆ. ಜನರು ರಾಜನಾದ ತನ್ನನ್ನೇ ಪೂಜಿಸಬೇಕೆಂಬ ಆಜ್ಞೆಯನ್ನು ಹೊರಡಿಸಿದ; ತಾನೇ ದೇವತೆಗಳನ್ನು ಮೀರಿಸಿದವನೆಂದು ಹೇಳಿಕೊಂಡ. ಇವನು ಅತಿ ಹಿಂಸಾಚಾರಕ್ಕಿಳಿದಾಗ ಋಷಿಗಳಿಂದ ಹತನಾದನು (ಹರಿವಂಶ ೧.೫; ವಾಯುಪುರಾಣ ೨. ೧; ಭಾಗವತ ೪, ೧೪: ವಿಷ್ಣುಪುರಾಣ ೪, ೧೩; ಮತ್ಸ್ಯಪುರಾಣ ೧೦, ೧, ೧೦).

नहुष—ಪುರೂರವನ ಮೊಮ್ಮಗನಾದ ಹಾಗೂ ಆಯುವಿನ ಮಗನಾದ ನಹುಷನು ಬಹಳ ಶೂರನಾದ ರಾಜನಾಗಿದ್ದ. ಇಂದ್ರನು ಬ್ರಹ್ಮಹತ್ಯಾದೋಷದ ಭಯದಿಂದ ಓಡಿಹೋದಾಗ ಅವನಿಗೆ ಇಂದ್ರಪದವನ್ನು ಕೊಡಲಾಯಿತು. ಆಗ ಅವನು ಇಂದ್ರಪತ್ನಿಯಾದ ಶಚಿ ತನ್ನ ಹೆಂಡತಿಯಾಗಬೇಕೆಂದು ಬಯಸಿದ. ಅವನ ಪಲ್ಲಕ್ಕಿಯನ್ನು ಅವನ ಆಜ್ಞೆಯಂತೆ ಋಷಿಗಳು ಹೊತ್ತುಕೊಂಡು ಅವಳೆಡೆಗೆ ಹೋಗುವಾಗ ಅವನು ಅಗಸ್ತ್ಯಋಷಿಗಳನ್ನು ಒದ್ದು ಬೇಗ ಬೇಗ ಹೋಗ ಹೇಳಿದ. ಕೋಪಗೊಂಡ ಅಗಸ್ತ್ಯರ ಶಾಪದಿಂದ ಅವನು ಸರ್ಪವಾಗಿ ಭೂಮಿಯಲ್ಲಿ ಬಿದ್ದನು (ಮಹಾಭಾರತ, ಉದ್ಯೋಗಪರ್ವ ೧೧–೧೭, ಅನುಶಾಸನಪರ್ವ ೧೫೬–೧೫೭. ವನಪರ್ವ ೧೭೮–೧೮೧).

सुदास—ಇವನು ಪಿಜವನರಾಜನ ಮಗ (ನಿರುಕ್ತ ೨. ೨೪). ದಾಶರಾಜ ಯುದ್ಧದಲ್ಲಿ ವಸಿಷ್ಠರ ನೆರವಿನಿಂದ ಹತ್ತು ರಾಜರ ವಿರುದ್ಧ ಹೋರಾಡಿ ಇವನು ಗೆದ್ದ (ಋಗ್ವೇದ ೭, ೧೮). ವಿಪಾಟ್ ಮತ್ತು ಶುತುದ್ರಿ ನದಿಗಳನ್ನು ಇವನು ವಿಶ್ವಾಮಿತ್ರರ ಸಹಾಯದಿಂದ ಸುರಕ್ಷಿತವಾಗಿ ದಾಟಿದ (೩. ೩೩). ಇವನಿಗೆ ವಸಿಷ್ಠರು ಪಟ್ಟಾಭಿಷೇಕ ಮಾಡಿದರು (ಐತರೇಯ ಬ್ರಾಹ್ಮಣ ೮. ೨೧). ಇವನು ಅವಿನಯದಿಂದ ನಾಶಹೊಂದಿದನೆಂದು ಮತ್ತೆಲ್ಲೂ ಉಲ್ಲೇಖವಿಲ್ಲ: ಆದ್ದರಿಂದ ಹಲವು ಹಸ್ತಲಿಖಿತ ಪ್ರತಿಗಳಲ್ಲಿ '**सुदासो यवनश्चैव**' ಎಂಬ ಪಾಠಾಂತರವಿದೆ (ಸುದಾಸನೆಂಬ ಯವನ ರಾಜನಾಗಿರಬಹುದು).

सुमुख—ಈ ಹೆಸರಿನ ದುಷ್ಟರಾಜನು ಇತಿಹಾಸ-ಪುರಾಣಗಳಲ್ಲಿ ಪ್ರಸಿದ್ಧನಾಗಿಲ್ಲ.

निमि—ಇವನು ಅಯೋಧ್ಯೆಯ ಇಕ್ಷ್ವಾಕುವಿನ ಹನ್ನೆರಡನೆಯ ಮಗ. ಇವನು ಕಟ್ಟಿಸಿದ 'ವೈಜಯಂತ' ಎಂಬ ನಗರವು ದಂಡಕಾರಣ್ಯದಲ್ಲಿತ್ತೆಂದು ರಾಮಾಯಣದಲ್ಲಿ ಹೇಳಿದೆ (ಅಯೋಧ್ಯಾಕಾಂಡ ೯.೧೨). ನಿಮಿಯು ಒಮ್ಮೆ ತನ್ನ ಸ್ತ್ರೀಯರ ಜೊತೆಗೆ ಜೂಜಾಡುತ್ತ ಕುಳಿತಿದ್ದಾಗ ವಸಿಷ್ಠರು ಅಲ್ಲಿಗೆ ಬಂದರು. ಅವನಾಗ ಎದ್ದು ನಿಲ್ಲಲಿಲ್ಲ ಮತ್ತು ಅವರನ್ನು ಸತ್ಕರಿಸಲಿಲ್ಲ. ಆದ್ದರಿಂದ ವಸಿಷ್ಠರು

ಶಾಪ ಕೊಟ್ಟು ಅವನಿಗೆ ದೇಹವಿಲ್ಲದಂತೆ ಮಾಡಿದರು (ಪದ್ಮಪುರಾಣ, ಪಾತಾಳಖಂಡ ೫. ೨೨). ಅನಂತರ ಇವನು ಎಲ್ಲರ ಕಣ್ಣುಗಳಲ್ಲಿ ಇರತೊಡಗಿದನು. ಅದರಿಂದಲೇ ನಮ್ಮ ಕಣ್ಣುಗಳು ಮೇಲಿಂದ ಮೇಲೆ ಮುಚ್ಚುತ್ತವೆಯಂತೆ (ನಿಮಿಷ=ಮುಚ್ಚುವುದು)—(ಭಾಗವತ ೯. ೧೩: ವಿಷ್ಣುಪುರಾಣ ೪, ೫; ರಾಮಾಯಣ, ಉತ್ತರಕಾಂಡ ೫೫, ೫೭).

पृथुस्तु विनयाद्राज्यं प्राप्तवान्मनुरेव च ।
कुबेरश्च धनैश्वर्यं ब्राह्मण्यं चैव गाधिजः ॥ ४२ ॥

ಪೃಥುಸ್ತು ವಿನಯಾದ್ರಾಜ್ಯಂ ಪ್ರಾಪ್ತವಾನ್‌ಮನುರೇವ ಚ ।
ಕುಬೇರಶ್ಚ ಧನೈಶ್ವರ್ಯಂ ಬ್ರಾಹ್ಮಣ್ಯಂ ಚೈವ ಗಾಧಿಜಃ ॥ ೪೨ ॥

೪೨. ಪೃಥುವೂ ಮನುವೂ (ತಮ್ಮ) ವಿನಯದಿಂದಲೇ ರಾಜ್ಯಗಳನ್ನು ಪಡೆದರು; ಕುಬೇರನು ಧನಾಧಿಪತಿಯಾದನು ಮತ್ತು ಗಾಧಿಯ ಮಗ (ವಿಶ್ವಾಮಿತ್ರನು) ಬ್ರಾಹ್ಮಣಿಕೆಯನ್ನು ಪಡೆದನು.

೪೨. पृथु—ವೇನನನ್ನು ಕೊಂದ ಮೇಲೆ ಅವನ ಬಲಗೈಯನ್ನು ಕಡೆದು ಋಷಿಗಳು ಪೃಥು ರಾಜನನ್ನು ಸೃಷ್ಟಿಸಿದರು. ಅವನು ರಾಜನಾದಾಗ ಭೂಮಿಯಲ್ಲಿ ಚೆನ್ನಾಗಿ ಬೆಳೆ ಬರುತ್ತಿರಲಿಲ್ಲ. ಆದ್ದರಿಂದ ಅವನು ತನ್ನ ಬಿಲ್ಲನ್ನು ತೆಗೆದುಕೊಂಡು ಭೂಮಿಯನ್ನು ಶಿಕ್ಷಿಸಲು ಹೊರಟ. ಆಗ ಭೂಮಿತಾಯಿಯು ಗೋವಿನ ರೂಪವನ್ನು ಧರಿಸಿ ಅವನನ್ನು ಕುರಿತು—"ನನಗೆ ಒಂದು ಕರುವನ್ನು ಕೊಟ್ಟರೆ ಅದರ ಮೂಲಕ ಲೋಕದ ಎಲ್ಲ ಅವಶ್ಯಕತೆಗಳನ್ನೂ ಪೂರೈಸುವೆನು"—ಎಂದಿತು. ಪೃಥುವು ಆಗ (೧೪ ಮನುಗಳಲ್ಲಿ ಮೊದಲನೆಯವನಾದ) ಸ್ವಾಯಂಭುವ ಮನುವಿಗೆ ಕರುವಿನ ರೂಪವನ್ನು ಕೊಟ್ಟನು. ಆ ಮೇಲೆ ಭೂಮಿಯು ಎಲ್ಲ ಬಗೆಯ ಬೆಳೆಗಳಿಂದ ಸಮೃದ್ಧವಾಯ್ತು. ಪೃಥು ಅಭಯ ನೀಡಿದ್ದರಿಂದ ಭೂಮಿಗೆ 'ಪೃಥ್ವೀ' ಎಂಬ ಹೆಸರು ಬಂತು (ವಿಷ್ಣುಪುರಾಣ ೧, ೧೭; ಪದ್ಮಪುರಾಣ, ಭೂಮಿಖಂಡ ೨೮: ಭಾಗವತ ೪. ೧೮: ಮಹಾಭಾರತ, ಶಾಂತಿಪರ್ವ ೨೮–೧೫೦: ಬ್ರಹ್ಮಾಂಡ ಪುರಾಣ ೨, ೩೭; AV. viii–28. 11; ರಘುವಂಶ).

मनु—ಪುರಾಣಗಳಲ್ಲಿ ೧೪ ಮನುಗಳ ಉಲ್ಲೇಖವಿದೆ: ಅವರೆಲ್ಲರ ಮತ್ತು ಅವರವರ ಸಂಧಿಕಾಲಗಳ ಒಟ್ಟು ಮೊತ್ತ ೪೩೨ ಕೋಟಿ ವರ್ಷಗಳಾಗುತ್ತವೆ. ಪ್ರತಿಯೊಬ್ಬ ಮನುವೂ ಅವನವನ ಹೆಸರಿನ ಮನ್ವಂತರದ ಅಧಿಪತಿ. ಮನುಗಾಲ ೩೦.೬೭.೨೦.೦೦೦ ವರ್ಷಗಳು. ಈಗ ನಡೆಯುತ್ತಿರುವ ಮನ್ವಂತರದ ಅಧಿಪತಿ ವೈವಸ್ವತ: ಅವನು ಸೂರ್ಯಪುತ್ರ. ಅವನು ಒಂದು ಸಣ್ಣ ಮೀನನ್ನು ಸಂರಕ್ಷಿಸಿ ಬೆಳೆಸಿದನು. ಮುಂದೆ ಜಲಪ್ರಳಯ ಆರಂಭವಾದಾಗ ಆ ಮೀನು ಮನು ಕುಳಿತುಕೊಂಡಿದ್ದ ನೌಕೆಯನ್ನು ಹಿಮಾಲಯದ ಶಿಖರಕ್ಕೆ ಒಯ್ದು ಅವನ ರಕ್ಷಣೆ ಮಾಡಿತು. ಈ ಮನುವಿನಿಂದ (ಈ ಮನ್ವಂತರದ) ಮನುಷ್ಯಕುಲ ಹುಟ್ಟಿತು (ಶತಪಥ ಬ್ರಾಹ್ಮಣ ೧. ೮. ೧. ೧: ಹರಿವಂಶ ೧. ೭: ವಿಷ್ಣುಪುರಾಣ ೩, ೧–೨; ಭಾಗವತ ೮, ೧–೧೩).

कुबेर—ವಿಶ್ರವಸ್ ಋಷಿಯ ಮಗನಾದ ಇವನು ಧನಪತಿ ಪದವಿಗಾಗಿ ತಪಸ್ಸು ಮಾಡಿದನು. ಬ್ರಹ್ಮನ ವರದಿಂದ ಇವನಿಗೆ ಲಂಕಾಪಟ್ಟಣ, ಪುಷ್ಪಕವಿಮಾನ, ಯಕ್ಷರ ಆಧಿಪತ್ಯ, ಧನಪತಿತ್ವ ಮತ್ತು ನಲಕೂಬರರೆಂಬ ಮಕ್ಕಳು ದೊರೆತವು (ಮಹಾಭಾರತ, ಶಲ್ಯಪರ್ವ ೪೭; ಪದ್ಮಪುರಾಣ, ಸ್ವರ್ಗಖಂಡ ೧೬).

विश्वामित्र—ಗಾಧಿಪುತ್ರನಾದ ಇವನು ಜನ್ಮತಃ ಕ್ಷತ್ರಿಯ; ವಸಿಷ್ಠರಂತೆ ತಾನೂ ಬ್ರಹ್ಮರ್ಷಿಯಾಗಬೇಕೆಂದು ಬಹಳ ಕಾಲ ತಪಸ್ಸು ಮಾಡಿದ. ಆಮೇಲೆ ಅವನ ಆಸೆ ಪೂರ್ತಿಯಾಯಿತು (ರಾಮಾಯಣ. ಬಾಲಕಾಂಡ ೫೧–೫೬. ೬೩–೬೬; ಸ್ಕಂದಪುರಾಣ ೬. ೧. ೧೬೭–೧೬೮).

ವೇನನಿಂದ ನಿಮಿಯ ವರೆಗಿನ ರಾಜರು ಅವಿನೀತರು; ಪೃಥುವಿನಿಂದ ವಿಶ್ವಾಮಿತ್ರನ ವರೆಗಿನ ರಾಜರು ವಿನೀತರು.

त्रैविद्येभ्यस्त्रयीं विद्यां दण्डनीतिं च शाश्वतीम् ।
आन्वीक्षिकीं चात्मविद्यां वार्तारम्भांश्च लोकतः ॥ ४३ ॥

ತ್ರೈವಿದ್ಯೇಭ್ಯಸ್ತ್ರಯೀಂ ವಿದ್ಯಾಂ ದಂಡನೀತಿಂ ಚ ಶಾಶ್ವತೀಮ್ ।
ಆನ್ವೀಕ್ಷಿಕೀಂ ಚಾತ್ಮವಿದ್ಯಾಂ ವಾರ್ತಾರಂಭಾಂಶ್ಚ ಲೋಕತಃ ॥ ೪೩ ॥

೪೩. ಮೂರು ವೇದಗಳನ್ನು ಬಲ್ಲವರಿಂದ ಆ ವೇದಗಳನ್ನೂ ಪರಂಪರಾಗತವಾದ ರಾಜಧರ್ಮಶಾಸ್ತ್ರವನ್ನೂ ತರ್ಕಶಾಸ್ತ್ರವನ್ನೂ ಬ್ರಹ್ಮವಿದ್ಯೆಯನ್ನೂ ವ್ಯಾವಹಾರಿಕರಿಂದ ಕೃಷಿ-ಗೋರಕ್ಷೆ-ವಾಣಿಜ್ಯಗಳನ್ನೂ ರಾಜನು ಕಲಿತುಕೊಳ್ಳಬೇಕು.

೪೩. त्रयीं विद्याम्—ಋಗ್. ಯಜುಸ್. ಸಾಮ ವೇದಗಳ ಜ್ಞಾನ. ಅಥರ್ವಣ ವೇದದಲ್ಲಿ ಮಾರಣ-ಸಂಮೋಹನಾದಿಗಳ ಬಗೆಗಿನ ಮಂತ್ರಗಳಿರುವುದರಿಂದ ಅದರ ಅಧ್ಯಯನಕ್ಕೆ ಮೊದಲು ಮನ್ನಣೆ ದೊರಕಿರಲಿಲ್ಲ.

शाश्वती दण्डनीति—ಪರಂಪರಾಗತ ರಾಜಧರ್ಮಶಾಸ್ತ್ರ.

आन्वीक्षिकी—ತರ್ಕಶಾಸ್ತ್ರ.

आत्मविद्या—ಸುಖ-ದುಃಖ ಸಮಾನತೆಯನ್ನು ಬೋಧಿಸುವ ತತ್ತ್ವಜ್ಞಾನ.

वार्तारम्भान्—ಕೃಷಿ-ಗೋರಕ್ಷೆ-ವಾಣಿಜ್ಯಗಳನ್ನು—

आन्वीक्षिकी त्रयी वार्ता दण्डनीतिश्च शाश्वती ।
विद्या ह्येताश्चतस्रस्तु लोकसंस्थितिहेतवः ॥
आन्वीक्षिक्यां तु विज्ञानं धर्माधर्मौ त्रयीस्थितौ ।
अर्थानर्थौ तु वार्तायां दण्डनीत्यां नयानयौ ॥

—कामन्दकीयनीतिसार २. २, ७.

इन्द्रियाणां जये योगं समातिष्ठेद्दिवानिशम् ।
जितेन्द्रियो हि शक्नोति वशे स्थापयितुं प्रजाः ॥ ४४ ॥

ಇಂದ್ರಿಯಾಣಾಂ ಜಯೇ ಯೋಗಂ ಸಮಾತಿಷ್ಠೇದ್ದಿವಾನಿಶಮ್ ।
ಜಿತೇಂದ್ರಿಯೋ ಹಿ ಶಕ್ನೋತಿ ವಶೇ ಸ್ಥಾಪಯಿತುಂ ಪ್ರಜಾಃ ॥ ೪೪ ॥

೪೪. (ರಾಜನು) ಹಗಲಿರುಳೂ ಇಂದ್ರಿಯಗಳನ್ನು ಗೆಲ್ಲಲು ಯತ್ನಿಸುತ್ತಿರಬೇಕು. ಏಕೆಂದರೆ, ಪ್ರಜೆಗಳನ್ನು ತನ್ನಂಕೆಯಲ್ಲಿಟ್ಟುಕೊಳ್ಳಲು ಜಿತೇಂದ್ರಿಯನು (ಮಾತ್ರ) ಸಮರ್ಥನಾಗುತ್ತಾನೆ.

೪೪. योगं समातिष्ठेत्—ಇಂದ್ರಿಯಜಯಕ್ಕಾಗಿ ಯೋಗಾಭ್ಯಾಸವನ್ನು ಮಾಡಬೇಕು—ಎಂದೂ ಅರ್ಥಮಾಡಬಹುದು. जितेन्द्रियो हि—ತನ್ನನ್ನು ವಶದಲ್ಲಿಟ್ಟುಕೊಳ್ಳಲಾರದವನು ಬೇರೆಯವರನ್ನು ತನ್ನ ವಶದಲ್ಲಿಟ್ಟುಕೊಳ್ಳಲಾರ.

दश कामसमुत्थानि तथाष्टौ क्रोधजानि च ।
व्यसनानि दुरन्तानि प्रयत्नेन विवर्जयेत् ॥ ४५ ॥
ದಶ ಕಾಮಸಮುತ್ಥಾನಿ ತಥಾಷ್ಟೌ ಕ್ರೋಧಜಾನಿ ಚ ।
ವ್ಯಸನಾನಿ ದುರಂತಾನಿ ಪ್ರಯತ್ನೇನ ವಿವರ್ಜಯೇತ್ ॥ ೪೫ ॥

೪೫. ಅಂತ್ಯದಲ್ಲಿ (ರಾಜನನ್ನು) ದುರ್ಗತಿಗೀಡುಮಾಡುವ ಹತ್ತು ಕಾಮಜನ್ಯ ದುರಭ್ಯಾಸಗಳನ್ನೂ ಎಂಟು ಕ್ರೋಧಜನ್ಯ ದುರಭ್ಯಾಸಗಳನ್ನೂ ಪ್ರಯತ್ನಪೂರ್ವಕವಾಗಿ (ಅವನು) ಬಿಡಬೇಕು.

೪೫. दुरन्तानि—ದುರ್ವ್ಯಸನಗಳಿಂದ ಮೊದಲು ಸುಖ ಬಂದರೂ ಅದು ಕೊನೆಯಲ್ಲಿ ದುಃಖಕ್ಕೆ ಕಾರಣವಾಗುವುದು. ಹೋಲಿಸಿರಿ :

विषयेन्द्रियसंयोगात् यत्तदग्रेऽमृतोपमम् ।
परिणामे विषमिव तत्सुखं राजसं स्मृतम् ॥
—भगवद्गीता १८, ३८.

ದುರ್ವ್ಯಸನಗಳ ವಿವರಣೆ ಮುಂದೆ ಶ್ಲೋಕ ೪೭–೪೮ರಲ್ಲಿ ಬಂದಿದೆ.

कामजेषु प्रसक्तो हि व्यसनेषु महीपतिः ।
वियुज्यतेऽर्थधर्माभ्यां क्रोधजेष्वात्मनैव तु ॥ ४६ ॥
ಕಾಮಜೇಷು ಪ್ರಸಕ್ತೋ ಹಿ ವ್ಯಸನೇಷು ಮಹೀಪತಿಃ ।
ವಿಯುಜ್ಯತೇಽರ್ಥಧರ್ಮಾಭ್ಯಾಂ ಕ್ರೋಧಜೇಷ್ವಾತ್ಮನೈವ ತು ॥ ೪೬ ॥

೪೬. ಕಾಮಜನ್ಯ ದುರ್ವ್ಯಸನದಲ್ಲಿ ಅರ್ಥ-ಧರ್ಮಗಳೆಂಬ ತನ್ನ ಪುರುಷಾರ್ಥಗಳನ್ನು ಕಳೆದುಕೊಳ್ಳುತ್ತಾನೆ: ಕ್ರೋಧಜನ್ಯ ದುರ್ವ್ಯಸನದಲ್ಲಿ ಬಿದ್ದವನು ತನ್ನನ್ನೇ ತಾನು ಕಳೆದುಕೊಳ್ಳುತ್ತಾನೆ.

೪೬. आत्मना—शरीरेण वियुज्यते, म्रियते इति यावत् (नं०)—ಸಾಯುತ್ತಾನೆ ಎಂದು ತಾತ್ಪರ್ಯ.

मृगयाक्षो दिवास्वप्नः परिवादः स्त्रियो मदः ।
तौर्यत्रिकं वृथाट्या च कामजो दशको गणः ॥ ४७ ॥

ಮೃಗಯಾಕ್ಷೋ ದಿವಾಸ್ವಪ್ನಃ ಪರಿವಾದಃ ಸ್ತ್ರಿಯೋ ಮದಃ ।
ತೌರ್ಯತ್ರಿಕಂ ವೃಥಾಟ್ಯಾ ಚ ಕಾಮಜೋ ದಶಕೋ ಗಣಃ ॥ ೪೭ ॥

೪೭. ಬೇಟೆ. ಜೂಜು. ಹಗಲುನಿದ್ದೆ. ಪರನಿಂದೆ. ಸ್ತ್ರೀಲೋಲುಪತೆ. ಕುಡಿತದ ಅಮಲು. ನೃತ್ಯ-ಗಾಯನ-ವಾದನ ಮತ್ತು ವ್ಯರ್ಥ ಓಡಾಟಗಳು ಎಂಬೀ ಹತ್ತು ಕಾಮಜನ್ಯ ದುರ್ವ್ಯಸನಗಳ ಗುಂಪು.

೪೭. परिवादः—ಪರನಿಂದೆ; ಬೇರೆಯವರ ದೋಷಗಳನ್ನೇ ಹೇಳುತ್ತ ಹೋಗುವುದು. मदः—ಸೆರೆ ಕುಡಿಯುವುದರಿಂದ ಬಂದ ಅಮಲು. तौर्यत्रिक—ನೃತ್ಯ, ಗೀತ, ಮತ್ತು ವಾದ್ಯಗಳಿಂದ ಕೂಡಿದ ನಾಟಕ ಮುಂತಾದ ಮನೋರಂಜನೆ. वृथाट्या—ಸುಮ್ಮನೆ ಅಲೆದಾಡುವುದು—ಇವು-ಗಳಲ್ಲಿ ಅತ್ಯಾಸಕ್ತಿ ತೋರುವುದು ದುರ್ವ್ಯಸನವೆನ್ನಿಸುತ್ತದೆ.

पैशुन्यं साहसं द्रोह ईर्ष्यासूयार्थदूषणम् ।
वाग्दण्डजं च पारुष्यं क्रोधजोऽपि गणोऽष्टकः ॥ ४८ ॥

ಪೈಶುನ್ಯಂ ಸಾಹಸಂ ದ್ರೋಹ ಈರ್ಷ್ಯಾಽಸೂಯಾರ್ಥದೂಷಣಂ ।
ವಾಗ್ದಂಡಜಂ ಚ ಪಾರುಷ್ಯಂ ಕ್ರೋಧಜೋಽಪಿ ಗಣೋಽಷ್ಟಕಃ ॥ ೪೮ ॥

೪೮. ಚಾಡಿಕೋರತನ. ಸಜ್ಜನಹಿಂಸೆ. ದ್ರೋಹ. ಹೊಟ್ಟೆಕಿಚ್ಚು. ಅಸೂಯೆ. ಪರಸ್ವಾಪಹಾರ ಮತ್ತು ಪರರಿಗೆ ಕೊಡಬೇಕಾದುದನ್ನು ಕೊಡದಿರುವುದು. ಕಟೂಕ್ತಿ. ಅತಿದಂಡನೆಗಳು ಎಂಬೀ ಎಂಟು ಕ್ರೋಧಜನ್ಯ ದುರ್ವ್ಯಸನಗಳ ಸಮೂಹ.

೪೮. पैशुन्य—ಚಾಡಿಕೋರತನ. ईर्ष्या—ಬೇರೆಯವರ ಗುಣಗಳನ್ನು ಸಹಿಸದಿರುವುದು. असूया—ಬೇರೆಯವರ ಸದ್ಗುಣಗಳನ್ನು ದುರ್ಗುಣಗಳೆಂದು ತಿಳಿಯುವುದು.

द्वयोरप्येतयोर्मूलं यं सर्वे कवयो विदुः ।
तं यत्नेन जयेल्लोभं तज्जावेतावुभौ गणौ ॥ ४९ ॥

ದ್ವಯೋರಪ್ಯೇತಯೋರ್ಮೂಲಂ ಯಂ ಸರ್ವೇ ಕವಯೋ ವಿದುಃ ।
ತಂ ಯತ್ನೇನ ಜಯೇಲ್ಲೋಭಂ ತಜ್ಜಾವೇತಾವುಭೌ ಗಣೌ ॥ ೪೯ ॥

೪೯. (ದುರ್ವ್ಯಸನಗಳ) ಈ ಎರಡು ಗುಂಪುಗಳಿಗೂ ಲೋಭವೇ ಮೂಲ-ವೆಂಬುದು ವಿದ್ವಾಂಸರ ಮತ. (ಆದ್ದರಿಂದ) ಆ ಲೋಭವನ್ನು ಪ್ರಯತ್ನಪೂರ್ವಕವಾಗಿ ಗೆಲ್ಲಬೇಕು: ಈ ಇಬ್ಬಗೆಯ ದುರ್ವ್ಯಸನಗಳೂ ಲೋಭಜನ್ಯವಾದಂಥವು.

೪೯. ಲೋಭವು ಎಲ್ಲ ಪಾಪಗಳಿಗೂ ಮೂಲಕಾರಣ. ಹೋಲಿಸಿರಿ :

लोभमूलानि पापानि (सुभाषित).

लोभश्चेदगुणेन किम् (भर्तृहरि)—ಅತ್ಯಾಶೆ. ದುರಾಶೆ: ಧರ್ಮಕ್ಕೆ ವಿರುದ್ಧವಾಗಿ ದ್ರವ್ಯಸಂಗ್ರಹ ಮಾಡುವ ಅತ್ಯಾಶೆ.

पानमक्षाः स्त्रियश्चैव मृगया च यथाक्रमम् ।
एतत्कष्टतमं विद्याच्चतुष्कं कामजे गणे ॥ ५० ॥

ಪಾನಮಕ್ಷಾಃ ಸ್ತ್ರಿಯಶ್ಚೈವ ಮೃಗಯಾ ಚ ಯಥಾಕ್ರಮಂ ।
ಏತತ್ಕಷ್ಟತಮಂ ವಿದ್ಯಾಚ್ಚತುಷ್ಕಂ ಕಾಮಜೇ ಗಣೇ ॥ ೫೦ ॥

೫೦. ಕಾಮಜನ್ಯ ದುರ್ವ್ಯಸನಗಳಲ್ಲಿ ಮದ್ಯಪಾನ. ಜೂಜು. ಸ್ತ್ರೀಲೋಲುಪತೆ ಮತ್ತು ಬೇಟೆಗಳು ಕ್ರಮವಾಗಿ (ಉಳಿದವುಗಳಿಂದ) ಹೆಚ್ಚು ಕಷ್ಟನಷ್ಟಗಳನ್ನುಂಟುಮಾಡತಕ್ಕವು.

೫೦. दिवास्वप्नादिभ्योऽस्य चतुष्कस्य गणस्य बहुदोषतरत्वं प्रसिद्धमेव (मे०)—ಹಗಲುನಿದ್ದೆ ಮೊದಲಾದ ಮಿಕ್ಕ ದುರ್ವ್ಯಸನಗಳಿಗಿಂತ ಈ ನಾಲ್ಕು ಹೆಚ್ಚು ಕೆಟ್ಟ ಪರಿಣಾಮವನ್ನುಂಟುಮಾಡುವುದು ಸುವಿದಿತ.

दण्डस्य पातनं चैव वाक्पारुष्यार्थदूषणे ।
क्रोधजेऽपि गणे विद्यात्कष्टमेतत्त्रिकं सदा ॥ ५१ ॥

ದಂಡಸ್ಯ ಪಾತನಂ ಚೈವ ವಾಕ್ಪಾರುಷ್ಯಾರ್ಥದೂಷಣೇ ।
ಕ್ರೋಧಜೇಽಪಿ ಗಣೇ ವಿದ್ಯಾತ್ ಕಷ್ಟಮೇತತ್ತ್ರಿಕಂ ಸದಾ ॥ ೫೧ ॥

೫೧. ಕ್ರೋಧಜನ್ಯ ದುರ್ವ್ಯಸನ ಸಮೂಹದಲ್ಲಿ ಅತಿದಂಡನೆ. ಕಟುವಚನ ಮತ್ತು ಪರಸ್ವಾಪಹಾರಗಳು ಯಾವಾಗಲೂ ಹೆಚ್ಚು ಕಷ್ಟ ತಂದೊಡ್ಡತಕ್ಕವು.

೫೧. अयमपि त्रिकः पैशुन्यादिभ्यः पापीयानिति सुप्रतीतम् (मे०)—ಈ ಮೂರು ಚಾಡಿಕೋರತನ ಮುಂತಾದ ದುರ್ವ್ಯಸನಗಳಿಗಿಂತ ಹೆಚ್ಚು ದುರ್ಗತಿಗೆ ಕಾರಣಗಳಾಗುತ್ತವೆಯೆಂಬುದು ಸುಪ್ರಸಿದ್ಧ.

सप्तकस्यास्य वर्गस्य सर्वत्रैवानुषङ्गिणः ।
पूर्वं पूर्वं गुरुतरं विद्याद्व्यसनमात्मवान् ॥ ५२ ॥

ಸಪ್ತಕಸ್ಯಾಸ್ಯ ವರ್ಗಸ್ಯ ಸರ್ವತ್ರೈವಾನುಷಂಗಿಣಃ ।
ಪೂರ್ವಂ ಪೂರ್ವಂ ಗುರುತರಂ ವಿದ್ಯಾದ್ವ್ಯಸನಮಾತ್ಮವಾನ್ ॥ ೫೨ ॥

೫೨. ಪ್ರಶಸ್ತಾತ್ಮನಾದ (ರಾಜನು) ಎಲ್ಲೆಲ್ಲೂ ಬೆನ್ನಟ್ಟಿ ಬರುವ ಈ ಏಳು ಕಾಮ-ಕ್ರೋಧಜನ್ಯ ದುರ್ವ್ಯಸನಗಳಲ್ಲಿ ಮೊದಮೊದಲು ಉಲ್ಲೇಖಿಸಲಾದ ದುರ್ವ್ಯಸನವು ಆ ಮೇಲೆ ಉಲ್ಲೇಖಿಸಲಾದ ದುರ್ವ್ಯಸನಕ್ಕಿಂತ ಹೆಚ್ಚು ಕಷ್ಟಕರವೆಂದು ತಿಳಿಯಬೇಕು.

೫೨. ಕಾಮಜ ದುರ್ವ್ಯಸನಗಳು ಹತ್ತು ಮತ್ತು ಅವುಗಳಲ್ಲಿ ನಾಲ್ಕು ಬಹಳ ದುರ್ಗತಿಕಾರಕಗಳೆಂದು ಈ ಮೊದಲೇ ಹೇಳಲಾಗಿದೆ (ಶ್ಲೋಕ ೪೭ ಮತ್ತು ೫೦). ಇವುಗಳಲ್ಲಿ ಕೂಡ ಬೇಟೆಗಿಂತ ಸ್ತ್ರೀವ್ಯಸನ. ಸ್ತ್ರೀವ್ಯಸನಕ್ಕಿಂತ ಜೂಜು ಮತ್ತು ಜೂಜಿಗಿಂತ ಮದ್ಯಪಾನ—ಹೆಚ್ಚು ದುಷ್ಪರಿಣಾಮಕರವೆಂದು ತಿಳಿಯಬೇಕು. ಹಾಗೇ ಕ್ರೋಧಜನ್ಯವಾದ ಎಂಟು ದುರ್ವ್ಯಸನಗಳಲ್ಲಿ (ಶ್ಲೋಕ ೪೮) ಮೂರು ಹೆಚ್ಚು ದುಷ್ಪರಿಣಾಮಕರವೆಂದು ಹೇಳಲಾಗಿದೆ (ಶ್ಲೋಕ ೫೧). ಇವುಗಳಲ್ಲಿಯೂ ಧನಾಪಹರಣಕ್ಕಿಂತ ಕಠೋರ ಮಾತು (ಕಟುನುಡಿ) ಮತ್ತು ಅದಕ್ಕಿಂತ ಹೆಚ್ಚಾಗಿ ಉಗ್ರದಂಡನೆ ಹೆಚ್ಚು ದುಷ್ಪರಿಣಾಮಕರವೆಂದು ತಿಳಿಯಬೇಕು.

व्यसनस्य च मृत्योश्च व्यसनं कष्टमुच्यते ।
व्यसन्यधोऽधो व्रजति स्वर्यात्यव्यसनी मृतः ॥ ५३ ॥
ವ್ಯಸನಸ್ಯ ಚ ಮೃತ್ಯೋಶ್ಚ ವ್ಯಸನಂ ಕಷ್ಟಮುಚ್ಯತೇ ।
ವ್ಯಸನ್ಯಧೋಽಧೋ ವ್ರಜತಿ ಸ್ವರ್ಯಾತ್ಯವ್ಯಸನೀ ಮೃತಃ ॥ ೫೩ ॥

೫೩. ದುರ್ವ್ಯಸನ ಮತ್ತು ಮರಣಗಳಲ್ಲಿ ದುರ್ವ್ಯಸನವೇ ಹೆಚ್ಚು ಕಷ್ಟದಾಯಕವೆಂದು ಹೇಳಲಾಗಿದೆ. (ಏಕೆಂದರೆ) ದುರ್ವ್ಯಸನಿಯು ಕೆಳಕೆಳಗೆ (ನರಕಕ್ಕೆ) ಹೋಗುತ್ತಾನೆ: ದುರ್ವ್ಯಸನಗಳಿಲ್ಲದವನು ಸತ್ತ ಮೇಲೆ ಸ್ವರ್ಗಕ್ಕೆ ಹೋಗುತ್ತಾನೆ.

೫೩. अधोऽधः—ನರಕಗಳು ಒಂದರ ಕೆಳಗೆ ಒಂದರಂತಿವೆ ಎಂದು ಪುರಾಣಗಳಲ್ಲಿ ಪ್ರಸಿದ್ಧ; ಕೆಳಕೆಳಗಿನವು ಹೆಚ್ಚು ಹೆಚ್ಚು ಅಸಹ್ಯ.

मौलाञ्छास्त्रविदः शूराँल्लब्धलक्षान्कुलोद्भवान् ।
सचिवान्सप्त चाष्टौ वा प्रकुर्वीत परीक्षितान् ॥ ५४ ॥
ಮೌಲಾನ್‌ಶಾಸ್ತ್ರವಿದಃ ಶೂರಾನ್‌ಲಬ್ಧಲಕ್ಷಾನ್‌ಕುಲೋದ್ಭವಾನ್ ।
ಸಚಿವಾನ್‌ಸಪ್ತ ಚಾಷ್ಟೌ ವಾ ಪ್ರಕುರ್ವೀತ ಪರೀಕ್ಷಿತಾನ್ ॥ ೫೪ ॥

೫೪. ಕುಲಪರಂಪರೆಯಿಂದ ಸೇವಕರಾದ. ಶಾಸ್ತ್ರವನ್ನು ಬಲ್ಲ. ಶೂರರಾದ. ಶಸ್ತ್ರವಿದ್ಯೆಯಲ್ಲಿ ನಿಪುಣರಾದ. ಸತ್ಕುಲದಲ್ಲಿ ಹುಟ್ಟಿದ ಮತ್ತು ಚೆನ್ನಾಗಿ ಪರೀಕ್ಷಿಸಲ್ಪಟ್ಟ ಏಳು ಅಥವಾ ಎಂಟು ಜನ ಮಂತ್ರಿಗಳನ್ನು (ರಾಜನು) ನೇಮಿಸಿಕೊಳ್ಳಬೇಕು.

೫೪. लब्धलक्षान्—दृष्टखड्गव्यापाराः, कृतार्थाधिकाराः (मे०); लक्षादप्रच्युतशरीरशल्यादीन् आयुधविदः (कु०); सर्वकालेषु सिद्धफलान् (न०).

सुपरीक्षितान्—देवतादि स्पर्शकृतशपथान्, स्त्रीधनादिलोभोत्तीर्णान् वा (राघ) ಪ್ರಲೋಭನಕ್ಕೆ ಒಳಗಾಗದವರು.

अपि यत्सुकरं कर्म तदप्येकेन दुष्करम् ।
विशेषतोऽसहायेन किंतु राज्यं महोदयम् ।। ५५ ।।

ಅಪಿ ಯತ್ಸುಕರಂ ಕರ್ಮ ತದಪ್ಯೇಕೇನ ದುಷ್ಕರಮ್ ।
ವಿಶೇಷತೋಽಸಹಾಯೇನ ಕಿಂತು ರಾಜ್ಯಂ ಮಹೋದಯಮ್ ॥ ೫೫ ॥

೫೫. ಸುಲಭವಾಗಿ ಮಾಡಲು ಸಾಧ್ಯವಾದ ಕೆಲಸವನ್ನು ಕೂಡ ಒಬ್ಬನೇ ಮಾಡಲಾರ. (ಹಿಂದ ಮೇಲೆ) ಮಹಾಫಲ ಕೊಡುವ ರಾಜ್ಯಭಾರವನ್ನು ವಿಶೇಷವಾಗಿ ಬೆಂಬಲವಿಲ್ಲದವನು ಹೇಗೆ ಮಾಡಬಲ್ಲ?

೫೫. महोदयम्—महत्कार्यं, महदैश्वर्यादिः शत्रुजयादेर्वा उदयो यस्मात् तत् (राघ०)—ಮಹತ್ಕಾರ್ಯ ಸಾಧನೆ.

तैः सार्धं चिन्तयेन्नित्यं सामान्यं संधिविग्रहम् ।
स्थानं समुदयं गुप्तिं लब्धप्रशमनानि च ।। ५६ ।।

ತೈಃ ಸಾರ್ಧಂ ಚಿಂತಯೇನ್ನಿತ್ಯಂ ಸಾಮಾನ್ಯಂ ಸಂಧಿವಿಗ್ರಹಮ್ ।
ಸ್ಥಾನಂ ಸಮುದಯಂ ಗುಪ್ತಿಂ ಲಬ್ಧಪ್ರಶಮನಾನಿ ಚ ॥ ೫೬ ॥

೫೬. ಅವರೊಡನೆ (ರಾಜನು) ದಿನವೂ ಸಾಮಾನ್ಯವಾದ ಸಂಧಿ, ಯುದ್ಧ, ಸ್ಥಾನ (ದಂಡ, ಕೋಶ, ಪುರ, ರಾಷ್ಟ್ರಗಳು), ಆಯಮೂಲ, ಸಂರಕ್ಷಣೆ ಮತ್ತು ವಸೂಲು ಮಾಡಲಾದ ವಿತ್ತದ ಸತ್‌ಪಾತ್ರ ವಿನಿಯೋಗಗಳ ಬಗೆಗೆ ಪರ್ಯಾಲೋಚಿಸಬೇಕು.

೫೬. स्थानम्—दण्डकोशपुरराष्ट्रात्मकं चतुर्विधम्—ಇಲ್ಲಿ ದಂಡವೆಂದರೆ ಆನೆ, ಕುದುರೆ, ರಥ ಮತ್ತು ಕಾಲಾಳುಗಳಿಂದ ಕೂಡಿದ ಚತುರಂಗಬಲ. ಕೋಶವೆಂದರೆ ಬೊಕ್ಕಸ. ಇವುಗಳ ಪೋಷಣೆ ಮತ್ತು ವರ್ಧನೆಗಳ ಬಗ್ಗೆ ಹಾಗೂ ರಾಜಧಾನಿಯ ಮತ್ತು ರಾಷ್ಟ್ರದ ರಕ್ಷಣೆಯ ಬಗ್ಗೆ ರಾಜನು ಆಲೋಚಿಸಬೇಕು.

समुदयम्—ಧಾನ್ಯ, ಸುವರ್ಣ ಮುಂತಾದ ಸಂಪತ್ತು ಹುಟ್ಟುವ ಆಕರಗಳು, ಸಂಪನ್ಮೂಲಗಳು.

गुप्तिम्—ಸ್ವಂತದ ಹಾಗೂ ರಾಷ್ಟ್ರದ ರಕ್ಷಣೆ.

लब्धप्रशमनानि—ದೊರೆತ ಸಂಪತ್ತನ್ನು ತಕ್ಕ ಜನರಿಗೆ ವಿತರಣೆ ಮಾಡುವುದು (सत्पात्रप्रतिपादनानि—राघ०).

तेषां स्वं स्वमभिप्रायमुपलभ्य पृथक् पृथक् ।
समस्तानां च कार्येषु विदध्याद्धितमात्मनः ।। ५७ ।।

ತೇಷಾಂ ಸ್ವಂ ಸ್ವಮಭಿಪ್ರಾಯಂ ಉಪಲಭ್ಯ ಪೃಥಕ್ ಪೃಥಕ್ ।
ಸಮಸ್ತಾನಾಂ ಚ ಕಾರ್ಯೇಷು ವಿದಧ್ಯಾದ್ಧಿತಮಾತ್ಮನಃ ॥ ೫೭ ॥

೫೭. (ಮಂತ್ರಿಗಳಲ್ಲಿ) ಅವರವರ ಅಭಿಪ್ರಾಯಗಳನ್ನು ಪ್ರತ್ಯೇಕವಾಗಿ (ಏಕಾಂತ-ದಲ್ಲಿ) ತಿಳಿದುಕೊಂಡು (ರಾಜನು). ಅವರೆಲ್ಲರ ಒಟ್ಟಭಿಪ್ರಾಯವನ್ನೂ ಏಕಕಾಲದಲ್ಲಿ ಗ್ರಹಿಸಿ ತನಗೆ ಹಿತಕಾರಿಯಾದುದನ್ನು ಕಾರ್ಯಗತಗೊಳಿಸಬೇಕು.

೫೭. पृथक् पृथक्—कश्चित् पुरुषः परिषदि अप्रतिभानवान् भवति रहसि प्रगल्भः (मे०)—ಕೆಲವರು ಸಭೆಯಲ್ಲಿ ಅಪ್ರತಿಭರಾಗಿ ಸುಮ್ಮನಿರುತ್ತಾರೆ; ಅಂಥವರು ಏಕಾಂತದಲ್ಲಿ ಬಿಚ್ಚುಮನಸ್ಸಿನಿಂದ ಮಾತಾಡುತ್ತಾರೆ.

सर्वेषां तु विशिष्टेन ब्राह्मणेन विपश्चिता ।
मन्त्रयेत्परमं मन्त्रं राजा षाड्गुण्यसंयुतम् ॥ ५८ ॥
ಸರ್ವೇಷಾಂ ತು ವಿಶಿಷ್ಟೇನ ಬ್ರಾಹ್ಮಣೇನ ವಿಪಶ್ಚಿತಾ ।
ಮಂತ್ರಯೇತ್ಪರಮಂ ಮಂತ್ರಂ ರಾಜಾ ಷಾಡ್ಗುಣ್ಯಸಂಯುತಮ್ ॥ ೫೮ ॥

೫೮. ಎಲ್ಲ ಮಂತ್ರಿಗಳಲ್ಲಿ ವಿಶೇಷವಾಗಿ ವಿದ್ವಾಂಸನಾಗಿರುವ ಬ್ರಾಹ್ಮಣಮಂತ್ರಿ-ಯೊಡನೆ ರಾಜನು (ಸಂಧಿ. ವಿಗ್ರಹ ಮುಂತಾದ) ಷಡ್ಗುಣಗಣದಿಂದ ಕೂಡಿದ ಅತ್ಯಂತ ಗುಪ್ತವಾದ ವಿಷಯಗಳನ್ನು ಸಮಾಲೋಚಿಸಬೇಕು.

೫೮. विशिष्टेन—ಧಾರ್ಮಿಕತ್ವಾದಿ ಗುಣಗಳಿಂದ ಕೂಡಿದ.
मन्त्रम्—ರಹಸ್ಯವಾದ ವಿಚಾರ.
ಷಾಡ್ಗುಣ್ಯದ ವಿವರಣೆ ಮುಂದೆ ಶ್ಲೋಕ ೧೬೦ರಲ್ಲಿ ಬರುತ್ತದೆ.

नित्यं तस्मिन्समाश्वस्तः सर्वकार्याणि निः क्षिपेत् ।
तेन सार्धं विनिश्चित्य ततः कर्म समारभेत् ॥ ५९ ॥
ನಿತ್ಯಂ ತಸ್ಮಿನ್ ಸಮಾಶ್ವಸ್ತಃ ಸರ್ವಕಾರ್ಯಾಣಿ ನಿಃ ಕ್ಷಿಪೇತ್ ।
ತೇನ ಸಾರ್ಧಂ ವಿನಿಶ್ಚಿತ್ಯ ತತಃ ಕರ್ಮ ಸಮಾರಭೇತ್ ॥ ೫೯ ॥

೫೯. ಅವನಲ್ಲಿ ಯಾವಾಗಲೂ ವಿಶ್ವಾಸವಿಟ್ಟು ರಾಜನು ಎಲ್ಲ ಕಾರ್ಯಗಳನ್ನೂ ಅವನಿಗೊಪ್ಪಿಸಬೇಕು: ಅವನೊಡನೆ (ಚರ್ಚಿಸಿ) ನಿರ್ಣಯಿಸಿದ ಮೇಲೆಯೇ ರಾಜನು (ತಕ್ಕ) ಕಾರ್ಯವನ್ನು ಆರಂಭಿಸಬೇಕು.

೫೯. कर्म समारभेत्—यानासनादि कर्मव्यवहारसंग्रहादि समाचरेत् । (मे०) ಯಾನ, ಆಸನ ಇತ್ಯಾದಿಗಳನ್ನು ಕುರಿತು ಮುಂದೆ ಶ್ಲೋಕ ೧೬೦ನ್ನು ನೋಡಿರಿ.

अन्यानपि प्रकुर्वीत शुचीन्प्राज्ञानवस्थितान् ।
सम्यगर्थसमाहर्तॄनमात्यान्सुपरीक्षितान् ।। ६० ।।
ಅನ್ಯಾನಪಿ ಪ್ರಕುರ್ವೀತ ಶುಚೀನ್‌ಪ್ರಾಜ್ಞಾನವಸ್ಥಿತಾನ್ ।
ಸಮ್ಯಗರ್ಥಸಮಾಹರ್ತೄನಮಾತ್ಯಾನ್ಸುಪರೀಕ್ಷಿತಾನ್ ॥ ೬೦ ॥

೬೦. ಶುದ್ಧಶೀಲರೂ ಬುದ್ಧಿವಂತರೂ ಸ್ಥಿರಚಿತ್ತರೂ ಯೋಗ್ಯರೀತಿಯಿಂದ ಧನಧಾನ್ಯಾದಿಗಳನ್ನು (ರಾಜನಿಗಾಗಿ) ವಸೂಲು ಮಾಡುವವರೂ ಚೆನ್ನಾಗಿ ಪರೀಕ್ಷಿಸಲ್ಪಟ್ಟವರೂ ಆದ ಇತರ ಕರ್ಮಸಚಿವರನ್ನು ಕೂಡ (ರಾಜನು) ನೇಮಿಸಿಕೊಳ್ಳಬೇಕು.

೬೦. शुचीन्—ಹಣದಲ್ಲಿ ಶುದ್ಧರಾದ. ಲಂಚ ತೆಗೆದುಕೊಳ್ಳದ ಶುದ್ಧಾಚರಣೆಯುಳ್ಳವರು. अवस्थितान्—स्थिरस्वभावान् (ಮಂ)—ಆಪತ್ಕಾಲದಲ್ಲಿ ಹೆದರದೆ ಅಥವಾ ಪ್ರಲೋಭನಕ್ಕೆ ಒಳಗಾಗದೆ ರಾಜನ ಹಿತವನ್ನೇ ಬಯಸುವವರು. सम्यगर्थसमाहर्तॄन्—ರಾಜನಿಗಾಗಿ ಸರಿಯಾದ ಕ್ರಮದಲ್ಲಿ ತೆರಿಗೆಯನ್ನು ಸಂಗ್ರಹಿಸಿ ಕೊಡುವವರು.

निर्वर्तेतास्य यावद्भिरितिकर्तव्यता नृभिः ।
तावतोऽतन्द्रितान्दक्षान्प्रकुर्वीत विचक्षणान् ।। ६१ ।।
ನಿರ್ವರ್ತೇತಾಸ್ಯ ಯಾವದ್ಭಿರಿತಿಕರ್ತವ್ಯತಾ ನೃಭಿಃ ।
ತಾವತೋಽತಂದ್ರಿತಾನ್ ದಕ್ಷಾನ್ ಪ್ರಕುರ್ವೀತ ವಿಚಕ್ಷಣಾನ್ ॥ ೬೧ ॥

೬೧. (ರಾಜನಾದ) ಇವನ ಎಲ್ಲ ಕಾರ್ಯಗಳೂ ಪೂರಯಿಸಲ್ಪಡಲು ಬೇಕಾದಷ್ಟು ಆಲಸ್ಯರಹಿತರೂ ದಕ್ಷರೂ ಚತುರರೂ ಆದ ಜನರನ್ನು (ಸಚಿವರನ್ನಾಗಿ) ನಿಯಮಿಸಿ-ಕೊಳ್ಳಬೇಕು.

೬೧. ಹೋಲಿಸಿ: बुद्धिमाननुरक्तश्च युक्तो धर्मार्थकोविदः ।
शुचिर्दक्षः कुलीनश्च मन्त्री यस्य स राज्यभाक् ।।
—नीतिसार, अध्यक्षप्रचार

तेषामर्थे नियुञ्जीत शूरान्दक्षान्कुलोद्भवान् ।
शुचीनाकरकर्मान्ते भीरूनन्तर्निवेशने ।। ६२ ।।
ತೇಷಾಮರ್ಥೇ ನಿಯುಂಜೀತ ಶೂರಾನ್‌ದಕ್ಷಾನ್‌ಕುಲೋದ್ಭವಾನ್ ।
ಶುಚೀನಾಕರಕರ್ಮಾಂತೇ ಭೀರೂನಂತರ್ನಿವೇಶನೇ ॥ ೬೨ ॥

೬೨. ಆ ಸಚಿವರಲ್ಲಿ ಶೂರರೂ ದಕ್ಷರೂ ಕುಲೀನರೂ ಶುದ್ಧಶೀಲರೂ ಆದವ-ರನ್ನು ಧನ-ಧಾನ್ಯಾದಿಗಳ ವಸೂಲಿಗಾಗಿ ಮತ್ತು ಅಂಜುಬುರುಕರನ್ನು ಅರಮನೆಯೊಳಗಿನ

ಕೆಲಸಗಳಿಗಾಗಿ (ರಾಜನು) ನಿಯಮಿಸಬೇಕು. ಧನೋತ್ಪತ್ತಿಸ್ಥಾನಗಳಿಗೆ ಬಂಗಾರ ಮುಂತಾದ ಲೋಹಗಳ ಗಣಿಗಳೂ ಧಾನ್ಯೋತ್ಪತ್ತಿಸ್ಥಾನಗಳಿಗೆ ಕೃಷಿಕ್ಷೇತ್ರಗಳೂ ಉದಾಹರಣೆಗಳು.

೬೨. आकरकर्मान्ते—आकरेषु सुवर्णाद्युत्पत्तिस्थानेषु, कर्मान्तेषु च इक्षुधान्यादिसंग्रहस्थानेषु (कु०).

भीरूनन्तर्निवेशने—ಅಂಜುಕುಳಿಗಳನ್ನು ಅಂತಃಪುರ ಮುಂತಾದ ಸ್ಥಾನದಲ್ಲಿಡಬೇಕು; ಶೂರರು ಅಲ್ಲಿ ರಾಜನನ್ನು ಕೊಲ್ಲಬಹುದು ಎಂಬುದರಿಂದ.

दूतं चैव प्रकुर्वीत सर्वशास्त्रविशारदम् ।
इङ्गिताकारचेष्टज्ञं शुचिं दक्षं कुलोद्गतम् ॥ ६३ ॥
ದೂತಂ ಚೈವ ಪ್ರಕುರ್ವೀತ ಸರ್ವಶಾಸ್ತ್ರವಿಶಾರದಮ್ ।
ಇಂಗಿತಾಕಾರಚೇಷ್ಟಜ್ಞಂ ಶುಚಿಂ ದಕ್ಷಂ ಕುಲೋದ್ಗತಂ ॥ ೬೩ ॥

೬೩. ಎಲ್ಲ ಶಾಸ್ತ್ರಗಳನ್ನು ಬಲ್ಲವನೂ (ಪರರ) ಇಂಗಿತ, ಭಾವ ಮತ್ತು ಚಲನವಲನಗಳನ್ನು (ಸೂಕ್ಷ್ಮವಾಗಿ) ಗ್ರಹಿಸಬಲ್ಲವನೂ ಶುದ್ಧಶೀಲ, ದಕ್ಷ ಮತ್ತು ಕುಲೀನನೂ ಆದವನನ್ನು ರಾಜದೂತನನ್ನಾಗಿ (ರಾಜನು) ನೇಮಿಸಿಕೊಳ್ಳಬೇಕು.

೬೩. इंगितज्ञ—ಮಾತು ಮತ್ತು ಸ್ವರಗಳಿಂದ ಅಭಿಪ್ರಾಯವನ್ನು ತಿಳಿದುಕೊಳ್ಳಬಲ್ಲವನು. आकारज्ञ—ಮುಖವನ್ನು ನೋಡಿ ಪ್ರಸನ್ನತೆ, ಕೋಪ ಮುಂತಾದ ಭಾವನೆಗಳನ್ನು ಅರಿಯಬಲ್ಲವನು. चेष्टज्ञ—ಕೈಕಾಲುಗಳ ಚಲನೆ ಮುಂತಾದ ಕ್ರಿಯೆಗಳಿಂದ ಭೀತಿ ಮುಂತಾದ ಭಾವನೆಗಳನ್ನು ತಿಳಿಯಬಲ್ಲವನು.

अनुरक्तः शुचिर्दक्षः स्मृतिमान्देशकालवित् ।
वपुष्मान्वीतभीर्वाग्मी दूतो राज्ञः प्रशस्यते ॥ ६४ ॥
ಅನುರಕ್ತಃ ಶುಚಿರ್ದಕ್ಷಃ ಸ್ಮೃತಿಮಾನ್ ದೇಶಕಾಲವಿತ್ ।
ವಪುಷ್ಮಾನ್ ವೀತಭೀರ್ವಾಗ್ಮೀ ದೂತೋ ರಾಜ್ಞಃ ಪ್ರಶಸ್ಯತೇ ॥ ೬೪ ॥

೬೪. (ರಾಜನಲ್ಲಿ) ಅನುರಕ್ತ, ಶುದ್ಧಶೀಲ, ದಕ್ಷ, ಸ್ಮರಣಶಕ್ತಿಸಂಪನ್ನ, ದೇಶಕಾಲಜ್ಞ, ಆಕರ್ಷಕ ವ್ಯಕ್ತಿತ್ವಸಂಪನ್ನ, ನಿರ್ಭೀತ ಮತ್ತು ವಾಗ್ಮಿ ಎನ್ನಿಸಿದವನು ರಾಜದೂತನಾಗುವುದು ಪ್ರಶಸ್ತ.

೬೪. अनुरक्तः—जनेषु अनुरागवान्, तेन प्रतिराजादेरपि अद्वेषविषयः (कु०)—ರಾಜದೂತನು ಜನಪ್ರಿಯನಾಗಿದ್ದರೆ ಪ್ರತಿರಾಜರು ಅವನನ್ನು ದ್ವೇಷಿಸುವುದಿಲ್ಲ ಎಂಬ ವಿವರಣೆಯೂ ಇದೆ.

वीतभीः—विगतभयः तेन अप्रियसंदेशस्यापि वक्ता (कु०)—ಅಪ್ರಿಯವಾದದ್ದನ್ನು ಸಹ ನಿರ್ಭಯವಾಗಿ ಹೇಳಬಲ್ಲವನು.

अमात्ये दण्ड आयत्तो दण्डे वैनयिकी क्रिया ।
नृपतौ कोशराष्ट्रे च दूते संधिविपर्ययौ ।। ६५ ।।

ಅಮಾತ್ಯೇ ದಂಡ ಆಯತ್ತೋ ದಂಡೇ ವೈನಯಿಕೀ ಕ್ರಿಯಾ ।
ನೃಪತೌ ಕೋಶರಾಷ್ಟ್ರೇ ಚ ದೂತೇ ಸಂಧಿವಿಪರ್ಯಯೌ ॥ ೬೫ ॥

೬೫. ದಂಡಾಧಿಕಾರವು ರಕ್ಷಣಾಸಚಿವನ ಅಧೀನವಾಗಿರುತ್ತದೆ; ಪ್ರಜೆಗಳ ನಿಯಂತ್ರಣವು ದಂಡದ (ಸೈನ್ಯದ) ಅಧೀನ; ಕೋಶ (ಖಜಾನೆ) ಮತ್ತು ರಾಷ್ಟ್ರಗಳು ರಾಜಾಧೀನ; ಸಂಧಿ-ಯುದ್ಧಗಳು ರಾಜದೂತಾಧೀನ.

೬೫. दण्डः—हस्त्यश्वरथपदाताद्यात्मकः (गघ)—ಚತುರಂಗಬಲ.
वैनयिकी क्रिया—ಜನರನ್ನು ವಿಧೇಯರನ್ನಾಗಿ ಇಡುವ ಕಾರ್ಯ.

दूत एव हि संधत्ते भिनत्त्येव च संहतान् ।
दूतस्तत्कुरुते कर्म भिद्यन्ते येन मानवाः ।। ६६ ।

ದೂತ ಏವ ಹಿ ಸಂಧತ್ತೇ ಭಿನತ್ತ್ಯೇವ ಚ ಸಂಹತಾನ್ ।
ದೂತಸ್ತತ್ಕುರುತೇ ಕರ್ಮ ಭಿದ್ಯಂತೇ ಯೇನ ಮಾನವಾಃ ॥ ೬೬ ॥

೬೬. ನಿಜವಾಗಿ ರಾಜದೂತನೇ ಒಡೆದ ರಾಜರನ್ನು ಕೂಡಿಸುತ್ತಾನೆ. ಕೂಡಿದ್ದವರನ್ನು ಒಡೆಯುತ್ತಾನೆ. ಜನರನ್ನು ಒಡೆಯುವ ಕೆಲಸವನ್ನು ರಾಜದೂತ ಮಾಡುತ್ತಾನೆ.

೬೬. ರಾಜದೂತನು ಭೇದೋಪಾಯಚತುರನಾಗಿರುತ್ತಾನೆ; ರಾಷ್ಟ್ರಗಳಲ್ಲಿ ಯುದ್ಧವಾಗುವುದು ಅಥವಾ ಸಂಧಿಯಾಗುವುದು ಅವನನ್ನೇ ಅವಲಂಬಿಸಿರುತ್ತದೆ—ಎಂದು ತಾತ್ಪರ್ಯ.

स विद्यादस्य कृत्येषु निगूढेङ्गितचेष्टितैः ।
आकारमिङ्गितं चेष्टां भृत्येषु च चिकीर्षितम् ।। ६७ ।।

ಸ ವಿದ್ಯಾದಸ್ಯ ಕೃತ್ಯೇಷು ನಿಗೂಢೇಂಗಿತಚೇಷ್ಟಿತೈಃ ।
ಆಕಾರಮಿಂಗಿತಂ ಚೇಷ್ಟಾಂ ಭೃತ್ಯೇಷು ಚ ಚಿಕೀರ್ಷಿತಮ್ ॥ ೬೭ ॥

೬೭. ಅವನು ಶತ್ರುರಾಜನ (ರಾಜದೂತರನ್ನು ಪ್ರಲೋಭಿಸುವ) ಕೃತ್ಯಗಳಲ್ಲಿ (ಅವನ) ಭಾವ, ಇಂಗಿತ, ಚಲನವಲನಗಳನ್ನು ಅರಿತುಕೊಳ್ಳಬೇಕು; ಆ ರಾಜನ ಗೂಢಚಾರರ (ಹತ್ತಿರದಲ್ಲೇ ಇದ್ದಾಗಲೂ) ಮತ್ತು ಅವನ (ಕೆಟ್ಟ ಅಥವಾ ಒಳ್ಳೆ) ಸೇವಕರ ಇಂಗಿತ-ಚಲನವಲನಗಳ ಮೂಲಕ ಅವನು ಮಾಡಬೇಕೆಂದಿರುವ ಕಾರ್ಯವನ್ನು (ರಾಜದೂತನು) ಅರಿತುಕೊಳ್ಳಬೇಕು.

೬೭. ರಾಜದೂತನು ತನ್ನ ಇಂಗಿತ ಮತ್ತು ಚಲನವಲನಗಳನ್ನು ಗುಪ್ತವಾಗಿಟ್ಟುಕೊಂಡು ಅವನ (ಶತ್ರುರಾಜನ) ಕೃತ್ಯಗಳಲ್ಲಿ ಭಾವ, ಇಂಗಿತ, ಚಲನವಲನಗಳನ್ನು ಮತ್ತು ಅವನ ಸೇವಕರಿಂದ ಮಾಡಿಸ ಬಯಸುವ ಕಾರ್ಯಗಳನ್ನು ತಿಳಿದುಕೊಳ್ಳಬೇಕು—ಎಂಬುದು ಸರ್ವಜ್ಞನಾರಾಯಣನ ವ್ಯಾಖ್ಯೆಯನಾಧರಿಸಿದ ಭಾಷಾಂತರ. ಕುಲ್ಲೂಕನ ಪ್ರಕಾರ: ರಾಜದೂತನು ಶತ್ರುರಾಜನ ಅನುಚರರ ನಡುವೆ ಇದ್ದು, ಅವರ ಇಂಗಿತ ಚೇಷ್ಟೆಗಳಿಂದ ಅವರ ರಾಜನಿಷ್ಠೆಯನ್ನು ತಿಳಿದುಕೊಳ್ಳಬೇಕು: ಅವರಲ್ಲಿರುವ ಕುಪಿತ. ಲೋಭಿ. ಅಪಮಾನಿತರನ್ನು ಗುರುತಿಸಿ ತಕ್ಕ ಕ್ರಮಗಳಿಂದ ಅವರನ್ನು ತನ್ನ ರಾಜ ಕಾರ್ಯಕ್ಕೆ ಬಳಸಿಕೊಳ್ಳಬೇಕು.

निगूढेङ्गितचेष्टितैः—निगूढा अनुचराः प्रतिपक्षनृपस्य एव परिजनाः तस्मिन् युक्ताः, तत्सन्निधौ अपि तेषां इङ्गितचेष्टितैः (कु०, राघ०); स्वयं निगूढैः इङ्गितचेष्टितैः उपलक्षितः (स०); निगूढेङ्गितचेष्टितैः पुरुषैः विद्यात् (न०).

भृत्येषु—क्षुभितावमानितेषु (राघ०).

बुद्ध्वा च सर्वं तत्त्वेन परराजचिकीर्षितम् ।
तथा प्रयत्नमातिष्ठेद्यथात्मानं न पीडयेत् ।। ६८ ।।

ಬುದ್ಧ್ವಾ ಚ ಸರ್ವಂ ತತ್ತ್ವೇನ ಪರರಾಜಚಿಕೀರ್ಷಿತಮ್ ।
ತಥಾ ಪ್ರಯತ್ನಮಾತಿಷ್ಠೇದ್ಯಥಾತ್ಮಾನಂ ನ ಪೀಡಯೇತ್ ॥ ೬೮ ॥

೬೮. ಶತ್ರುರಾಜನು ಮಾಡಬಯಸಿದ ಎಲ್ಲವನ್ನೂ (ರಾಜನು) ರಾಜದೂತನಿಂದ ಸರಿಯಾಗಿ ತಿಳಿದುಕೊಂಡು ಅವನು ತನಗೆ ತೊಂದರೆ ಕೊಡದಂತೆ ಪ್ರಯತ್ನ ಮಾಡಬೇಕು.

೬೮. परराजचिकीर्षितं—'मद्राजः यदि अत्र आगन्तुं शक्नोति, तदा भवादृशानां क्षोभादि नङ्क्ष्यति' इति विश्वासं संपादयेत् (राघ०).

जाङ्गलं सस्यसंपन्नमार्यप्रायमनाविलम् ।
रम्यमानतसामन्तं स्वाजीव्यं देशमावसेत् ।। ६९ ।।

ಜಾಂಗಲಂ ಸಸ್ಯಸಂಪನ್ನಮಾರ್ಯಪ್ರಾಯಮನಾವಿಲಮ್ ।
ರಮ್ಯಮಾನತಸಾಮಂತಂ ಸ್ವಾಜೀವ್ಯಂ ದೇಶಮಾವಸೇತ್ ॥ ೬೯ ॥

೬೯. ಬಿಸಿಲು ಗಾಳಿಗಳು ಹೆಚ್ಚಾಗಿರುವ. ಧಾನ್ಯಸಮೃದ್ಧವಾದ. ಸಜ್ಜನರಿರುವ. ರೋಗ ಮತ್ತು ಪೀಡೆಗಳಿರದ, (ಫಲ-ಪುಷ್ಪ-ಲತಾ-ವೃಕ್ಷಾದಿಗಳಿಂದ) ಸುಂದರವಾದ. ಸುತ್ತುಮುತ್ತಲೂ ನಮ್ರರಾದ ಜನರಿರುವ ಮತ್ತು ಉಪಜೀವನ ಸುಲಭಸಾಧ್ಯವಾಗಿರುವ ಪ್ರದೇಶದಲ್ಲಿ (ರಾಜನು) ವಾಸಮಾಡಬೇಕು.

೬೯. जाङ्गल—ಎಲ್ಲಿ ಮಳೆ ಹಾಗೂ ಹುಲ್ಲು ಕಡಿಮೆ ಮತ್ತು ಗಾಳಿ ಹಾಗೂ ಬಿಸಿಲು ಹೆಚ್ಚಿರುವುದೋ ಅಂತಹ ಪ್ರದೇಶ (अल्पोदकतृणो यस्तु प्रवातः प्रचुरातपः ।).

धन्वदुर्गं महीदुर्गमब्दुर्गं वार्क्षमेव वा ।
नृदुर्गं गिरिदुर्गं वा समाश्रित्य वसेत्पुरम् ॥ ७० ॥

ಧನ್ವದುರ್ಗಂ ಮಹೀದುರ್ಗಮಬ್ದುರ್ಗಂ ವಾರ್ಕ್ಷಮೇವ ವಾ ।
ನೃದುರ್ಗಂ ಗಿರಿದುರ್ಗಂ ವಾ ಸಮಾಶ್ರಿತ್ಯ ವಸೇತ್ಪುರಮ್ ॥ ೭೦ ॥

೭೦. 'ಧನ್ವದುರ್ಗ', 'ಮಹೀದುರ್ಗ', 'ಅಬ್ದುರ್ಗ', 'ವೃಕ್ಷದುರ್ಗ', 'ನೃದುರ್ಗ' ಮತ್ತು 'ಗಿರಿದುರ್ಗ'ಗಳಲ್ಲಿ ಒಂದನ್ನು (ರಾಜನು) ಆಶ್ರಯಿಸಿರಬೇಕು.

೭೦. धन्वदुर्ग—ಸುತ್ತುಮುತ್ತಲೂ ಐದು ಯೋಜನಗಳ ವರೆಗೆ ಮರುಭೂಮಿ ಇರುವದರಿಂದ ದುರ್ಗಮವಾದ ಪ್ರದೇಶ.

महीदुर्ग—ಕಲ್ಲು, ಇಟ್ಟಿಗೆಗಳಿಂದ ಕಟ್ಟಿದ ಕೋಟೆ.

अब्दुर्ग—ಸುತ್ತುಮುತ್ತಲೂ ಆಳವಾದ ನೀರಿನಿಂದ ಆವರಿಸಲ್ಪಟ್ಟ ಕೋಟೆ.

वार्क्षदुर्ग—ಸುತ್ತುಮುತ್ತ ದಟ್ಟವಾಗಿ ಗಿಡಮರಗಳು ಬೆಳೆದದ್ದರಿಂದ ದುರ್ಗಮವಾದ ಪ್ರದೇಶ.

नृदुर्ग—ಸುತ್ತಲೂ ಜನರ ಕಾವಲು ಇರುವುದರಿಂದ ಸುರಕ್ಷಿತವಾದ ಸ್ಥಾನ.

गिरिदुर्ग—ಎತ್ತರವಾದ ಪರ್ವತದ ಮೇಲೆ ಕಟ್ಟಿದ ಕೋಟೆ; ಅದು ಶತ್ರುಗಳಿಗೆ ದುರ್ಗಮ.

सर्वेण तु प्रयत्नेन गिरिदुर्गं समाश्रयेत् ।
एषां हि बाहुगुण्येन गिरिदुर्गं विशिष्यते ॥ ७१ ॥

ಸರ್ವೇಣ ತು ಪ್ರಯತ್ನೇನ ಗಿರಿದುರ್ಗಂ ಸಮಾಶ್ರಯೇತ್ ।
ಏಷಾಂ ಹಿ ಬಾಹುಗುಣ್ಯೇನ ಗಿರಿದುರ್ಗಂ ವಿಶಿಷ್ಯತೇ ॥ ೭೧ ॥

೭೧. ಎಲ್ಲ ಪ್ರಯತ್ನದಿಂದಲೂ (ರಾಜನು) ಗಿರಿದುರ್ಗವನ್ನು ಆಶ್ರಯಿಸಬೇಕು; ಏಕೆಂದರೆ, ಅನೇಕ ಗುಣಗಳಿರುವದರಿಂದ ಗಿರಿದುರ್ಗವು ಮಿಕ್ಕವುಗಳಿಗಿಂತ ಹೆಚ್ಚು ಶ್ರೇಷ್ಠವಾಗಿದೆ.

೭೧. ಪರ್ವತವನ್ನು ಹತ್ತಿ ಹೋಗುವುದು ಕಠಿನ ಮತ್ತು ಮೇಲೆ ನಿಂತು ಕೆಳಗಿನ ಶತ್ರುಗಳನ್ನು ಸಹಜವಾಗಿ ಕೊಲ್ಲಬಹುದು—ಇವು ಗಿರಿದುರ್ಗದ ವಿಶೇಷಗಳು.

त्रीण्याद्यान्याश्रितास्त्वेषां मृगगर्ताश्रयाप्सराः ।
त्रीण्युत्तराणि क्रमशः प्लवङ्गमनरामराः ॥ ७२ ॥

ತ್ರೀಣ್ಯಾದ್ಯಾನ್ಯಾಶ್ರಿತಾಸ್ತ್ವೇಷಾಂ ಮೃಗಗರ್ತಾಶ್ರಯಾಪ್ಸರಾಃ ।
ತ್ರೀಣ್ಯುತ್ತರಾಣಿ ಕ್ರಮಶಃ ಪ್ಲವಂಗಮನರಾಮರಾಃ ॥ ೭೨ ॥

೭೨. ಇವುಗಳಲ್ಲಿ ಮೊದಲನೆಯ ಮೂರನ್ನು ಬಿಗರೆ. ಹುತ್ತದಲ್ಲಿರುವ ಪ್ರಾಣಿಗಳು ಹಾಗೂ ಜಲಚರ ಪ್ರಾಣಿಗಳು ಮತ್ತು ಆಮೇಲಿನ ಮೂರನ್ನು ಕ್ರಮವಾಗಿ. ಮಂಗ. ಮನುಷ್ಯ ಮತ್ತು ದೇವತೆಗಳು ಆಶ್ರಯಿಸಿರುತ್ತಾರೆ.

೭೨. गर्ताश्रया:—ಬಿಲ. ಹುತ್ತಗಳಲ್ಲಿರುವ ಇಲಿ. ಸರ್ಪ ಮುಂತಾದ ಪ್ರಾಣಿಗಳು.

अमरा:—ದೇವತೆಗಳು ಕೈಲಾಸ ಪರ್ವತವನ್ನಾಶ್ರಯಿಸುವಂತೆ ರಾಜನು ಗಿರಿದುರ್ಗವನ್ನಾಶ್ರಯಿಸಬೇಕು.

यथा दुर्गाश्रितानेतान्नोपहिंसन्ति शत्रवः ।
तथारयो न हिंसन्ति नृपं दुर्गसमाश्रितम् ॥ ७३ ॥
ಯಥಾ ದುರ್ಗಾಶ್ರಿತಾನೇತಾನ್ನೋಪಹಿಂಸಂತಿ ಶತ್ರವಃ ।
ತಥಾರಯೋ ನ ಹಿಂಸಂತಿ ನೃಪಂ ದುರ್ಗಸಮಾಶ್ರಿತಮ್ ॥ ೭೩ ॥

೭೩. ಇಂತಹ ದುರ್ಗಗಳನ್ನು ಆಶ್ರಯಿಸಿದ (ಮೃಗಾದಿ) ಪ್ರಾಣಿಗಳನ್ನು (ವ್ಯಾಘ್ರಾದಿ) ಶತ್ರುಗಳು ಹಿಂಸಿಸುವುದಿಲ್ಲ. ಅದರಂತೆಯೇ ಕೋಟೆಯಲ್ಲಿ ಆಶ್ರಯಗೊಂಡ ರಾಜನನ್ನು ವೈರಿಗಳು ಕೊಲ್ಲಲಾರರು.

೭೩. ಮೃಗಾದಿ ಪ್ರಾಣಿಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಸುರಕ್ಷಿತವಾಗಿರುವಂತೆ ರಾಜನು ತನ್ನ ಕೋಟೆಯಲ್ಲಿ ಸುರಕ್ಷಿತನಾಗಿರುವನು.

एकः शतं योधयति प्राकारस्थो धनुर्धरः ।
शतं दशसहस्राणि तस्माद्दुर्गं विधीयते ॥ ७४ ॥
ಏಕಃ ಶತಂ ಯೋಧಯತಿ ಪ್ರಾಕಾರಸ್ಥೋ ಧನುರ್ಧರಃ ।
ಶತಂ ದಶಸಹಸ್ರಾಣಿ ತಸ್ಮಾದ್ದುರ್ಗಂ ವಿಧೀಯತೇ ॥ ೭೪ ॥

೭೪. ಕೋಟೆಯಲ್ಲಿದ್ದ ಒಬ್ಬ ಬಿಲ್ಲುಗಾರನು (ಹೊರಗಿನ) ನೂರು ಯೋಧರ ಜೊತೆಗೆ ಯುದ್ಧ ಮಾಡಬಲ್ಲನು: ನೂರು ಧನುರ್ಧಾರಿಗಳು ಹತ್ತು ಸಾವಿರ ಯೋಧರ ಜೊತೆಗೆ ಯುದ್ಧ ಮಾಡಬಹುದು. ಆದ್ದರಿಂದ ಕೋಟೆಯನ್ನು ರಚಿಸಬೇಕೆಂದು ಹೇಳಿದ್ದಾರೆ.

೭೪. प्राकार—ಕೋಟೆಯ ಗೋಡೆ. ಅದರೊಳಗೆ ನಿಂತು ತನ್ನ ಸಂರಕ್ಷಣೆ ಮಾಡಿಕೊಳ್ಳುವುದು ಸುಲಭ.

तत्स्यादायुधसंपन्नं धनधान्येन वाहनैः ।
ब्राह्मणैः शिल्पिभिर्यन्त्रैर्यवसेनोदकेन च ॥ ७५ ॥

ತತ್ಸ್ಯಾದಾಯುಧಸಂಪನ್ನಂ ಧನಧಾನ್ಯೇನ ವಾಹನೈಃ ।
ಬ್ರಾಹ್ಮಣೈಃ ಶಿಲ್ಪಿಭಿರ್ಯಂತ್ರೈರ್ಯವಸೇನೋದಕೇನ ಚ ॥ ೭೫ ॥

೭೫. ಶಸ್ತ್ರಾಸ್ತ್ರಗಳು. ಸಂಪತ್ತು. ಧಾನ್ಯ. (ಆನೆ. ಕುದುರೆ ಮುಂತಾದ) ವಾಹನಗಳು. ಬ್ರಾಹ್ಮಣರು. ಶಿಲ್ಪಿಗಳು. ಯಂತ್ರಗಳು. ಮೇವು ಮತ್ತು ನೀರು ಇವುಗಳಿಂದ ಆ ಕೋಟೆಯು ಸುಸಜ್ಜಿತವಾಗಿರಬೇಕು.

೭೫. यन्त्रैः—ಅಸ್ತ್ರಗಳನ್ನು ಬಿಡುವ ಸಾಧನಗಳಿಂದ.

तस्य मध्ये सुपर्याप्तं कारयेद्गृहमात्मनः ।
गुप्तं सर्वर्तुकं शुभ्रं जलवृक्षसमन्वितम् ।। ७६ ।।

ತಸ್ಯ ಮಧ್ಯೇ ಸುಪರ್ಯಾಪ್ತಂ ಕಾರಯೇದ್ಗೃಹಮಾತ್ಮನಃ ।
ಗುಪ್ತಂ ಸರ್ವರ್ತುಕಂ ಶುಭ್ರಂ ಜಲವೃಕ್ಷಸಮನ್ವಿತಮ್ ॥ ೭೬ ॥

೭೬. ಅದರ ಮಧ್ಯದಲ್ಲಿ (ರಾಜನು) ವಿಶಾಲವಾದ. ಸುರಕ್ಷಿತವಾದ. ಎಲ್ಲ ಋತುಗಳಲ್ಲಿಯೂ ಅನುಕೂಲವಾದ. ಸ್ವಚ್ಛವಾದ ಮತ್ತು ನೀರು ಹಾಗೂ ಮರಗಿಡಗಳಿಂದ ಕೂಡಿದ ತನ್ನ ಅರಮನೆಯನ್ನು ಕಟ್ಟಿಸಬೇಕು.

೭೬. सुपर्याप्तम्—ದೇವಗೃಹ, ಅಂತಃಪುರ, ಶಸ್ತ್ರಾಗಾರ, ಕೋಶಾಗಾರ ಮುಂತಾದವುಗಳನ್ನು ಹೊಂದಿದ್ದರಿಂದ ವಿಶಾಲವಾದ.

गुप्तं—ಪ್ರಾಕಾರ, ಕಂದಕಗಳಿಂದ ಸುರಕ್ಷಿತವಾದ.

सर्वर्तुकं—ಬೇರೆ ಬೇರೆ ಋತುಗಳಲ್ಲಿ ಹಣ್ಣು ಕೊಡುವ ವೃಕ್ಷಗಳಿಂದ ಸಂಪನ್ನವಾದ.

तदध्यास्योद्वहेद्भार्यां सवर्णां लक्षणान्विताम् ।
कुले महति संभूतां हृद्यां रूपगुणान्विताम् ।। ७७ ।।

ತದಧ್ಯಾಸ್ಯೋದ್ವಹೇದ್ಭಾರ್ಯಾಂ ಸವರ್ಣಾಂ ಲಕ್ಷಣಾನ್ವಿತಾಮ್ ।
ಕುಲೇ ಮಹತಿ ಸಂಭೂತಾಂ ಹೃದ್ಯಾಂ ರೂಪಗುಣಾನ್ವಿತಾಮ್ ॥ ೭೭ ॥

೭೭. ಆ ಅರಮನೆಯಲ್ಲಿದ್ದು ಸಮಾನ ವರ್ಣದ, ಸುಲಕ್ಷಣಗಳುಳ್ಳ. ಮಹಾಕುಲದಲ್ಲಿ ಹುಟ್ಟಿದ. ಪ್ರಿಯಳಾದ ಮತ್ತು ಸೌಂದರ್ಯ ಹಾಗೂ ಸದ್ಗುಣಗಳಿಂದ ಕೂಡಿದ ಕನ್ಯೆಯನ್ನು (ರಾಜನು) ವಿವಾಹ ಮಾಡಿಕೊಳ್ಳಬೇಕು.

೭೭. सवर्णाम्—ಕ್ಷತ್ರಿಯ ವರ್ಣದವಳು.

लक्षणान्विताम्—ಮೈಮೇಲೆ ಒಳ್ಳೆಯ ಸಾಮುದ್ರಿಕ ಚಿಹ್ನೆಗಳುಳ್ಳವಳು.

पुरोहितं च कुर्वीत वृणुयादेव चर्त्विजः ।
तेऽस्य गृह्याणि कर्माणि कुर्युर्वैतानिकानि च ॥ ७८ ॥
ಪುರೋಹಿತಂ ಚ ಕುರ್ವೀತ ವೃಣುಯಾದೇವ ಚರ್ತ್ವಿಜಃ ।
ತೇಽಸ್ಯ ಗೃಹ್ಯಾಣಿ ಕರ್ಮಾಣಿ ಕುರ್ಯುರ್ವೈತಾನಿಕಾನಿ ಚ ॥ ೭೮ ॥

೭೮. (ರಾಜನು) ಪುರೋಹಿತನನ್ನು ನೇಮಿಸಿಕೊಳ್ಳಬೇಕು ಮತ್ತು ಋತ್ವಿಜರನ್ನು ಆರಿಸಿಕೊಳ್ಳಬೇಕು. ಅವರು ಅವನ ಗೃಹಕರ್ಮಗಳನ್ನು ಮತ್ತು ಯಜ್ಞಕರ್ಮಗಳನ್ನು ಮಾಡಬೇಕು.

೭೮. ಪುರೋಹಿತನು ಅಥರ್ವ ವೇದವನ್ನರಿತಿರಬೇಕೆಂದು ಹೇಳಿದ್ದಾರೆ. ಏಕೆಂದರೆ, ಅಥರ್ವಣಿಕನು ರಾಜನ ಸೇನಾಬಲಕ್ಕೆ ಪೂರಕವಾದ ದೇವತಾಬಲವನ್ನು ಅವನಿಗೆ ಒದಗಿಸುತ್ತಾನೆ; ಆದರಿಂದ ಶತ್ರುನಾಶ ಸುಲಭವಾಗುತ್ತದೆ.

गृह्याणि कर्माणि—ಶಾಂತಿ. ಸ್ವಸ್ತ್ಯಯನ ಮುಂತಾದ ಧಾರ್ಮಿಕ ಕಾರ್ಯಗಳು.

यजेत राजा क्रतुभिर्विविधैराप्तदक्षिणैः ।
धर्मार्थं चैव विप्रेभ्यो दद्याद्भोगान्धनानि च ॥ ७९ ॥
ಯಜೇತ ರಾಜಾ ಕ್ರತುಭಿರ್ವಿವಿಧೈರಾಪ್ತದಕ್ಷಿಣೈಃ ॥
ಧರ್ಮಾರ್ಥಂ ಚೈವ ವಿಪ್ರೇಭ್ಯೋ ದದ್ಯಾದ್ಭೋಗಾನ್ಧನಾನಿ ಚ ॥ ೭೯ ॥

೭೯. ರಾಜನು ವಿವಿಧ ಯಜ್ಞಗಳನ್ನು ಮಾಡಿ ಸಾಕಷ್ಟು ದಕ್ಷಿಣೆಯನ್ನು ಕೊಡಬೇಕು; ಮತ್ತು ಪುಣ್ಯದ ಸಲುವಾಗಿ ಬ್ರಾಹ್ಮಣರಿಗೆ ಭೋಗ್ಯ ವಸ್ತುಗಳನ್ನು ಹಾಗೂ ಧನವನ್ನು ಕೊಡಬೇಕು.

೭೯. भोगान्—वस्त्रगन्धविलेपनादयो भोजनशेषाश्च भोगाः (मे०); भोग्यान् गोमहिषादीन् (न०).

सांवत्सरिकमाप्तैश्च राष्ट्रादाहारयेद्बलिम् ।
स्याच्चाम्नायपरो लोके वर्तेत पितृवन्नृषु ॥ ८० ॥
ಸಾಂವತ್ಸರಿಕಮಾಪ್ತೈಶ್ಚ ರಾಷ್ಟ್ರಾದಾಹಾರಯೇದ್ಬಲಿಮ್ ।
ಸ್ಯಾಚ್ಚಾಮ್ನಾಯಪರೋ ಲೋಕೇ ವರ್ತೇತ ಪಿತೃವನ್ನೃಷು ॥ ೮೦ ॥

೮೦. ವಿಶ್ವಾಸಯೋಗ್ಯ(ಅಮಾತ್ಯ)ರಿಂದ ರಾಜನು ವಾರ್ಷಿಕ ಕರಗಳನ್ನು ರಾಷ್ಟ್ರದಿಂದ ವಸೂಲು ಮಾಡಬೇಕು. ಅವನು ಈ ಜಗತ್ತಿನಲ್ಲಿ ಶಾಸ್ತ್ರದಂತೆ ನಡೆಯಬೇಕು ಮತ್ತು ಜನರಲ್ಲಿ ತಂದೆಯಂತೆ ವರ್ತಿಸಬೇಕು.

೮೦. आम्नायपरः—ಶಾಸ್ತ್ರದಲ್ಲಿ ಹೇಳಿದಷ್ಟೇ ಕರಗಳನ್ನು ರಾಜನು ತೆಗೆದುಕೊಳ್ಳಬೇಕು: ಮನಸ್ಸಿಗೆ ಬಂದ ಕರಗಳನ್ನು ಪ್ರಜೆಗಳ ಮೇಲೆ ಹೇರುತ್ತ ಹೋಗಬಾರದು: ಹಾಗೆ ಮಾಡಿದರೆ ಅವನಿಗೆ ಪ್ರಜಾಶೋಷಣೆಯ ಪಾಪ ಬರುತ್ತದೆ.

अध्यक्षान्विविधान्कुर्यात्तत्र तत्र विपश्चितः ।
तेऽस्य सर्वाण्यवेक्षेरन्नृणां कार्याणि कुर्वताम् ॥ ८१ ॥

ಅಧ್ಯಕ್ಷಾನ್ವಿವಿಧಾನ್ಕುರ್ಯಾತ್ತತ್ರ ತತ್ರ ವಿಪಶ್ಚಿತಃ ।
ತೇಽಸ್ಯ ಸರ್ವಾಣ್ಯವೇಕ್ಷೇರನ್ನೃಣಾಂ ಕಾರ್ಯಾಣಿ ಕುರ್ವತಾಮ್ ॥ ೮೧ ॥

೮೧. (ರಾಜನು) ಅಲ್ಲಲ್ಲಿ ವಿವಿಧ ಅಧಿಕಾರಿಗಳನ್ನು ನೇಮಿಸಬೇಕು. ಅವರು ಎಲ್ಲ ಕಾರ್ಯಗಳನ್ನು ಮಾಡುತ್ತಿರುವ ಜನರನ್ನು ವೀಕ್ಷಿಸಬೇಕು.

೮೧. तत्र तत्र—ಸೈನ್ಯ, ಕೋಶ, ರಾಜದೌತ್ಯ ಮುಂತಾದವುಗಳಿಗೆ ಸಂಬಂಧಿಸಿದ ವ್ಯವಹಾರಗಳಲ್ಲಿ.

आवृत्तानां गुरुकुलाद्विप्राणां पूजको भवेत् ।
नृपाणामक्षयो ह्येष निधिर्ब्राह्मोऽभिधीयते ॥ ८२ ॥

ಆವೃತ್ತಾನಾಂ ಗುರುಕುಲಾದ್ವಿಪ್ರಾಣಾಂ ಪೂಜಕೋ ಭವೇತ್ ।
ನೃಪಾಣಾಮಕ್ಷಯೋ ಹ್ಯೇಷ ನಿಧಿರ್ಬ್ರಾಹ್ಮೋಽಭಿಧೀಯತೇ ॥ ೮೨ ॥

೮೨. ಗುರುಕುಲದಿಂದ (ವೇದಾಭ್ಯಾಸ ಮುಗಿಸಿ) ಬಂದ ಬ್ರಾಹ್ಮಣರನ್ನು ಪೂಜಿಸಬೇಕು: ಏಕೆಂದರೆ, ಅವರನ್ನು ರಾಜರ ಅಕ್ಷಯವಾದ ಬ್ರಾಹ್ಮ ನಿಧಿಯೆಂದು ಕರೆಯಲಾಗಿದೆ.

೮೨. पूजको भवेत्—ಧನಧಾನ್ಯಾದಿಗಳನ್ನು ಕೊಟ್ಟು ಸತ್ಕರಿಸಬೇಕು. 'ಬ್ರಾಹ್ಮನಿಧಿ' ಎಂದರೆ ಬ್ರಾಹ್ಮಣರಲ್ಲಿ ಇಟ್ಟ ಐಶ್ವರ್ಯ. ಬ್ರಾಹ್ಮಣರು ಅಂದು ನಿಸ್ಪೃಹರಾದ ಸಾಮಾಜಿಕ ಮುಖಂಡರೂ ಸಾಂಸ್ಕೃತಿಕ ನೇತೃಗಳೂ ಆಗಿದ್ದರು; ಅವರೇ ಪ್ರಜಾಭಿಪ್ರಾಯವನ್ನು ರೂಪಿಸುವವರು ಮತ್ತು ಪ್ರತಿನಿಧಿಸುವವರು ಎನ್ನಿಸಿದ್ದರು. ನಿಜವಾದ ಪ್ರಜಾಪ್ರತಿನಿಧಿಗಳೆನ್ನಿಸಿದ್ದ ಅವರ ಜೊತೆಯಲ್ಲಿ ರಾಜನಿದ್ದರೆ ಅಂದು ಎಲ್ಲ ಪ್ರಜೆಗಳ ಜೊತೆಯಲ್ಲೂ ಅವನಿದ್ದಂತೆಯೇ ಎಂದು ತಿಳಿದುಕೊಳ್ಳಬಹುದಾಗಿತ್ತು.

न तं स्तेना न चामित्रा हरन्ति न च नश्यति ।
तस्माद्राज्ञा निधातव्यो ब्राह्मणेष्वक्षयो निधिः ॥ ८३ ॥

ನ ತಂ ಸ್ತೇನಾ ನ ಚಾಮಿತ್ರಾ ಹರಂತಿ ನ ಚ ನಶ್ಯತಿ ।
ತಸ್ಮಾದ್ರಾಜ್ಞಾ ನಿಧಾತವ್ಯೋ ಬ್ರಾಹ್ಮಣೇಷ್ವಕ್ಷಯೋ ನಿಧಿಃ ॥ ೮೩ ॥

೮೩. ಅದನ್ನು ಕಳ್ಳರು ಹಾಗೂ ಶತ್ರುಗಳು ಅಪಹರಿಸುವುದಿಲ್ಲ; ಅದು ನಾಶ-ವಾಗುವುದಿಲ್ಲ. ಆದ್ದರಿಂದ ರಾಜನು ಬ್ರಾಹ್ಮಣರಲ್ಲಿ ಅಕ್ಷಯವಾದ ನಿಧಿಯನ್ನಿಡಬೇಕು.

೮೩. न च नश्यति—न भूमिष्ठमिव विस्मृत्य प्रातिभाव्येन वा नश्यति (मे०)—ಬ್ರಹ್ಮಸ್ವಾಪಹಾರವನ್ನು ಅಂದು ಯಾರೂ ಮಾಡುತ್ತಿದ್ದಿಲ್ಲ; ಹಾಗೆ ಮಾಡುವುದು ಅತ್ಯಂತ ಪಾಪವೆಂದು ಪ್ರಜೆಗಳು ನಂಬಿದ್ದರು. ಆದುದರಿಂದ ಬ್ರಾಹ್ಮಣರಲ್ಲಿಟ್ಟ ಧನವು ಯಾವಾಗಲೂ ಸುರಕ್ಷಿತ. ಆಪತ್ಕಾಲದಲ್ಲಿ ಅಂಥ ಬ್ರಾಹ್ಮಣರ ನೆರವು ರಾಜನಿಗೆ ದೊರೆತರೆ ಅವನಿಗೆ ಜಯ ಕಟ್ಟಿಟ್ಟದ್ದು.

न स्कन्दते न व्यथते न विनश्यति कर्हिचित् ।
वरिष्ठमग्निहोत्रेभ्यो ब्राह्मणस्य मुखे हुतम् ॥ ८४ ॥

ನ ಸ್ಕಂದತೇ ನ ವ್ಯಥತೇ ನ ವಿನಶ್ಯತಿ ಕರ್ಹಿಚಿತ್ ।
ವರಿಷ್ಠಮಗ್ನಿಹೋತ್ರೇಭ್ಯೋ ಬ್ರಾಹ್ಮಣಸ್ಯ ಮುಖೇ ಹುತಮ್ ॥ ೮೪ ॥

೮೪. ಅಗ್ನಿಯಲ್ಲಿ ಹಾಕಿದ ಹವಿಸ್ಸಿಗಿಂತ ಬ್ರಾಹ್ಮಣನ ಮುಖದಲ್ಲಿ ಮಾಡಿದ ಹವನವು ಶ್ರೇಷ್ಠವಾದುದು (ಏಕೆಂದರೆ ಅದು) ಕೆಳಗೆ ಬೀಳುವದಿಲ್ಲ; ಬತ್ತಿ ಹೋಗುವದಿಲ್ಲ ಅಥವಾ ನಾಶವಾಗುವದಿಲ್ಲ.

೮೪. ಅಗ್ನಿಯಲ್ಲಿ ಹಾಕುವ ಆಹುತಿಯು ಚೆಲ್ಲಿದೆ ಬಿದ್ದುಹೋಗಬಹುದು. ಹಾಗೇ ಇಂಗಿ-ಹೋಗಬಹುದು ಅಥವಾ ನಶಿಸಬಹುದು. ಸತ್ಪಾತ್ರನಿಗೆ ಕೊಟ್ಟ ದಾನವು ಹಾಗೆ ಆಗುವುದಿಲ್ಲ. ಅದರ ಒಳ್ಳೆಯ ಫಲವು ನಿಶ್ಚಿತವಾಗಿ ದೊರಕುವುದು. ವಿದ್ಯಾವಿನಯಗಳಿಂದ ಕೂಡಿದ ಬ್ರಾಹ್ಮಣನು ಸತ್ಪಾತ್ರ: ಲೋಕಸಂಗ್ರಹವು ಅವನ ವಿದ್ಯಾಫಲವಾಗಿತ್ತು. ಆದುದರಿಂದ ಸರ್ವೋದಯವಾದಿಯಾದ ಆ ವಿದ್ವಾಂಸನು ರಾಜ-ಪ್ರಜೆಗಳಿಬ್ಬರ ಹಿತವನ್ನು ಸಾಧಿಸುವ ಕ್ರಮಗಳನ್ನು ಬೋಧಿಸಬಲ್ಲ ಸತ್ಪಾತ್ರ. ಅವನ ಬೆಂಬಲ ರಾಜನ ರಾಜ್ಯಭಾರದ ಅಸ್ತಿವಾರ.

सममब्राह्मणे दानं द्विगुणं ब्राह्मणब्रुवे ।
प्राधीते शतसाहस्रमनन्तं वेदपारगे ॥ ८५ ॥

ಸಮಮಬ್ರಾಹ್ಮಣೇ ದಾನಂ ದ್ವಿಗುಣಂ ಬ್ರಾಹ್ಮಣಬ್ರುವೇ ।
ಪ್ರಾಧೀತೇ ಶತಸಾಹಸ್ರಮನಂತಂ ವೇದಪಾರಗೇ ॥ ೮೫ ॥

೮೫. ಬ್ರಾಹ್ಮಣೇತರರಿಗೆ ಕೊಟ್ಟ ದಾನವು ಸಮವಾದ ಫಲವನ್ನು ಕೊಡುವದು. (ಕ್ರಿಯಾಶೂನ್ಯನಾಗಿ) 'ನಾನು ಬ್ರಾಹ್ಮಣನು' ಎಂದುಕೊಳ್ಳುವವನಿಗೆ ಕೊಟ್ಟರೆ ಅದು

ಇಮ್ಮಡಿ ಫಲವನ್ನು ಕೊಡುವದು; ವಿದ್ವಾಂಸನಿಗೆ ಕೊಟ್ಟರೆ ಲಕ್ಷ ಪಟ್ಟು ಫಲವನ್ನು ಕೊಡುವದು ಮತ್ತು ವೇದಪಾರಂಗತನಿಗೆ ಕೊಟ್ಟರೆ ಅನಂತ ಫಲವನ್ನು ಕೊಡುವದು.

೮೫. प्राधीते—ಅಧ್ಯಯನವನ್ನು ಮಾಡಿದವನು. 'सहस्रगुणमाचार्ये' ಎಂಬ ಮೂರನೆಯ ಪಾದದ ಪಾಠವಿದೆ. ವೇದವು ಸರ್ವಧರ್ಮಮೂಲ. ಧರ್ಮವು ಸರ್ವಪುರುಷಾರ್ಥಗಳ ನ್ಯಾಯವಾದ ಸಾಧನ. ಆದುದರಿಂದ ವೇದಪಾರಂಗತನು ಆದರ್ಶ ಭಾರತೀಯ, ಜಗತ್ಕುಟುಂಬಿ, ಜಗದ್ಧಿತವಾದಿಗಳ ಪ್ರಾಮುಖ್ಯವನ್ನು ಪ್ರತಿಯೊಬ್ಬ ರಾಜನೂ ಮನ್ನಿಸಬೇಕೆಂಬುದು ತಾತ್ಪರ್ಯ. ಅಪರಾಷ್ಟ್ರೀಯತೆ, ಅರಾಷ್ಟ್ರೀಯತೆಗಳೆರಡರ ಪ್ರಾಬಲ್ಯವನ್ನು ದಮಿಸಲೂ ಜಗದ್ಧಿತವಾದಿಗಳಿರುವುದು ಅಗತ್ಯವೆಂಬ ಮನುಧ್ವನಿಯಿಲ್ಲಿ ವೇದ್ಯ.

पात्रस्य हि विशेषेण श्रद्दधानतयैव च ।
अल्पं वा बहु वा प्रेत्य दानस्य फलमश्नुते ।। ८६ ।।
ಪಾತ್ರಸ್ಯ ಹಿ ವಿಶೇಷೇಣ ಶ್ರದ್ದಧಾನತಯೈವ ಚ ।
ಅಲ್ಪಂ ವಾ ಬಹು ವಾ ಪ್ರೇತ್ಯ ದಾನಸ್ಯ ಫಲಮಶ್ನುತೇ ॥ ೮೬ ॥

೮೬. ಪಾತ್ರನ ಯೋಗ್ಯತೆಯಂತೆ ಮತ್ತು (ದಾನ ಕೊಡುವವನ) ಶ್ರದ್ಧೆಯಂತೆ ಪರಲೋಕದಲ್ಲಿ ಅಲ್ಪವಾದ ಮತ್ತು ಅಧಿಕವಾದ ಫಲವನ್ನು (ದಾತಾರನು) ಪಡೆಯುತ್ತಾನೆ.

೮೬. पात्रस्य विशेषेण—ದಾನವನ್ನು ಸ್ವೀಕರಿಸುವ ಮನುಷ್ಯನ ವಿದ್ಯೆ, ತಪಸ್ಸು, ಚಾರಿತ್ರ ಮುಂತಾದ ವೈಶಿಷ್ಟ್ಯದಿಂದ. ಪರಲೋಕದ ಅನುಭವವು ಭೂಲೋಕದ ಹೊರಗಲ್ಲವೆಂದು ಸ್ವಾಮಿ ರಾಮತೀರ್ಥರು ಸಮರ್ಥವಾಗಿ ಪ್ರತಿಪಾದಿಸಿರುವುದರಿಂದ ಅದನ್ನು ಅವೈಜ್ಞಾನಿಕ ಅಥವಾ ಮೂಢ ನಂಬಿಗೆ ಎಂದು ಹೇಳಲು ಸಾಧ್ಯವಿಲ್ಲ. ಅವಿಜ್ಞಾತ ಪ್ರಜ್ಞೆಯ ಮನೋವಿಜ್ಞಾನವನ್ನು ಬೇಕಾದವರು ಓದಿ ಸಮಾಧಾನ ಹೊಂದಬಹುದು.

समोत्तमाधमे राजा त्वाहूतः पालयन्प्रजाः ।
न निवर्तेत संग्रामात्क्षात्रं धर्ममनुस्मरन् ।। ८७ ।।
ಸಮೋತ್ತಮಾಧಮೇ ರಾಜಾ ತ್ವಾಹೂತಃ ಪಾಲಯನ್ ಪ್ರಜಾಃ ।
ನ ನಿವರ್ತೇತ ಸಂಗ್ರಾಮಾತ್ಕ್ಷಾತ್ರಂ ಧರ್ಮಮನುಸ್ಮರನ್ ॥ ೮೭ ॥

೮೭. ಸಮಬಲ, ಅಧಿಕಬಲ ಅಥವಾ ನ್ಯೂನಬಲವುಳ್ಳ ಅರಸನು ಯುದ್ಧಕ್ಕಾಗಿ ಆಹ್ವಾನ ಕೊಟ್ಟರೆ ಪ್ರಜಾಪಾಲಕನಾದ ರಾಜನು ಕ್ಷಾತ್ರಧರ್ಮವನ್ನು ಸ್ಮರಿಸಿ ಯುದ್ಧದಿಂದ ನಿವೃತ್ತನಾಗಬಾರದು. (ಯುದ್ಧಾಹ್ವಾನವನ್ನು ಸ್ವೀಕರಿಸಬೇಕು).

೮೭. ಪ್ರತಿಪಕ್ಷದ ರಾಜನು ಯುದ್ಧಕ್ಕಾಗಿ ಆಹ್ವಾನಿಸಿದರೆ ಆ ಆಹ್ವಾನವನ್ನು ಸ್ವೀಕರಿಸಬೇಕೆಂಬುದು ಕ್ಷಾತ್ರಧರ್ಮದ ಒಂದು ಅಂಶ.

संग्रामेष्वनिवर्तित्वं प्रजानां चैव पालनम् ।
शुश्रूषा ब्राह्मणानां च राज्ञां श्रेयस्करं परम् ॥ ८८ ॥

ಸಂಗ್ರಾಮೇಷ್ವನಿವರ್ತಿತ್ವಂ ಪ್ರಜಾನಾಂ ಚೈವ ಪಾಲನಮ್ ।
ಶುಶ್ರೂಷಾ ಬ್ರಾಹ್ಮಣಾನಾಂ ಚ ರಾಜ್ಞಾಂ ಶ್ರೇಯಸ್ಕರಂ ಪರಮ್ ॥ ೮೮ ॥

೮೮. ಯುದ್ಧದಿಂದ ನಿವೃತ್ತನಾಗದೆ ಇರುವದು, ಪ್ರಜೆಗಳನ್ನು ಪಾಲಿಸುವದು ಮತ್ತು ಬ್ರಾಹ್ಮಣರ ಶುಶ್ರೂಷೆಯನ್ನು ಮಾಡುವದು—ಇವು ರಾಜನಿಗೆ ಬಹಳ ಶ್ರೇಯಸ್ಕರವಾಗಿವೆ.

आहवेषु मिथोऽन्योन्यं जिघांसन्तो महीक्षितः ।
युध्यमानाः परं शक्त्या स्वर्गं यान्त्यपराङ्मुखाः ॥ ८९ ॥

ಆಹವೇಷು ಮಿಥೋಽನ್ಯೋನ್ಯಂ ಜಿಘಾಂಸಂತೋ ಮಹೀಕ್ಷಿತಃ ।
ಯುಧ್ಯಮಾನಾಃ ಪರಂ ಶಕ್ತ್ಯಾ ಸ್ವರ್ಗಂ ಯಾಂತ್ಯಪರಾಙ್ಮುಖಾಃ ॥ ೮೯ ॥

೮೯. ಒಬ್ಬರು ಇನ್ನೊಬ್ಬರನ್ನು ಕೊಲ್ಲುವ ಇಚ್ಛೆಯುಳ್ಳ ರಾಜರು ಪರಸ್ಪರರಲ್ಲಿ ಸರ್ವಶಕ್ತಿಯಿಂದ ಯುದ್ಧದಲ್ಲಿ ಪರಾಙ್ಮುಖರಾಗದೆ ಹೋರಾಡಿ ಸ್ವರ್ಗವನ್ನು ಹೊಂದುತ್ತಾರೆ.

೮೯. स्वर्गं यान्ति—निश्चिते पराजये निराशस्य यदि युद्धावतारः, तत् स्वर्गाय एव (मे०) ಹೋಲಿಸಿರಿ:—

द्वाविमौ पुरुषौ लोके सूर्यमण्डलभेदिनौ ।
परिव्राट् योगयुक्तश्च शूरश्चाभिमुखो हतः ॥

न कूटैरायुधैर्हन्याद्युध्यमानो रणे रिपून् ।
न कर्णिभिर्नापि दिग्धैर्नाग्निज्वलिततेजनैः ॥ ९० ॥

ನ ಕೂಟೈರಾಯುಧೈರ್ಹನ್ಯಾದ್ಯುಧ್ಯಮಾನೋ ರಣೇ ರಿಪೂನ್ ।
ನ ಕರ್ಣಿಭಿರ್ನಾಪಿ ದಿಗ್ಧೈರ್ನಾಗ್ನಿಜ್ವಲಿತತೇಜನೈಃ ॥ ೯೦ ॥

೯೦. ರಣಾಂಗಣದಲ್ಲಿ ಯುದ್ಧ ಮಾಡುವಾಗ ಗೂಢವಾದ ಆಯುಧಗಳಿಂದ ಮತ್ತು ಕರ್ಣಾಕಾರದ ತುದಿಯುಳ್ಳ, ವಿಷಲಿಪ್ತವಾದ ಅಥವಾ ಸುಡುವ ಆಯುಧಗಳಿಂದ ಶತ್ರುಗಳನ್ನು ಹೊಡೆಯಬಾರದು.

೯೦. कूटैः आयुधैः—ಹೊರಗೆ ಕಾಣಲು ಕಟ್ಟಿಗೆಯಂತಿದ್ದು ಒಳಗೆ ತೀಕ್ಷ್ಣವಾದ ಶಸ್ತ್ರವಿರುವ ಆಯುಧಗಳಿಂದ. कर्णी—ಕರ್ಣಾಕಾರದ (ಚಂದ್ರಾಕಾರದ) ತುದಿಯುಳ್ಳ ಬಾಣವು. ಅದು ಶರೀರದಲ್ಲಿ ಹೊಕ್ಕರೆ ಅದನ್ನು ಹೊರಗೆ ತೆಗೆಯುವದು ಬಹಳ ಕಷ್ಟವಾಗುತ್ತದೆ. ಅಣುಬಾಂಬಿನ ಪ್ರಯೋಗವನ್ನು ನಿಲ್ಲಿಸಬೇಕೆಂಬ ಇಂದಿನ ಜಗದ್ಧಿತೈಷಿಗಳು ಮನೂಕ್ತವಾದ ಈ ಧರ್ಮಯುದ್ಧ ವಿಧಾನದ ವಿವರಗಳನ್ನು ಅಭ್ಯಸಿಸುವದೊಳಿತು.

न च हन्यात्स्थलारूढं न क्लीबं न कृताञ्जलिम् ।
न मुक्तकेशं नासीनं न तवास्मीति वादिनम् ॥ ९१ ॥

ನ ಚ ಹನ್ಯಾತ್ ಸ್ಥಲಾರೂಢಂ ನ ಕ್ಲೀಬಂ ನ ಕೃತಾಂಜಲಿಮ್ ।
ನ ಮುಕ್ತಕೇಶಂ ನಾಸೀನಂ ನ ತವಾಸ್ಮೀತಿ ವಾದಿನಂ ॥ ೯೧ ॥

೯೧. (ತಾನು ರಥದಲ್ಲಿದ್ದಾಗ) ಭೂಮಿಯ ಮೇಲೆ ನಿಂತ ಶತ್ರುವನ್ನು ಹೊಡೆಯಬಾರದು. ನಪುಂಸಕನಾದ, ಕೈಯನ್ನು ಮುಗಿದ, ಕೂದಲುಗಳನ್ನು ಬಿಚ್ಚಿಕೊಂಡಿರುವ, ಕೆಳಗೆ ಕುಳಿತುಕೊಂಡ ಮತ್ತು 'ನಾನು ನಿನ್ನವನಿದ್ದೇನೆ' ಎಂದು ಹೇಳುವ ಶತ್ರುವನ್ನು (ಯಾವಾಗಲೂ) ಹೊಡೆಯಬಾರದು.

೯೧. स्थलारूढं—युद्धभूमिं त्यक्त्वा स्थले अन्यैः अप्राप्त्यर्थं स्थितं (स०) ಅಂತಾರಾಷ್ಟ್ರೀಯ ಯುದ್ಧನೀತಿಗಳನ್ನು ಸುಧಾರಿಸಬಯಸುವವರು ಈ ಮನೂಕ್ತಿಯನ್ನು ಆಚರಣೆಗೆ ತರಲು ಪ್ರಯತ್ನಿಸುವುದೊಳಿತು. ಅದರಿಂದ ಬರ್ಬರತೆಯಿಂದ ಮಾನವಕುಲವು ಮುಕ್ತವಾದೀತು. ನಾಗರಿಕತೆಯ ಅರ್ಥವು ಸಂಪೂರ್ಣವಾಗಿ ಸಿದ್ಧಿಸೀತು.

न सुप्तं न विसन्नाहं न नग्नं न निरायुधम् ।
नायुध्यमानं पश्यन्तं न परेण समागतम् ॥ ९२ ॥

ನ ಸುಪ್ತಂ ನ ವಿಸನ್ನಾಹಂ ನ ನಗ್ನಂ ನ ನಿರಾಯುಧಮ್ ।
ನಾಯುಧ್ಯಮಾನಂ ಪಶ್ಯಂತಂ ನ ಪರೇಣ ಸಮಾಗತಮ್ ॥ ೯೨ ॥

೯೨. ಯಾವನು ಮಲಗಿದ್ದಾನೋ. ಕವಚವನ್ನು ತೆಗೆದಿಟ್ಟಿದ್ದಾನೋ. ಯಾವನ ವಸ್ತ್ರವು ಕಳಚಿ ಬಿದ್ದಿದೆಯೋ. ಯಾವನು ಆಯುಧರಹಿತನಾಗಿದ್ದಾನೋ. ಯುದ್ಧ ಮಾಡದೆ (ಕೇವಲ) ಯಾವನು ನೋಡುತ್ತಿದ್ದಾನೋ ಅಥವಾ ಯಾವನು ಬೇರೆಯವನ ಜೊತೆಗೆ ಯುದ್ಧ ಮಾಡುತ್ತಿದ್ದಾನೋ (ಅವನನ್ನು ಹೊಡೆಯಬಾರದು).

೯೨. न नग्नं—न भग्नमिति वा पाठः (मे०).

नायुधव्यसनप्राप्तं नार्तं नातिपरिक्षतम् ।
न भीतं न परावृत्तं सतां धर्ममनुस्मरन् ॥ ९३ ॥

ನಾಯುಧವ್ಯಸನಪ್ರಾಪ್ತಂ ನಾರ್ತಂ ನಾತಿಪರಿಕ್ಷತಮ್ ।
ನ ಭೀತಂ ನ ಪರಾವೃತ್ತಂ ಸತಾಂ ಧರ್ಮಮನುಸ್ಮರನ್ ॥ ೯೩ ॥

೯೩. ಆಯುಧವು (ಮುರಿದು ಹೋದದ್ದರಿಂದ) ಸಂಕಟದಲ್ಲಿದ್ದವನನ್ನು, ಶೋಕಾರ್ತನಾಗಿರುವವನನ್ನು, ಬಹಳ ಗಾಯಗೊಂಡವನನ್ನು, ಹೆದರಿದವನನ್ನು ಮತ್ತು ಯುದ್ಧದಿಂದ ಪರಾಙ್ಮುಖನಾದವನನ್ನು (ರಾಜನು) ಸುಕ್ಷತ್ರಿಯರ ಧರ್ಮವನ್ನು ಸ್ಮರಿಸಿ ಹೊಡೆಯಬಾರದು.

೯೩. आयुधव्यसनप्राप्तं— आयुधव्यसनम् आयुधकृच्छ्म् आयुधभङ्गः कुण्डलिभावः खड्गस्य, ज्याच्छेदः इत्येवमादिः तं प्राप्तम् (मे०)

यस्तु भीतः परावृत्तः संग्रामे हन्यते परैः ।
भर्तुर्यद्दुष्कृतं किंचित्तत्सर्वं प्रतिपद्यते ।। ९४ ।।
ಯಸ್ತು ಭೀತಃ ಪರಾವೃತ್ತಃ ಸಂಗ್ರಾಮೇ ಹನ್ಯತೇ ಪರೈಃ ।
ಭರ್ತುರ್ಯದ್ದುಷ್ಕೃತಂ ಕಿಂಚಿತ್ತತ್ಸರ್ವಂ ಪ್ರತಿಪದ್ಯತೇ ॥ ೯೪ ॥

೯೪. ಯಾವನು ಹೆದರಿ ಹಿಂದಿರುಗುವಾಗ ಯುದ್ಧದಲ್ಲಿ ಶತ್ರುಗಳಿಂದ ಕೊಲ್ಲಲ್ಪಡುತ್ತಾನೋ, ಅವನಿಗೆ ರಾಜನು ಮಾಡಿದ ಎಲ್ಲ ಪಾಪವೂ ತಟ್ಟುತ್ತದೆ.

೯೪. 'ಯುದ್ಧದಲ್ಲಿ ಭಯದಿಂದ ಪರಾವೃತ್ತನಾಗುವದು ಮಹಾಪಾಪ. ಆದ್ದರಿಂದ ಕ್ಷತ್ರಿಯನು ಯಾವಾಗಲೂ ಯುದ್ಧಪರಾಙ್ಮುಖನಾಗಬಾರದು.

यच्चास्य सुकृतं किंचिदमुत्रार्थमुपार्जितम् ।
भर्ता तत्सर्वमादत्ते परावृत्तहतस्य तु ।। ९५ ।।
ಯಚ್ಚಾಸ್ಯ ಸುಕೃತಂ ಕಿಂಚಿದಮುತ್ರಾರ್ಥಮುಪಾರ್ಜಿತಂ ।
ಭರ್ತಾ ತತ್ಸರ್ವಮಾದತ್ತೇ ಪರಾವೃತ್ತಹತಸ್ಯ ತು ॥ ೯೫ ॥

೯೫. ಹಿಂದಿರುಗುವಾಗ ಹತನಾದವನು ಪರಲೋಕಕ್ಕಾಗಿ ಯಾವ ಪುಣ್ಯವನ್ನು ಸಂಪಾದಿಸಿದ್ದಾನೋ ಅದೆಲ್ಲವೂ ರಾಜನಿಗೆ ಸೇರುತ್ತದೆ.

೯೫. ಯುದ್ಧಪರಾಙ್ಮುಖನಾಗದೆ ಇರುವದಕ್ಕಾಗಿ ಇದು ಇನ್ನೊಂದು ಕಾರಣ.

रथाश्वं हस्तिनं छत्रं धनं धान्यं पशून्स्त्रियः ।
सर्वद्रव्याणि कुप्यं च यो यज्जयति तस्य तत् ।। ९६ ।।

ರಥಾಶ್ವಂ ಹಸ್ತಿನಂ ಛತ್ರಂ ಧನಂ ಧಾನ್ಯಂ ಪಶೂನ್ ಸ್ತ್ರಿಯಃ ।
ಸರ್ವದ್ರವ್ಯಾಣಿ ಕುಪ್ಯಂ ಚ ಯೋ ಯಜ್ಜಯತಿ ತಸ್ಯ ತತ್ ॥ ೯೬ ॥

೯೬. ರಥ. ಕುದುರೆ. ಆನೆ. ಛತ್ರ. ಧನ. ಧಾನ್ಯ. ಪಶು. ಸ್ತ್ರೀ, ಎಲ್ಲ ದ್ರವ್ಯಗಳು ಮತ್ತು ಕಡಿಮೆ ಬೆಲೆಯ ಧಾತುಗಳು—ಇವುಗಳಲ್ಲಿ ಯಾವನು ಯಾವುದನ್ನು ಗೆಲ್ಲುತ್ತಾನೋ ಅದು ಅವನಿಗೆ ಸೇರುತ್ತದೆ.

೯೬. कुप्य—ಬಂಗಾರ ಮತ್ತು ಬೆಳ್ಳಿ ಬಿಟ್ಟು ಉಳಿದ ಧಾತುಗಳು ಬೆಲೆ ಬಾಳುವ ವಸ್ತುಗಳು ಮತ್ತು ಭೂಮಿ ರಾಜನಿಗೆ ಸೇರುತ್ತವೆ: ಉಳಿದ ವಸ್ತುಗಳು ಅವುಗಳನ್ನು ಗೆಲ್ಲುವ ಯೋಧನಿಗೆ.

राज्ञश्च दद्युरुद्धारमित्येषा वैदिकी श्रुतिः ।
राज्ञा च सर्वयोधेभ्यो दातव्यमपृथग्जितम् ॥ ९७ ॥
ರಾಜ್ಞಶ್ಚ ದದ್ಯುರುದ್ಧಾರಮಿತ್ಯೇಷಾ ವೈದಿಕೀ ಶ್ರುತಿಃ ।
ರಾಜ್ಞಾ ಚ ಸರ್ವಯೋಧೇಭ್ಯೋ ದಾತವ್ಯಮಪೃಥಗ್ಜಿತಮ್ ॥ ೯೭ ॥

೯೭. ಗೆದ್ದು ತಂದ ಹೆಚ್ಚಿನ ಬೆಲೆಯ ವಸ್ತುಗಳನ್ನು ರಾಜನಿಗೆ ಕೊಡಬೇಕೆಂದು ವೇದವಚನವಿದೆ. ಎಲ್ಲರೂ ಕೂಡಿ ಗೆದ್ದ ಧನವನ್ನು ರಾಜನು ಎಲ್ಲ ಯೋಧರಿಗೆ (ಅವರವರ ಪರಾಕ್ರಮದಂತೆ) ಹಂಚಿ ಕೊಡಬೇಕು.

೯೭. उद्धारं—सुवर्णरजतभूम्यादि उत्कृष्टं (राघ०). ಆನೆ. ಕುದುರೆ. ರಥಗಳನ್ನು ಸಹ ರಾಜನಿಗೆ ಕೊಡಬೇಕು. (ಗೌತಮ-ಧರ್ಮಸೂತ್ರ ೧೦-೨೦). वैदिकी श्रुति—'इन्द्रो वै वृत्रं हत्वा......स महान् भूत्वा देवता अब्रवीत् उद्धारम् इति' (मानवश्रौतसूत्र १-६-१).

एषोऽनुपस्कृतः प्रोक्तो योधधर्मः सनातनः ।
अस्माद्धर्मान्न च्यवेत क्षत्रियो घ्नन्रणे रिपून् ॥ ९८ ॥
ಏಷೋಽನುಪಸ್ಕೃತಃ ಪ್ರೋಕ್ತೋ ಯೋಧಧರ್ಮಃ ಸನಾತನಃ ।
ಅಸ್ಮಾದ್ಧರ್ಮಾನ್ನ ಚ್ಯವೇತ ಕ್ಷತ್ರಿಯೋ ಘ್ನನ್ರಣೇ ರಿಪೂನ್ ॥ ೯೮ ॥

೯೮. ಈ ಅನಿಂದ್ಯ ಮತ್ತು ಸನಾತನವಾದ ಯೋಧಧರ್ಮವನ್ನು (ನಾನು) ಹೇಳಿದ್ದೇನೆ. ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುವ ಕ್ಷತ್ರಿಯನು ಈ ಧರ್ಮದಿಂದ ಚ್ಯುತನಾಗಬಾರದು. (ಈ ಧರ್ಮವನ್ನು ಬಿಡಬಾರದು.)

೯೮. अनुपस्कृत—अगर्हितः अविकृतो वा (मे०).
अकृतप्रयत्नः स्वभावसिद्ध इत्यर्थः (न०).

अलब्धं चैव लिप्सेत लब्धं रक्षेत्प्रयत्नतः ।
रक्षितं वर्धयेच्चैव वृद्धं पात्रेषु निःक्षिपेत् ॥ ९९ ॥
ಅಲಬ್ಧಂ ಚೈವ ಲಿಪ್ಸೇತ ಲಬ್ಧಂ ರಕ್ಷೇತ್ಪ್ರಯತ್ನತಃ ।
ರಕ್ಷಿತಂ ವರ್ಧಯೇಚ್ಚೈವ ವೃದ್ಧಂ ಪಾತ್ರೇಷು ನಿಃಕ್ಷಿಪೇತ್ ॥ ೯೯ ॥

೯೯. ಅಪ್ರಾಪ್ತವಾದ ವಸ್ತುಗಳ ಪ್ರಾಪ್ತಿಯನ್ನು ಬಯಸಬೇಕು. ಪ್ರಾಪ್ತವಾದುದನ್ನು ಯತ್ನದಿಂದ ರಕ್ಷಿಸಬೇಕು. ರಕ್ಷಿಸಿದ ಧನವನ್ನು ಬೆಳೆಸಬೇಕು ಮತ್ತು (ಹೀಗೆ) ಬೆಳೆದ ಸಂಪತ್ತನ್ನು ಯೋಗ್ಯ ಜನರಿಗೆ ದಾನ ಮಾಡಬೇಕು.

೯೯. ರಾಜನು ಅಲ್ಪದಿಂದ ಸಂತುಷ್ಟನಾಗದೆ ಪ್ರಾಪ್ತವಾಗದಿರುವ ಭೂಮಿಯನ್ನು ಹಾಗೂ ಸಂಪತ್ತನ್ನು ಪಡೆಯಲು ಯತ್ನಿಸಬೇಕು. ಇದು ರಾಜನು ಜಾಗತಿಕ ಸರಕಾರವನ್ನು ರಚಿಸುವ ಮಹಾದರ್ಶವನ್ನು ಧ್ವನಿಸುತ್ತದೆ. ಜಗತ್ತನ್ನು ಏಕಚ್ಛತ್ರಾಧಿಪತ್ಯಕ್ಕೊಳಪಡಿಸಿದಾಗ ಮಾತ್ರ ಹಿಂಸಾಮಯವಾದ ಯುದ್ಧಗಳು ನಿಂತಾವು. ಆದ್ದರಿಂದ ಜಗತ್ಸಾರ್ವಭೌಮತೆಯೇ ರಾಜನ ಪರಮಾದರ್ಶ.

एतच्चतुर्विधं विद्यात्पुरुषार्थप्रयोजनम् ।
अस्य नित्यमनुष्ठानं सम्यक्कुर्यादतन्द्रितः ॥ १०० ॥
ಏತಚ್ಚತುರ್ವಿಧಂ ವಿದ್ಯಾತ್ಪುರುಷಾರ್ಥಪ್ರಯೋಜನಮ್ ।
ಅಸ್ಯ ನಿತ್ಯಮನುಷ್ಠಾನಂ ಸಮ್ಯಕ್ಕುರ್ಯಾದತಂದ್ರಿತಃ ॥ ೧೦೦ ॥

೧೦೦. ಪುರುಷಾರ್ಥಗಳನ್ನು ಪಡೆಯಲು ನಾಲ್ಕು ವಿಧವಾದ ಸಾಧನವಿದೆಯೆಂದು ತಿಳಿಯಬೇಕು. (ಆದ್ದರಿಂದ ರಾಜನು) ಆಲಸ್ಯವನ್ನು ಬಿಟ್ಟು ನಿತ್ಯವೂ ಇವರ ಅನುಷ್ಠಾನವನ್ನು ಸರಿಯಾಗಿ ಮಾಡಬೇಕು. (ಇದನ್ನು ಆಚರಿಸಬೇಕು.)

೧೦೦. पुरुषार्थ—ಧರ್ಮ. ಅರ್ಥ. ಕಾಮ ಮತ್ತು ಮೋಕ್ಷ—ಎಂಬಿವು ನಾಲ್ಕು ಪುರುಷಾರ್ಥಗಳು. ಇವುಗಳ ಸಾಧನೆಗಾಗಿ ನಾಲ್ಕು ವಿಧದ ಮಾರ್ಗವನ್ನು ಮುಂದಿನ ಶ್ಲೋಕದಲ್ಲಿ ಹೇಳಲಾಗಿದೆ.

अलब्धमिच्छेद्दण्डेन लब्धं रक्षेदवेक्षया ।
रक्षितं वर्धयेद्वृद्ध्या वृद्धं पात्रेषु निः क्षिपेत् ॥ १०१ ॥
ಅಲಬ್ಧಮಿಚ್ಛೇದ್ದಂಡೇನ ಲಬ್ಧಂ ರಕ್ಷೇದವೇಕ್ಷಯಾ ।
ರಕ್ಷಿತಂ ವರ್ಧಯೇದ್ವೃಧ್ಯಾ ವೃದ್ಧಂ ಪಾತ್ರೇಷು ನಿಃಕ್ಷಿಪೇತ್ ॥ ೧೦೧ ॥

೧೦೧. ಅಪ್ರಾಪ್ತವಾದುದನ್ನು ದಂಡದಿಂದ (ಜಯಿಸಲು) ಇಚ್ಛಿಸಬೇಕು. ಪ್ರಾಪ್ತವಾದುದನ್ನು ಜಾಗರೂಕತೆಯಿಂದ ರಕ್ಷಿಸಬೇಕು. ರಕ್ಷಿಸಿದ ಧನವನ್ನು ವ್ಯಾಪಾರದಿಂದ ಬೆಳೆಸಬೇಕು. ಬೆಳೆದ ಧನವನ್ನು ಸತ್ಪಾತ್ರರಿಗೆ ದಾನ ಮಾಡಬೇಕು.

೧೦೧. वृद्धि—ಜಲಮಾರ್ಗದಿಂದ ಅಥವಾ ಸ್ಥಲಮಾರ್ಗದಿಂದ ಮಾಡುವ ವ್ಯಾಪಾರ. ಸತ್ಪಾತ್ರದಾನವು ರಾಜಧರ್ಮದ ಅಂತಿಮ ಆದರ್ಶ. ಪರಮಧ್ಯೇಯ. ಉಳಿದೆಲ್ಲವೂ ಅದಕ್ಕೆ ಸಾಧನ. ಅದೇ ರಾಜ್ಯಹಿತ. ಜಗದ್ಧಿತ. ಅಶಿಷ್ಟರು ಅಸತ್ಪಾತ್ರರು. ಶಿಕ್ಷಾರ್ಹರು: ಅವರು ದಾನಾರ್ಹರಲ್ಲ. ಬಹುಸಂಖ್ಯಾತರೆಂಬುದು ಶಿಷ್ಟತ್ವಕ್ಕೆ ನಿಕಷವಲ್ಲ—ಎಂಬುದಿಲ್ಲಿ ಸ್ಫುರಣೀಯ.

नित्यमुद्यतदण्डः स्यान्नित्यं विवृतपौरुषः ।
नित्यं संवृतसंवार्यो नित्यं छिद्रानुसार्यरेः ॥ १०२ ॥
ನಿತ್ಯಮುದ್ಯತದಂಡಃ ಸ್ಯಾನ್ನಿತ್ಯಂ ವಿವೃತಪೌರುಷಃ ।
ನಿತ್ಯಂ ಸಂವೃತಸಂವಾರ್ಯೋ ನಿತ್ಯಂ ಛಿದ್ರಾನುಸಾರ್ಯರೇಃ ॥ ೧೦೨ ॥

೧೦೨. (ರಾಜನು) ಯಾವಾಗಲೂ ಎತ್ತಿದ ದಂಡದವನಾಗಿರಬೇಕು. ಅವನು ಯಾವಾಗಲೂ ತನ್ನ ಪೌರುಷವನ್ನು ಪ್ರಕಟಿಸಬೇಕು: ಗುಪ್ತವಾಗಿಡುವ ಸಂಗತಿಗಳನ್ನು ಯಾವಾಗಲೂ ಮುಚ್ಚಿಡಬೇಕು ಮತ್ತು ಶತ್ರುವಿನ ದೋಷವನ್ನು ಯಾವಾಗಲೂ ಶೋಧಿಸುತ್ತಿರಬೇಕು.

೧೦೨. उद्यतदण्ड—ಆನೆ. ಕುದುರೆ. ಶಸ್ತ್ರಾಸ್ತ್ರ ಮುಂತಾದ ಯುದ್ಧ ಸಾಧನಗಳನ್ನು ಯಾವಾಗಲೂ ಸಿದ್ಧವಾಗಿಡಬೇಕು.

संवृतसंवार्य—ಮಂತ್ರಿಗಳ ಮಾತುಕತೆ. ಅದರಂತೆ ಮಾಡುವ ಕಾರ್ಯಾಚರಣೆ ಮುಂತಾದ ವಿಷಯಗಳ ಬಗೆಗೆ ಗುಪ್ತತೆಯನ್ನು ಕಾಯ್ದಿಡಬೇಕು.

छिद्रानुसारी—ಶತ್ರುವಿನ ದುರ್ಬಲತೆ, ಅವನ ಮೇಲೆ ಬಂದ ಸಂಕಟ. ಅವನ ಪ್ರಜೆಗಳಲ್ಲಿದ್ದ ಅಸಂತೋಷ ಇತ್ಯಾದಿ ನ್ಯೂನತೆಗಳನ್ನು ವೀಕ್ಷಿಸುತ್ತಿರಬೇಕು.

नित्यमुद्यतदण्डस्य कृत्स्नमुद्विजते जगत् ।
तस्मात्सर्वाणि भूतानि दण्डेनैव प्रसाधयेत् ॥ १०३ ॥
ನಿತ್ಯಮುದ್ಯತದಂಡಸ್ಯ ಕೃತ್ಸ್ನಮುದ್ವಿಜತೇ ಜಗತ್ ।
ತಸ್ಮಾತ್ಸರ್ವಾಣಿ ಭೂತಾನಿ ದಂಡೇನೈವ ಪ್ರಸಾಧಯೇತ್ ॥ ೧೦೩ ॥

೧೦೩. ಯಾವಾಗಲೂ ದಂಡವನ್ನು ಎತ್ತಿದ ರಾಜನಿಗೆ ಇಡೀ ಜಗತ್ತು ಹೆದರುತ್ತದೆ. ಆದ್ದರಿಂದ ಎಲ್ಲ ಜೀವಿಗಳನ್ನೂ ದಂಡದಿಂದಲೇ ವಶಪಡಿಸಬೇಕು.

೧೦೩. उद्विग्नं सत् जगत् अस्वातन्त्र्यात् न अनिष्टाय समर्थम् इति नित्यदण्डः प्रशस्तः (राघ०).

अमाययैव वर्तेत न कथंचन मायया ।
बुद्ध्येतारिप्रयुक्तां च मायां नित्यं स्वसंवृतः ॥ १०४ ॥

ಅಮಾಯಯೈವ ವರ್ತೇತ ನ ಕಥಂಚನ ಮಾಯಯಾ ।
ಬುಧ್ಯೇತಾರಿಪ್ರಯುಕ್ತಾಂ ಚ ಮಾಯಾಂ ನಿತ್ಯಂ ಸ್ವಸಂವೃತಃ ॥ ೧೦೪ ॥

೧೦೪. ಯಾವಾಗಲೂ ನಿಷ್ಕಪಟ ರೀತಿಯಿಂದ (ರಾಜನು) ವರ್ತಿಸಬೇಕು: ಮೋಸದಿಂದ ವರ್ತಿಸಬಾರದು. ತನ್ನ ವ್ಯವಹಾರಗಳನ್ನು ಗುಪ್ತವಾಗಿಟ್ಟುಕೊಂಡು ಶತ್ರುಗಳು ಮಾಡುತ್ತಿರುವ ಕಪಟವನ್ನು (ದೂತರಿಂದ) ತಿಳಿದುಕೊಳ್ಳಬೇಕು.

೧೦೪. ರಾಜನು ಕಪಟ ವರ್ತನೆಗಿಳಿದರೆ ಯಾರೂ ಅವನನ್ನು ನಂಬಲಿಕ್ಕಿಲ್ಲ. ಆದ್ದರಿಂದ ಅಮಾತ್ಯಾದಿಗಳ ಜೊತೆಗೆ ರಾಜನು ನಿಷ್ಕಪಟವಾಗಿ ನಡೆದುಕೊಳ್ಳಬೇಕು.

अरिप्रयुक्ता मायां—ತನ್ನ ಅಮಾತ್ಯಾದಿಗಳಲ್ಲಿ ಭೇದಭಾವವನ್ನು ಉಂಟುಮಾಡುವ ಶತ್ರುವಿನ ಕಪಟವನ್ನು ರಾಜನು ತಿಳಿಯಬೇಕು.

नास्य छिद्रं परो विद्याद्विद्याच्छिद्रं परस्य तु ।
गूहेत्कूर्म इवाङ्गानि रक्षेद्विवरमात्मनः ।। १०५ ।।

ನಾಸ್ಯ ಛಿದ್ರಂ ಪರೋ ವಿದ್ಯಾದ್ವಿದ್ಯಾಚ್ಛಿದ್ರಂ ಪರಸ್ಯ ತು ।
ಗೂಹೇತ್ಕೂರ್ಮ ಇವಾಂಗಾನಿ ರಕ್ಷೇದ್ವಿವರಮಾತ್ಮನಃ ॥ ೧೦೫ ॥

೧೦೫. ತನ್ನ ದೋಷವು ಬೇರೆಯವರಿಗೆ ಗೊತ್ತಾಗಬಾರದು: ಆದರೆ (ರಾಜನು ಮಾತ್ರ) ಬೇರೆಯವರ ದೋಷಗಳನ್ನು ತಿಳಿದುಕೊಳ್ಳಬೇಕು. ಆಮೆಯು ತನ್ನ ಅಂಗಗಳನ್ನು ಮುಚ್ಚಿಟ್ಟುಕೊಂಡಿರುವಂತೆ ರಾಜನು (ಅಮಾತ್ಯ, ಕೋಶ ಆದಿ) ಅಂಗಗಳನ್ನು ಕಾಪಾಡಿಕೊಳ್ಳಬೇಕು. ಮತ್ತು ತನ್ನ ನ್ಯೂನತೆಗಳನ್ನು (ಬೇರೆಯವರಿಗೆ ಗೊತ್ತಾಗದಂತೆ) ಬಚ್ಚಿಟ್ಟುಕೊಳ್ಳಬೇಕು.

೧೦೫. छिद्र—ಅಮಾತ್ಯರಲ್ಲಿದ್ದ ವೈಮನಸ್ಸು ಮುಂತಾದದೋಷಗಳು.

अङ्गानि—'स्वाम्यमात्यश्च राष्ट्रं च दुर्गं कोशो बलं सुहृत् ।
परस्परोपकारीदं सप्ताङ्गं राज्यमुच्यते ।।
—कामन्दकीय नीतिसार ४-१.

बकवच्चिन्तयेदर्थान्सिंहवच्च पराक्रमेत् ।
वृकवच्चावलुम्पेत शशवच्च विनिष्पतेत् ।। १०६ ।।

ಬಕವಚ್ಚಿಂತಯೇದರ್ಥಾನ್ ಸಿಂಹವಚ್ಚ ಪರಾಕ್ರಮೇತ್ ।
ವೃಕವಚ್ಚಾವಲುಂಪೇತ ಶಶವಚ್ಚ ವಿನಿಷ್ಪತೇತ್ ॥ ೧೦೬ ॥

೧೦೬. ಬಕಪಕ್ಷಿಯಂತೆ ಅರ್ಥಚಿಂತನ ಮಾಡಬೇಕು; ಸಿಂಹದಂತೆ ಪರಾಕ್ರಮವನ್ನು ತೋರಿಸಬೇಕು: ತೋಳದಂತೆ (ದ್ರವ್ಯವನ್ನು) ಅಪಹರಿಸಬೇಕು ಮತ್ತು ಮೊಲದಂತೆ ರಾಜನು (ಶತ್ರುಗಳು ಸುತ್ತುಗಟ್ಟಿದಾಗ) ಪಾರಾಗಿ ಹೋಗಬೇಕು.

೧೦೬. ಬಕವು ಚಂಚಲವಾದ ಮೀನುಗಳನ್ನು ಏಕಾಗ್ರ ಚಿತ್ತದಿಂದ ಹಿಡಿಯುವಂತೆ ಸುರಕ್ಷಿತವಾದ ಶತ್ರುಪ್ರದೇಶವನ್ನು ಕಬಳಿಸಲು ರಾಜನು ಚಿಂತನ ನಡೆಸಬೇಕು. ಸಿಂಹವು ಸಣ್ಣದಾಗಿದ್ದರೂ ಸ್ಥೂಲವಾದ ಆನೆಯ ಮೇಲೆ ಆಕ್ರಮಣ ಮಾಡುವಂತೆ ರಾಜನು ಬಲಾಢ್ಯ ಶತ್ರುವಿನ ಮೇಲೆ ದಾಳಿ ಮಾಡಬೇಕು. ಕುರುಬನು ಅಜಾಗರೂಕನಿದ್ದಾನೆಂದು ನೋಡಿ ತೋಳವು ಮೇಕೆಯನ್ನು ಕೊಲ್ಲುವಂತೆ ರಾಜನು ಶತ್ರುವಿನ ಸಂಪತ್ತನ್ನು ಅಪಹರಿಸಬೇಕು. ಅನೇಕ ವ್ಯಾಧರು ನಾಯಿಗಳ ಸಮೇತವಾಗಿ ಸುತ್ತುವರಿದಿದ್ದರೂ ಮೊಲವು ಹೇಗೋ ತಪ್ಪಿಸಿಕೊಂಡು ಓಡಿ ಹೋಗುವಂತೆ ರಾಜನು ಸಹ ಶತ್ರುಗಳು ಸುತ್ತುಗಟ್ಟಿದಾಗ ಅವರನ್ನು ಮೋಸಗೊಳಿಸಿ ಪಾರಾಗಿ ಹೋಗಬೇಕು.

एवं विजयमानस्य येऽस्य स्युः परिपन्थिनः ।
तानानयेद्वशं सर्वान्सामादिभिरुपक्रमैः ॥ १०७ ॥

ಏವಂ ವಿಜಯಮಾನಸ್ಯ ಯೇಽಸ್ಯ ಸ್ಯುಃ ಪರಿಪಂಥಿನಃ ।
ತಾನಾನಯೇದ್ವಶಂ ಸರ್ವಾನ್ ಸಾಮಾದಿಭಿರುಪಕ್ರಮೈಃ ॥ ೧೦೭ ॥

೧೦೭. ಹೀಗೆ ವಿಜಯಿಯಾಗಲು ಪ್ರವೃತ್ತನಾದ ರಾಜನ ವಿರುದ್ಧವಾಗಿ ಯಾರು ನಿಲ್ಲುತ್ತಾರೋ, ಅವರನ್ನು ಸಾಮಾದಿ ಉಪಾಯಗಳಿಂದ ವಶಪಡಿಸಿಕೊಳ್ಳಬೇಕು.

೧೦೭. सामादिभिः—ಸಾಮ. ದಾನ. ಭೇದ ಮತ್ತು ದಂಡ ಎಂಬ ನಾಲ್ಕು ಉಪಾಯಗಳಿಂದ.

यदि ते तु न तिष्ठेयुरुपायैः प्रथमैस्त्रिभिः ।
दण्डेनैव प्रसह्यैतांश्छनकैर्वशमानयेत् ॥ १०८ ॥

ಯದಿ ತೇ ತು ನ ತಿಷ್ಠೇಯುರುಪಾಯೈಃ ಪ್ರಥಮೈಸ್ತ್ರಿಭಿಃ ।
ದಂಡೇನೈವ ಪ್ರಸಹ್ಯೈತಾನ್ ಶನಕೈರ್ವಶಮಾನಯೇತ್ ॥ ೧೦೮ ॥

೧೦೮. ಅವರು (ಸಾಮ. ದಾನ ಮತ್ತು ಭೇದ ಎಂಬ) ಮೊದಲಿನ ಮೂರು ಉಪಾಯಗಳಿಂದ ವಶರಾಗಿ ನಿಲ್ಲದಿದ್ದರೆ. ದಂಡದಿಂದಲೇ ಅವರನ್ನು ಆಕ್ರಮಿಸಿ ಕ್ರಮವಾಗಿ ಅವರನ್ನು ವಶಪಡಿಸಿಕೊಳ್ಳಬೇಕು.

೧೦೮. ಬೇರೆ ಉಪಾಯಗಳಿಲ್ಲದಾಗ ಮಾತ್ರ ದಂಡಪ್ರಯೋಗವನ್ನು ಮಾಡಬೇಕು.

सामादीनामुपायानां चतुर्णामपि पण्डिताः ।
सामदण्डौ प्रशंसन्ति नित्यं राष्ट्राभिवृद्धये ॥ १०९ ॥

ಸಾಮಾದೀನಾಮುಪಾಯಾನಾಂ ಚತುರ್ಣಾಮಪಿ ಪಂಡಿತಾಃ ।
ಸಾಮದಂಡೌ ಪ್ರಶಂಸಂತಿ ನಿತ್ಯಂ ರಾಷ್ಟ್ರಾಭಿವೃದ್ಧಯೇ ॥ ೧೦೯ ॥

೧೦೯. ಸಾಮಾದಿ ನಾಲ್ಕು ಉಪಾಯಗಳಿದ್ದರೂ ವಿದ್ವಾಂಸರು ರಾಷ್ಟ್ರದ ಅಭಿವೃದ್ಧಿಗಾಗಿ ಸಾಮವನ್ನು ಮತ್ತು ದಂಡವನ್ನು (ಮಾತ್ರ) ಪ್ರಶಂಸಿಸುತ್ತಾರೆ.

೧೦೯. प्रशंसन्ति—ಸಾಮ ದಂಡಗಳಿಂದ ಪ್ರಯಾಸ, ಧನವ್ಯಯ ಮತ್ತು ಸೈನ್ಯ ನಾಶವಾಗುವದಿಲ್ಲ—ಇದು ಪ್ರಶಂಸೆಗೆ ಕಾರಣ.

यथोद्धरति निर्दाता कक्षं धान्यं च रक्षति ।
तथा रक्षेन्नृपो राष्ट्रं हन्याच्च परिपन्थिनः ॥ ११० ॥
ಯಥೋದ್ಧರತಿ ನಿರ್ದಾತಾ ಕಕ್ಷಂ ಧಾನ್ಯಂ ಚ ರಕ್ಷತಿ ।
ತಥಾ ರಕ್ಷೇನ್ನೃಪೋ ರಾಷ್ಟ್ರಂ ಹನ್ಯಾಚ್ಚ ಪರಿಪಂಥಿನಃ ॥ ೧೧೦ ॥

೧೧೦. ಕೃಷಿಕನು ಹೇಗೆ (ಹೊಲದಲ್ಲಿ ಬೆಳೆದ) ಕಳೆಯನ್ನು ಕಿತ್ತೊಗೆಯುತ್ತಾನೋ ಮತ್ತು ಧಾನ್ಯವನ್ನು ರಕ್ಷಿಸುತ್ತಾನೋ, ಹಾಗೇ ರಾಜನು (ಸಜ್ಜನಸಹಿತವಾದ) ರಾಜ್ಯವನ್ನು ರಕ್ಷಿಸಬೇಕು ಮತ್ತು ದುರ್ಜನರನ್ನು ಸಂಹರಿಸಬೇಕು.

೧೧೦. ರಾಜನು ಸಜ್ಜನರನ್ನು ರಕ್ಷಿಸಬೇಕು ಮತ್ತು ದುಷ್ಟರನ್ನು ದಂಡಿಸಬೇಕು.
(परित्राणाय साधूनां विनाशाय च दुष्कृताम् । —गीता ४-८).

मोहाद्राजा स्वराष्ट्रं यः कर्षयत्यनवेक्षया ।
सोऽचिराद्भ्रश्यते राज्याज्जीविताच्च सबान्धवः ॥ १११ ॥
ಮೋಹಾದ್ರಾಜಾ ಸ್ವರಾಷ್ಟ್ರಂ ಯಃ ಕರ್ಷಯತ್ಯನವೇಕ್ಷಯಾ ।
ಸೋಽಚಿರಾದ್ಭ್ರಶ್ಯತೇ ರಾಜ್ಯಾಜ್ಜೀವಿತಾಚ್ಚ ಸಬಾಂಧವಃ ॥ ೧೧೧ ॥

೧೧೧. ಯಾವ ರಾಜನು ಅಜ್ಞಾನದಿಂದ ತನ್ನ ರಾಜ್ಯದಲ್ಲಿರುವ ಜನರನ್ನು ವಿಚಾರಮಾಡದೆ ಪೀಡಿಸುತ್ತಾನೋ ಅವನು ಶೀಘ್ರವಾಗಿಯೇ ರಾಜ್ಯ ಮತ್ತು ಜೀವಿತಗಳನ್ನು ಕಳೆದುಕೊಳ್ಳುತ್ತಾನೆ.

೧೧೧. अनवेक्षया—दुष्टशिष्टाज्ञानेन (कु०).
कर्षयति—लोभेन अधिकदण्डाग्निना पीडयति (राघ०).
ಜನತೆಯನ್ನು ಪೀಡಿಸುವ ರಾಜನು ಜನರಿಂದಲೇ ಹತನಾಗುತ್ತಾನೆ: ಹಾಗೆ ಹತಗೊಳಿಸಲು ಜನರು ಸದಾ ಸಂಘಟಿತರಾಗಿರುವುದಗತ್ಯ ಎಂಬುದಿಲ್ಲಿ ಸ್ಪಷ್ಟವಾಗಿ ಸೂಚಿಸಲ್ಪಟ್ಟಿದೆ.

शरीरकर्षणात्प्राणाः क्षीयन्ते प्राणिनां यथा ।
तथा राज्ञामपि प्राणाः क्षीयन्ते राष्ट्रकर्षणात् ॥ ११२ ॥

ಶರೀರಕರ್ಷಣಾತ್ ಪ್ರಾಣಾಃ ಕ್ಷೀಯಂತೇ ಪ್ರಾಣಿನಾಂ ಯಥಾ ।
ತಥಾ ರಾಜ್ಞಾಮಪಿಪ್ರಾಣಾಃ ಕ್ಷೀಯಂತೇ ರಾಷ್ಟ್ರಕರ್ಷಣಾತ್ ॥ ೧೧೨ ॥

೧೧೨. ಶರೀರವು ಕ್ಷೀಣವಾದರೆ ಹೇಗೆ ಪ್ರಾಣಿಗಳ ಜೀವವು ನಾಶವಾದೀತೋ, ಹಾಗೇ ರಾಜ್ಯವನ್ನು ಕ್ಷೀಣ ಮಾಡಿದರೆ ರಾಜರ ಪ್ರಾಣಗಳು ನಶಿಸುತ್ತವೆ.

೧೧೨. ಆಹಾರ ಕೊಡದಿರುವುದರಿಂದ ಶರೀರವು ಕ್ಷೀಣವಾಗಿ ಪ್ರಾಣಹೋಗುವಂತೆ ಜನರನ್ನು ಪೀಡಿಸುವದರಿಂದ ರಾಜನ ಪ್ರಾಣವು ಹೋಗುತ್ತದೆ. ಆದ್ದರಿಂದ ರಾಜನು ತನ್ನ ದೇಹದಂತೆ ಜನರನ್ನು ಕಾಪಾಡಬೇಕು. ಇಲ್ಲವಾದರೆ ಅವರು ದಂಗೆಯೆದ್ದು ಅವನನ್ನು ಕೊಲ್ಲುತ್ತಾರೆ.

राष्ट्रस्य संग्रहे नित्यं विधानमिदमाचरेत् ।
सुसंगृहीतराष्ट्रो हि पार्थिवः सुखमेधते ॥ ११३ ॥

ರಾಷ್ಟ್ರಸ್ಯ ಸಂಗ್ರಹೇ ನಿತ್ಯಂ ವಿಧಾನಮಿದಮಾಚರೇತ್ ।
ಸುಸಂಗೃಹೀತರಾಷ್ಟ್ರೋ ಹಿ ಪಾರ್ಥಿವಃ ಸುಖಮೇಧತೇ ॥ ೧೧೩ ॥

೧೧೩. ರಾಜ್ಯದ ರಕ್ಷಣೆಗಾಗಿ ರಾಜನು ಯಾವಾಗಲೂ ಈ (ಮುಂದೆ ಹೇಳಿದ) ಉಪಾಯವನ್ನು ಮಾಡಬೇಕು; ಏಕೆಂದರೆ ರಾಜ್ಯವನ್ನು ಸರಿಯಾಗಿ ಸ್ವಾಧೀನದಲ್ಲಿಟ್ಟು-ಕೊಂಡ ರಾಜನು ಸಮೃದ್ಧನಾಗಿ ಸುಖಪಡುತ್ತಾನೆ.

೧೧೩. ರಾಜ್ಯದ ಸುರಕ್ಷಿತತೆಗಾಗಿ ಮಾಡಬೇಕಾದ ವಿಧಾನವನ್ನು ೧೧೪ ರಿಂದ ೧೨೪ನೆಯ ವರೆಗಿನ ಶ್ಲೋಕಗಳಲ್ಲಿ ಹೇಳಲಾಗಿದೆ.

मुसंगृहीत—संग्रहः आत्मीयताकरणे (स०).

द्वयोस्त्रयाणां पञ्चानां मध्ये गुल्ममधिष्ठितम् ।
तथा ग्रामशतानां च कुर्याद्राष्ट्रस्य संग्रहम् ॥ ११४ ॥

ದ್ವಯೋಸ್ತ್ರಯಾಣಾಂ ಪಂಚಾನಾಂ ಮಧ್ಯೇ ಗುಲ್ಮಮಧಿಷ್ಠಿತಮ್ ।
ತಥಾ ಗ್ರಾಮಶತಾನಾಂ ಚ ಕುರ್ಯಾದ್ರಾಷ್ಟ್ರಸ್ಯ ಸಂಗ್ರಹಮ್ ॥ ೧೧೪ ॥

೧೧೪. ಎರಡು, ಮೂರು, ಐದು ಅಥವಾ ನೂರು ಹಳ್ಳಿಗಳ ಮಧ್ಯದಲ್ಲಿ ಒಂದು ರಕ್ಷಕ ಪಡೆಯನ್ನು ಅಧಿಕಾರಿಸಮೇತವಾಗಿಡಬೇಕು. ಹೀಗೆ ರಾಜ್ಯದ ರಕ್ಷಣೆಯನ್ನು ಮಾಡಬೇಕು.

೧೧೪. ಹಳ್ಳಿಗಳು ಸಣ್ಣವು ಅಥವಾ ದೊಡ್ಡವು ಇದ್ದಂತೆ ಮತ್ತು ಅಲ್ಲಿ ಕಳ್ಳರ ಉಪದ್ರವ ಕಡಿಮೆ ಅಥವಾ ಹೆಚ್ಚು ಇದ್ದದ್ದನ್ನು ನೋಡಿ ಆವಶ್ಯಕತೆಯಿದ್ದಂತೆ ಅಲ್ಲಲ್ಲಿ ರಕ್ಷಕರ ಪಡೆಯನ್ನು (ಗುಲ್ಮವನ್ನು) ಇಡಬೇಕು.

अधिष्ठितम्—सत्यप्रधानपुरुषाधिष्ठितम् (कु०).

ग्रामस्याधिपतिं कुर्याद्दशग्रामपतिं तथा ।
विंशतीशं शतेशं च सहस्रपतिमेव च ॥ ११५ ॥
ಗ್ರಾಮಸ್ಯಾಧಿಪತಿಂ ಕುರ್ಯಾದ್ದಶಗ್ರಾಮಪತಿಂ ತಥಾ ।
ವಿಂಶತೀಶಂ ಶತೇಶಂ ಚ ಸಹಸ್ರಪತಿಮೇವ ಚ ॥ ೧೧೫ ॥

೧೧೫. ರಾಜನು ಒಂದು ಹಳ್ಳಿಯ ಅಧಿಕಾರಿಯನ್ನು. ಹತ್ತು ಹಳ್ಳಿಗಳ ಅಧಿಕಾರಿಯನ್ನು, ಇಪ್ಪತ್ತು ಹಳ್ಳಿಗಳ ಅಧಿಕಾರಿಯನ್ನು ನೂರು ಹಳ್ಳಿಗಳ ಅಧಿಕಾರಿಯನ್ನು ಹಾಗೂ ಸಾವಿರ ಹಳ್ಳಿಗಳ ಅಧಿಕಾರಿಯನ್ನು ನೇಮಿಸಬೇಕು.

೧೧೫. ग्रामस्याधिपतिं करग्रहाद्यर्थम् (स०).

ग्रामदोषान्समुत्पन्नान् ग्रामिकः शनकैः स्वयम् ।
शंसेद्ग्रामदशेशाय दशेशो विंशतीशिने ॥ ११६ ॥
ಗ್ರಾಮದೋಷಾನ್ಸಮುತ್ಪನ್ನಾನ್ಗ್ರಾಮಿಕಃ ಶನಕೈಃ ಸ್ವಯಮ್ ।
ಶಂಸೇದ್ಗ್ರಾಮದಶೇಶಾಯ ದಶೇಶೋ ವಿಂಶತೀಶಿನೇ ॥ ೧೧೬ ॥

೧೧೬. ಹಳ್ಳಿಯಲ್ಲಿ ಉಂಟಾದ ಉಪದ್ರವದ ಬಗೆಗೆ ಹಳ್ಳಿಯ ಅಧಿಕಾರಿಯು ಹತ್ತು ಹಳ್ಳಿಗಳ ಅಧಿಕಾರಿಗೆ. ಮತ್ತು ಹತ್ತು ಹಳ್ಳಿಗಳ ಅಧಿಕಾರಿಯು ಇಪ್ಪತ್ತು ಹಳ್ಳಿಗಳ ಅಧಿಕಾರಿಗೆ ಕ್ರಮವಾಗಿ ತಿಳಿಸಬೇಕು.

विंशतीशस्तु तत्सर्वं शतेशाय निवेदयेत् ।
शंसेद् ग्रामशतेशस्तु सहस्रपतये स्वयम् ॥ ११७ ॥
ವಿಂಶತೀಶಸ್ತು ತತ್ಸರ್ವಂ ಶತೇಶಾಯ ನಿವೇದಯೇತ್ ।
ಶಂಸೇದ್ಗ್ರಾಮಶತೇಶಸ್ತು ಸಹಸ್ರಪತಯೇ ಸ್ವಯಮ್ ॥ ೧೧೭ ॥

೧೧೭. ಇಪ್ಪತ್ತು ಹಳ್ಳಿಗಳ ಅಧಿಕಾರಿಯು ಅದೆಲ್ಲವನ್ನೂ ನೂರು ಹಳ್ಳಿಗಳ ಅಧಿಕಾರಿಗೆ ತಿಳಿಸಬೇಕು ಮತ್ತು ನೂರು ಹಳ್ಳಿಗಳ ಅಧಿಕಾರಿಯು ತಾನಾಗಿ ಅದನ್ನು ಸಾವಿರ ಹಳ್ಳಿಗಳ ಅಧಿಕಾರಿಗೆ ತಿಳಿಸಬೇಕು.

೧೧೬–೧೧೭. ಗ್ರಾಮದಲ್ಲಿ ಕಳ್ಳರ ಹಾಗೂ ಪುಂಡರ ಉಪದ್ರವವನ್ನು ತಡೆಯುವುದು ಅಸಾಧ್ಯವಾದರೆ ಗ್ರಾಮದ ಮುಖ್ಯಸ್ಥನು ಹತ್ತು ಹಳ್ಳಿಗಳ ಮುಖ್ಯಸ್ಥನಿಗೆ, ಅವನು ಅವನ ಮೇಲಿನ ಅಧಿಕಾರಿಗೆ. ತಿಳಿಸಿ ಸಮಾಜ ಕಂಟಕರ ಕಾಟವನ್ನು ಪರಿಹರಿಸಬೇಕು.

यानि राजप्रदेयानि प्रत्यहं ग्रामवासिभिः ।
अन्नपानेन्धनादीनि ग्रामिकस्तान्यवाप्नुयात् ।। ११८ ।।

ಯಾನಿ ರಾಜಪ್ರದೇಯಾನಿ ಪ್ರತ್ಯಹಂ ಗ್ರಾಮವಾಸಿಭಿಃ ।
ಅನ್ನಪಾನೇಂಧನಾದೀನಿ ಗ್ರಾಮಿಕಸ್ತಾನ್ಯವಾಪ್ನುಯಾತ್ ॥ ೧೧೮ ॥

೧೧೮. ಗ್ರಾಮವಾಸಿಯಾದವರು ಪ್ರತಿನಿತ್ಯವೂ ರಾಜನಿಗೆ ಕೊಡಬೇಕಾದ ಅನ್ನ. ಪಾನ. ಕಾಷ್ಠ ಮುಂತಾದವುಗಳನ್ನು ಗ್ರಾಮಾಧಿಪತಿಯು (ತನ್ನ ವೃತ್ತಿಗಾಗಿ) ತೆಗೆದು ಕೊಳ್ಳಬೇಕು.

೧೧೮. राजप्रदेयानि—एतावत् अत्र प्रत्यहं राजाधिकृतपुरुषाय भक्तार्थं देयम् इति प्रागेव नियमितानि (स०).

दशी कुलं तु भुञ्जीत विंशी पञ्च कुलानि च ।
ग्रामं ग्रामशताध्यक्षः सहस्राधिपतिः पुरम् ।। ११९ ।।

ದಶೀ ಕುಲಂ ತು ಭುಂಜೀತ ವಿಂಶೀ ಪಂಚಕುಲಾನಿ ಚ ।
ಗ್ರಾಮಂ ಗ್ರಾಮಶತಾಧ್ಯಕ್ಷಃ ಸಹಸ್ರಾಧಿಪತಿಃ ಪುರಮ್ ॥ ೧೧೯ ॥

೧೧೯. ಹತ್ತು ಹಳ್ಳಿಗಳ ಅಧಿಕಾರಿಯು (ಹನ್ನೆರಡು ಎತ್ತುಗಳಿಂದ ಸಾಗಿಸಲು ಯೋಗ್ಯವಾದ) 'ಕುಲ'ವನ್ನು ಉಪಯೋಗಿಸಬೇಕು. ಇಪ್ಪತ್ತು ಹಳ್ಳಿಗಳ ಅಧಿಕಾರಿಯು ಐದು 'ಕುಲ'ಗಳನ್ನು. ನೂರು ಹಳ್ಳಿಗಳ ಅಧಿಕಾರಿಯು ಒಂದು ಗ್ರಾಮವನ್ನು ಮತ್ತು ಸಾವಿರ ಹಳ್ಳಿಗಳ ಮುಖ್ಯಸ್ಥನು ಒಂದು ಪುರವನ್ನು ಉಪಭೋಗಿಸಬೇಕು.

೧೧೯. कुलं—षड्गवं मध्यमं हलमिति तथाविधहलद्वयेन यावति भूमिः वाह्यते तत् कुलमिति वदन्ति । (कु०). ಶತಗ್ರಾಮಾಧಿಪತಿಯು ಒಂದು ಮಧ್ಯಮ ಆಕಾರದ ಹಳ್ಳಿಯಿಂದ ಪ್ರಾಪ್ತವಾಗುವ ಕರವನ್ನು ಮತ್ತು ಸಹಸ್ರ ಗ್ರಾಮಾಧಿಪತಿಯು ಒಂದು ಮಧ್ಯಮ ಆಕಾರದ ನಗರದಿಂದ ಪ್ರಾಪ್ತವಾಗುವ ಕರವನ್ನು ಉಪಭೋಗಿಸಬೇಕು.

तेषां ग्राम्याणि कार्याणि पृथक्कार्याणि चैव हि ।
राज्ञोऽन्यः सचिवः स्निग्धस्तानि पश्येदतन्द्रितः ।। १२० ।।

ತೇಷಾಂ ಗ್ರಾಮ್ಯಾಣಿ ಕಾರ್ಯಾಣಿ ಪೃಥಕ್ಕಾರ್ಯಾಣಿ ಚೈವ ಹಿ ।
ರಾಜ್ಞೋಽನ್ಯಃ ಸಚಿವಃ ಸ್ನಿಗ್ಧಸ್ತಾನಿ ಪಶ್ಯೇದತಂದ್ರಿತಃ ॥ ೧೨೦ ॥

೧೨೦. ಗ್ರಾಮಗಳಿಗೆ ಸಂಬಂಧಿಸಿದ ಅವರ ಕಾರ್ಯಗಳನ್ನು ಮತ್ತು ಬೇರೆ ಕಾರ್ಯಗಳನ್ನು ರಾಜನ ಹಿತೈಷಿಯಾದ ಬೇರೊಬ್ಬ ಸಚಿವನು ಆಲಸ್ಯವಿಲ್ಲದೆ ನೋಡಿಕೊಳ್ಳಬೇಕು.

೧೨೦. पृथक्कार्याणि—अन्योन्यकलहादीनि (ना०).

नगरे नगरे चैकं कुर्यात्सर्वार्थचिन्तकम् ।
उच्चैः स्थानं घोररूपं नक्षत्राणामिव ग्रहम् ॥ १२१ ॥
ನಗರೇ ನಗರೇ ಚೈಕಂ ಕುರ್ಯಾತ್ಸರ್ವಾರ್ಥಚಿಂತಕಮ್ ।
ಉಚ್ಚೈಃಸ್ಥಾನಂ ಘೋರರೂಪಂ ನಕ್ಷತ್ರಾಣಾಮಿವ ಗ್ರಹಮ್ ॥ ೧೨೧ ॥

೧೨೧. ರಾಜನು ಪ್ರತಿಯೊಂದು ನಗರದಲ್ಲಿ ಎಲ್ಲ ಕಾರ್ಯದ ಬಗೆಗೆ ಆಲೋಚಿಸುವ, ನೋಡಲು ಕ್ರೂರನಾದ ಮತ್ತು ನಕ್ಷತ್ರಗಳಲ್ಲಿ ಗ್ರಹವಿದ್ದಂತೆ ತೇಜಸ್ವಿಯಾದ ಉಚ್ಚ ಪದಾಧಿಕಾರಿಯನ್ನು ನೇಮಿಸಬೇಕು.

೧೨೧. उच्चैः स्थानं—प्रधानभूतं (मे० राघ०) कुलादिना महान्तं (कु०). महाप्रभावम् (न०), उच्चस्थानस्थितं (राम०).

स ताननुपरिक्रामेत्सर्वानेव सदा स्वयम् ।
तेषां वृत्तं परिणयेत्सम्यग्राष्ट्रेषु तच्चरैः ॥ १२२ ॥
ಸ ತಾನನುಪರಿಕ್ರಾಮೇತ್ಸರ್ವಾನೇವ ಸದಾ ಸ್ವಯಮ್ ।
ತೇಷಾಂ ವೃತ್ತಂ ಪರಿಣಯೇತ್ ಸಮ್ಯಗ್ರಾಷ್ಟ್ರೇಷು ತಚ್ಚರೈಃ ॥ ೧೨೨ ॥

೧೨೨. ಆ ಅಧಿಕಾರಿಯು ಯಾವಾಗಲೂ ಆ ಎಲ್ಲರನ್ನೂ ತಾನಾಗಿ ಭೇಟಿಯಾಗಬೇಕು (ಮತ್ತು ರಾಜನು) ಅವರ ವರ್ತನೆಯನ್ನು ರಾಜ್ಯದಲ್ಲಿರುವ ತನ್ನ ಗುಪ್ತಚಾರರಿಂದ ತಿಳಿದುಕೊಳ್ಳಬೇಕು.

೧೨೨. सदा—असति प्रयोजने (कु०).

राज्ञो हि रक्षाधिकृताः परस्वादायिनः शठाः ।
भृत्या भवन्ति प्रायेण तेभ्यो रक्षेदिमाः प्रजाः ॥ १२३ ॥

ರಾಜ್ಞೋ ಹಿ ರಕ್ಷಾಧಿಕೃತಾಃ ಪರಸ್ವಾದಾಯಿನಃ ಶಠಾಃ ।
ಭೃತ್ಯಾ ಭವಂತಿ ಪ್ರಾಯೇಣ ತೇಭ್ಯೋ ರಕ್ಷೇದಿಮಾಃ ಪ್ರಜಾಃ ॥ ೧೨೩ ॥

೧೨೩. ಏಕೆಂದರೆ. ರಾಜನ ರಕ್ಷಣಾಧಿಕಾರಿಗಳಾದ ಸೇವಕರು ಸಾಮಾನ್ಯವಾಗಿ ಪರಧನವನ್ನು ಅಪಹರಿಸುವ ವಂಚಕರಾಗಿರುತ್ತಾರೆ. ಆದ್ದರಿಂದ ರಾಜನು ತನ್ನ ಪ್ರಜೆಗಳನ್ನು ಅವರಿಂದ ರಕ್ಷಿಸಬೇಕು.

೧೨೩. रक्षेत्—न केवलं राजार्थनाशः, अनवेक्षया यावत् प्रजा अपि निर्धनीकुर्वन्ति (मे०).

ये कार्यिकेभ्योऽर्थमेव गृह्णीयुः पापचेतसः ।
तेषां सर्वस्वमादाय राजा कुर्यात्प्रवासनम् ॥ १२४ ॥
ಯೇ ಕಾರ್ಯಿಕೇಭ್ಯೋಽರ್ಥಮೇವ ಗೃಹ್ಣೀಯುಃ ಪಾಪಚೇತಸಃ ।
ತೇಷಾಂ ಸರ್ವಸ್ವಮಾದಾಯ ರಾಜಾ ಕುರ್ಯಾತ್ಪ್ರವಾಸನಮ್ ॥ ೧೨೪ ॥

೧೨೪. ಪಾಪಬುದ್ಧಿಯಿಂದ ಅಧಿಕಾರಿಗಳು ಕಾರ್ಯಾರ್ಥಿಯಾದ ಜನರಿಂದ (ಅನುಚಿತವಾದ) ಧನವನ್ನು ತೆಗೆದುಕೊಂಡರೆ. ಅವರ ಸರ್ವಸ್ವವನ್ನೂ ಅಪಹರಿಸಿ ರಾಜನು ಅವರನ್ನು ರಾಜ್ಯದ ಹೊರಗೆ ಕಳಿಸಬೇಕು. ಪ್ರಜಾಪ್ರಭುತ್ವಕ್ಕಿದು ಮಹಾಪಾಠ.

೧೨೪. कार्यिकेभ्यः—कार्यार्थिभ्यः (कु०) व्यवहर्तृभ्यः (मे०).
—वादिप्रतिवादिभ्यः (राघ० राम०).

राजा कर्मसु युक्तानां स्त्रीणां प्रेष्यजनस्य च ।
प्रत्यहं कल्पयेद्वृत्तिं स्थानं कर्मानुरूपतः ॥ १२५ ॥
ರಾಜಾ ಕರ್ಮಸು ಯುಕ್ತಾನಾಂ ಸ್ತ್ರೀಣಾಂ ಪ್ರೇಷ್ಯಜನಸ್ಯ ಚ ।
ಪ್ರತ್ಯಹಂ ಕಲ್ಪಯೇದ್ವೃತ್ತಿಂ ಸ್ಥಾನಂ ಕರ್ಮಾನುರೂಪತಃ ॥ ೧೨೫ ॥

೧೨೫. ರಾಜನು ಕೆಲಸದಲ್ಲಿ ನಿಯುಕ್ತರಾದ ದಾಸಿಯರ ಹಾಗೂ ಸೇವಕರ ಪ್ರತಿದಿನದ ವೇತನವನ್ನು ಮತ್ತು ಅವರ ಸ್ಥಾನವನ್ನು ಅವರ ಕಾರ್ಯದ ಅನುಸಾರವಾಗಿ ನಿಶ್ಚಯಿಸಬೇಕು.

೧೨೫. स्त्रीणां—अन्तःपुरदास्यादीनाम् (मे०).
स्थानकर्मानुरूपतः प्रधाने स्थाने स्वल्पेऽपि कर्मणि महती वृत्तिः, निकृष्टे स्थाने महत्यपि कर्मणि स्वल्पा (मे०).

पणो देयोऽवकृष्टस्य षडुत्कृष्टस्य वेतनम् ।
षाण्मासिकस्तथाच्छादो धान्यद्रोणस्तु मासिकः ।। १२६ ।।
ಪಣೋ ದೇಯೋಽವಕೃಷ್ಟಸ್ಯ ಷಡುತ್ಕೃಷ್ಟಸ್ಯ ವೇತನಮ್ ।
ಷಾಣ್ಮಾಸಿಕಸ್ತಥಾಚ್ಛಾದೋ ಧಾನ್ಯದ್ರೋಣಸ್ತು ಮಾಸಿಕಃ ॥ ೧೨೬ ॥

೧೨೬. ಸಣ್ಣಪುಟ್ಟ ಕೆಲಸಗಳನ್ನು ಮಾಡುವವನಿಗೆ (ಪ್ರತಿದಿನ) ಒಂದು ಪಣವನ್ನು ವೇತನವೆಂದು ಕೊಡಬೇಕು. ಉತ್ತಮ ಕೆಲಸಗಳನ್ನು ಮಾಡುವವನಿಗೆ ಆರು ಪಣಗಳನ್ನು ಕೊಡಬೇಕು. ಆರು ತಿಂಗಳಿಗೊಮ್ಮೆ ಅವರಿಗೆ ವಸ್ತ್ರಗಳನ್ನು ಕೊಡಬೇಕು; ಮತ್ತು ಪ್ರತಿ ತಿಂಗಳು ಒಂದು 'ದ್ರೋಣ' ಧಾನ್ಯವನ್ನು ಕೊಡಬೇಕು.

೧೨೬. अवकृष्टस्य—ಕಸ ತೆಗೆಯುವವ. ನೀರು ತುಂಬುವವ—ಇಂತಹ ಕೆಲಸಗಳನ್ನು ಮಾಡುವವನಿಗೆ. द्रोणः—(೮×೮×೪×೪=೧೦೨೪ ಮುಷ್ಟಿಗಳು).

अष्टमुष्टिर्भवेत् किंचित् किंचिदष्टौ च पुष्कलम् ।
पुष्कलानि तु चत्वारि आढकः परिकीर्तितः ।। चतुराढको भवेद् द्रोणः

ಉತ್ತಮ ತರಗತಿಯ ಕೆಲಸಗಾರರಿಗೆ ಆರು ಪಟ್ಟು ವೇತನ, ವಸ್ತ್ರ ಮತ್ತು ಧಾನ್ಯಗಳನ್ನು ಮತ್ತು ಮಧ್ಯಮ ತರಗತಿಯ ಕೆಲಸಗಾರರಿಗೆ ಮೂರು ಪಟ್ಟು ವೇತನ. ವಸ್ತ್ರ ಹಾಗೂ ಧಾನ್ಯಗಳನ್ನು ಕೊಡಬೇಕೆಂದು ಹಲವು ಟಿಪ್ಪಣಿಕಾರರ ಅಭಿಪ್ರಾಯ.

क्रयविक्रयमध्वानं भक्तं च सपरिव्ययम् ।
योगक्षेमं च संप्रेक्ष्य वणिजो दापयेत्करान् ।। १२७ ।।
ಕ್ರಯವಿಕ್ರಯಮಧ್ವಾನಂ ಭಕ್ತಂ ಚ ಸಪರಿವ್ಯಯಮ್ ।
ಯೋಗಕ್ಷೇಮಂ ಚ ಸಂಪ್ರೇಕ್ಷ್ಯ ವಣಿಜೋ ದಾಪಯೇತ್ ಕರಾನ್ ॥ ೧೨೭ ॥

೧೨೭. ಕ್ರಯ. ವಿಕ್ರಯ. ಪ್ರವಾಸ. ಊಟ ಹಾಗೂ ತಿನಿಸು ಮತ್ತು ರಕ್ಷಣೆಯ ವ್ಯವಸ್ಥೆ—ಇವುಗಳನ್ನು ಗಮನಿಸಿ ರಾಜನು ವ್ಯಾಪಾರಸ್ಥರಿಂದ ಕರಗಳನ್ನು ತೆಗೆದುಕೊಳ್ಳಬೇಕು.

೧೨೭. ಮಾರುವ ವಸ್ತುಗಳನ್ನು ಎಷ್ಟು ಬೆಲೆಗೆ ತೆಗೆದುಕೊಂಡಿದ್ದಾರೆ. ಎಷ್ಟು ಬೆಲೆಗೆ ಮಾರುತ್ತಾರೆ. ಎಷ್ಟು ದೂರದಿಂದ ತಂದಿದ್ದಾರೆ, ಊಟ ತಿಂಡಿಗಳಿಗೆ ಮತ್ತು ಆ ವಸ್ತುಗಳ ರಕ್ಷಣೆಗೆ ಎಷ್ಟು ವ್ಯಯವಾಗಿದೆ ಎಂಬ ಎಲ್ಲ ಸಂಗತಿಗಳನ್ನೂ ತಿಳಿದು ರಾಜನು ಕರಗಳನ್ನು ವಿಧಿಸಬೇಕು.

परिव्ययः—परितो व्ययः शुल्कादिकः (न०).

यथा फलेन युज्येत राजा कर्ता च कर्मणाम् ।
तथावेक्ष्य नृपो राष्ट्रे कल्पयेत्सततं करान् ।। १२८ ।।

ಯಥಾ ಫಲೇನ ಯುಜ್ಯೇತ ರಾಜಾ ಕರ್ತಾ ಚ ಕರ್ಮಣಾಮ್ ।
ತಥಾವೇಕ್ಷ್ಯ ನೃಪೋ ರಾಷ್ಟ್ರೇ ಕಲ್ಪಯೇತ್ಸತತಂ ಕರಾನ್ ॥ ೧೨೮ ॥

೧೨೮. (ವ್ಯಾಪಾರ, ಕೃಷಿ ಮುಂತಾದ) ಕರ್ಮಗಳನ್ನು ಮಾಡುವವರು (ತಮ್ಮ ತಮ್ಮ ಕಾರ್ಯದ) ಫಲವನ್ನು ಪಡೆಯುವ ಹಾಗೆ ವಿವೇಕದಿಂದ ರಾಜನು ರಾಜ್ಯದ ಜನರ ಮೇಲೆ ಯಾವಾಗಲೂ ಕರವನ್ನು ವಿಧಿಸಬೇಕು.

೧೨೮. ರಾಜನಿಗೆ ರಕ್ಷಣೆ ಮಾಡಿದ್ದರ ಫಲ ಮತ್ತು ಕಾರ್ಮಿಕರಿಗೆ ಅವರು ಮಾಡಿದ ಕೆಲಸದ ಫಲ ಸಿಗುವಂತೆ ಕರಗಳ ಬಗೆಯಿರಬೇಕು.

यथाल्पाल्पमदन्त्याद्यं वार्योकोवत्सषट्पदाः ।
तथाल्पाल्पो ग्रहीतव्यो राष्ट्राद्राज्ञाब्दिकः करः ॥ १२९ ॥
ಯಥಾಲ್ಪಾಲ್ಪಮದಂತ್ಯಾದ್ಯಂ ವಾರ್ಯೋಕೋವತ್ಸಷಟ್‌ಪದಾಃ ।
ತಥಾಲ್ಪಾಲ್ಪೋ ಗ್ರಹೀತವ್ಯೋ ರಾಷ್ಟ್ರಾದ್ರಾಜ್ಞಾಬ್ದಿಕಃ ಕರಃ ॥ ೧೨೯ ॥

೧೨೯. ಹೇಗೆ ಜಿಗುಳೆ, ಕರು ಮತ್ತು ಜೇನುಹುಳುಗಳು ಆಹಾರವನ್ನು (ಕ್ರಮವಾಗಿ ರಕ್ತ, ಹಾಲು ಮತ್ತು ಜೇನು) ಸ್ವಲ್ಪ ಸ್ವಲ್ಪ ತಿನ್ನುವುವೋ, ಹಾಗೆ ರಾಜನು ರಾಜ್ಯದಿಂದ ಸ್ವಲ್ಪ ಸ್ವಲ್ಪ ವಾರ್ಷಿಕ ಕರವನ್ನು ತೆಗೆದುಕೊಳ್ಳಬೇಕು.

೧೨೯. ವ್ಯಾಪಾರಸ್ಥರ ಮೂಲಧನ ನಾಶವಾಗದಂತೆ ಮತ್ತು ಅವರಿಗೆ ತೊಂದರೆಯಾಗದಂತೆ ರಾಜನು ಕರಗಳನ್ನು ತೆಗೆದುಕೊಳ್ಳಬೇಕು.

पञ्चाशद्भाग आदेयो राज्ञा पशुहिरण्ययोः ।
धान्यानामष्टमो भागः षष्ठो द्वादश एव वा ॥ १३० ॥
ಪಂಚಾಶತ್‌ಭಾಗ ಆದೇಯೋ ರಾಜ್ಞಾ ಪಶುಹಿರಣ್ಯಯೋಃ ।
ಧಾನ್ಯಾನಾಮಷ್ಟಮೋ ಭಾಗಃ ಷಷ್ಠೋ ದ್ವಾದಶ ಏವ ವಾ ॥ ೧೩೦ ॥

೧೩೦. ಪಶು ಮತ್ತು ಸುವರ್ಣ ಇವುಗಳಿಂದಾದ ಲಾಭದ ಐವತ್ತನೆಯ ಭಾಗವನ್ನು ರಾಜನು ತೆಗೆದುಕೊಳ್ಳಬೇಕು. ಧಾನ್ಯದ ಆರನೆಯ, ಎಂಟನೆಯ ಅಥವಾ ಹನ್ನೆರಡನೆಯ ಭಾಗವನ್ನು ತೆಗೆದುಕೊಳ್ಳಬೇಕು,

೧೩೦. द्वादश एव वा—भूम्युत्कर्षापकर्षापेक्षया कर्मक्लेशलाघवगौरवापेक्षया वा धान्यानां भागविकल्पः (राघ०).

आददीताथ षड्भागं द्रुमांसमधुसर्पिषाम् ।
गन्धौषधिरसानां च पुष्पमूलफलस्य च ॥ १३१ ॥

ಆದದೀತಾಥ ಷಡ್ಭಾಗಂ ದ್ರುಮಾಂಸಮಧುಸರ್ಪಿಷಾಮ್ ।
ಗಂಧೌಷಧಿ ರಸಾನಾಂ ಚ ಪುಷ್ಪಮೂಲ ಫಲಸ್ಯ ಚ ॥ ೧೩೧ ॥

पत्रशाकतृणानां च चर्मणां वैदलस्य च ।
मृण्मयानां च भाण्डानां सर्वस्याश्ममयस्य च ॥ १३२ ॥

ಪತ್ರಶಾಕತೃಣಾನಾಂ ಚ ಚರ್ಮಣಾಂ ವೈದಲಸ್ಯ ಚ ।
ಮೃಣ್ಮಯಾನಾಂ ಚ ಭಾಂಡಾನಾಂ ಸರ್ವಸ್ಯಾಶ್ಮಮಯಸ್ಯ ಚ ॥ ೧೩೨ ॥

೧೩೧-೨. ಗಿಡ. ಮಾಂಸ. ಜೇನು. ತುಪ್ಪ. ಗಂಧ. ಔಷಧಿ. ರಸ. ಹೂ. ಬೇರು. ಹಣ್ಣು. ಎಲೆ. ಕಾಯಿಪಲ್ಯ. ಹುಲ್ಲು. ಚರ್ಮ—ಬಿದಿರಿನ. ಮಣ್ಣಿನ ಹಾಗೂ ಕಲ್ಲಿನ ಪಾತ್ರೆಗಳು—ಇವುಗಳ ಆರನೆಯ ಭಾಗವನ್ನು (ಕರವೆಂದು) ತೆಗೆದುಕೊಳ್ಳಬೇಕು.

೧೩೧-೨. षड्भागं—तदुत्पादकेभ्यः तद्विक्रयिभ्यश्च षड्भागमेव आददीत (राघ०).

म्रियमाणोऽप्याददीत न राजा श्रोत्रियात्करम् ।
न च क्षुधास्य संसीदेच्छ्रोत्रियो विषये वसन् ॥ १३३ ॥

ಮ್ರಿಯಮಾಣೋಽಪ್ಯಾದದೀತ ನ ರಾಜಾ ಶ್ರೋತ್ರಿಯಾತ್ಕರಮ್ ।
ನ ಚ ಕ್ಷುಧಾಽಸ್ಯ ಸಂಸೀದೇಚ್ಛ್ರೋತ್ರಿಯೋ ವಿಷಯೇ ವಸನ್ ॥ ೧೩೩ ॥

೧೩೩. ಮರಣದ ಪ್ರಸಂಗ ಬಂದರೂ ರಾಜನು ಶ್ರೋತ್ರಿಯನಿಂದ ಕರವನ್ನು ತೆಗೆದುಕೊಳ್ಳಬಾರದು. ಹಾಗೆಯೇ ಅವನ ರಾಜ್ಯದಲ್ಲಿ ವಾಸಿಸುವ ಯಾವ ಶ್ರೋತ್ರಿಯನೂ ಹಸಿವಿನಿಂದ ಪೀಡಿತನಾಗಬಾರದು.

೧೩೩. ಶ್ರೋತ್ರಿಯನು ಹಸಿವಿನಿಂದ ಪೀಡಿತನಾಗದಂತೆ ರಾಜನು ನೋಡಿಕೊಳ್ಳಬೇಕು. ಶ್ರೋತ್ರಿಯನೆಂದರೆ ಒಳ್ಳೆಯ ಸಂಸ್ಕಾರವುಳ್ಳ ಹಾಗೂ ವಿದ್ಯಾವಂತನಾದ ಬ್ರಾಹ್ಮಣನು:—

जन्मना ब्राह्मणो ज्ञेयः संस्कारैर्द्विज उच्यते ।
विद्याभ्यासी भवेद्विप्रः श्रोत्रियस्त्रिभिरेव हि ॥

यस्य राज्ञस्तु विषये श्रोत्रियः सीदति क्षुधा ।
तस्यापि तत्क्षुधा राष्ट्रमचिरेणैव सीदति ॥ १३४ ॥

ಯಸ್ಯ ರಾಜ್ಞಸ್ತು ವಿಷಯೇ ಶ್ರೋತ್ರಿಯಃ ಸೀದತಿ ಕ್ಷುಧಾ ।
ತಸ್ಯಾಪಿ ತತ್ ಕ್ಷುಧಾ ರಾಷ್ಟ್ರಮಚಿರೇಣೈವ ಸೀದತಿ ॥ ೧೩೪ ॥

೧೩೪. ಯಾವ ರಾಜನ ರಾಜ್ಯದಲ್ಲಿ ಶ್ರೋತ್ರಿಯನು ಹಸಿವಿನಿಂದ ತಳಮಳಿಸುತ್ತಾನೋ ಆವನ ರಾಜ್ಯವು ಶೀಘ್ರವಾಗಿಯೇ ಹಸಿವಿನಿಂದ (ಕ್ಷಾಮದಿಂದ) ನಾಶವಾಗುತ್ತದೆ.

೧೩೪. ಶ್ರೋತ್ರಿಯನು ಬಡತನದಿಂದ ಬಳಲುತ್ತಿದ್ದರೆ ರಾಜ್ಯದಲ್ಲಿ ಬರಗಾಲವುಂಟಾಗುವದು.

श्रुतवृत्ते विदित्वास्य वृत्तिं धर्म्यां प्रकल्पयेत् ।
संरक्षेत्सर्वतश्चैनं पिता पुत्रमिवौरसम् ॥ १३५ ॥

ಶ್ರುತವೃತ್ತೇ ವಿದಿತ್ವಾಸ್ಯ ವೃತ್ತಿಂ ಧರ್ಮ್ಯಾಂ ಪ್ರಕಲ್ಪಯೇತ್ ।
ಸಂರಕ್ಷೇತ್ಸರ್ವತಶ್ಚೈನಂ ಪಿತಾ ಪುತ್ರಮಿವೌರಸಮ್ ॥ ೧೩೫ ॥

೧೩೫. (ರಾಜನು) ಶ್ರೋತ್ರಿಯನ ಜ್ಞಾನವನ್ನು ಮತ್ತು ಆಚರಣೆಯನ್ನು ತಿಳಿದುಕೊಂಡು ಅವನಿಗೆ ಯೋಗ್ಯವಾದ ವೇತನವನ್ನು ಕೊಡಬೇಕು. ತಂದೆಯು ಔರಸ ಮಗನ ರಕ್ಷಣೆ ಮಾಡುವಂತೆ ರಾಜನು ಅವನನ್ನು ಎಲ್ಲ ಸಂಕಟದಿಂದಲೂ ರಕ್ಷಿಸಬೇಕು.

೧೩೫. सर्वतः—चौरादिभ्यः (मे० कु०)
वृत्ति—दद्यात् तां लिखितदिव्यादियुक्तताम्रपटादिना ।
रक्षेदेनं च श्रोत्रियं यथा तामन्यो न हरेत् ॥ (राघ०)

संरक्ष्यमाणो राज्ञा यं कुरुते धर्ममन्वहम् ।
तेनायुर्वर्धते राज्ञो द्रविणं राष्ट्रमेव च ॥ १३६ ॥

ಸಂರಕ್ಷ್ಯಮಾಣೋ ರಾಜ್ಞಾ ಯಂ ಕುರುತೇ ಧರ್ಮಮನ್ವಹಮ್ ।
ತೇನಾಯುರ್ವರ್ಧತೇ ರಾಜ್ಞೋ ದ್ರವಿಣಂ ರಾಷ್ಟ್ರಮೇವ ಚ ॥ ೧೩೬ ॥

೧೩೬. ರಾಜನಿಂದ ಸಂರಕ್ಷಿತನಾಗಿರುವ ಶ್ರೋತ್ರಿಯನು ಪ್ರತಿದಿನ ಯಾವ ಧರ್ಮಾಚರಣೆಯನ್ನು ಮಾಡುತ್ತಾನೋ. ಅದರಿಂದ ರಾಜನ ಆಯುಷ್ಯ. ಸಂಪತ್ತು ಮತ್ತು ರಾಜ್ಯ ಹೆಚ್ಚಾಗುತ್ತದೆ.

೧೩೬. धार्मिकश्रोत्रियरक्षायाः फलमेतत् आयुर्द्रविणराष्ट्रवृद्धिः (मे०).

यत्किंचिदपि वर्षस्य दापयेत्करसंज्ञितम् ।
व्यवहारेण जीवन्तं राजा राष्ट्रे पृथग्जनम् ॥ १३७ ॥

ಯತ್ಕಿಂಚಿದಪಿ ವರ್ಷಸ್ಯ ದಾಪಯೇತ್ಕರಸಂಜ್ಞಿತಮ್ ।
ವ್ಯವಹಾರೇಣ ಜೀವಂತಂ ರಾಜಾ ರಾಷ್ಟ್ರೇ ಪೃಥಗ್ಜನಮ್ ॥ ೧೩೭ ॥

೧೩೭. ತನ್ನ ರಾಜ್ಯದಲ್ಲಿ (ಕಾಯಿಪಲ್ಯದ ಮಾರಾಟ ಮುಂತಾದ ಸಾಧಾರಣ) ವ್ಯವಹಾರದಿಂದ ಜೀವಿಸುವ ಸಾಮಾನ್ಯ ಜನರಿಂದ ರಾಜನು ಪ್ರತಿವರ್ಷ ಅತ್ಯಲ್ಪ ಧನ-ವನ್ನು ಕರವೆಂದು ತೆಗೆದುಕೊಳ್ಳಬೇಕು.

೧೩೭. शाकादिक्रयविक्रयादिना जीवतः निकृष्टस्य अल्पः शुल्कः ग्राह्यः (राघ०).

कारुकाञ्छिल्पिनश्चैव शूद्रांश्चात्मोपजीविनः ।
एकैकं कारयेत्कर्म मासि मासि महीपतिः ॥ १३८ ॥
ಕಾರುಕಾನ್ಛಿಲ್ಪಿನಶ್ಚೈವ ಶೂದ್ರಾಂಶ್ಚಾತ್ಮೋಪಜೀವಿನಃ ।
ಏಕೈಕಂ ಕಾರಯೇತ್ಕರ್ಮ ಮಾಸಿ ಮಾಸಿ ಮಹೀಪತಿಃ ॥ ೧೩೮ ॥

೧೩೮. ಬಡಿಗರು. ಶಿಲ್ಪಿಗಳು ಮತ್ತು (ಭಾರವನ್ನು ಹೊರುವವನು ಮುಂತಾದ) ಶಾರೀರಿಕ ಕಷ್ಟಗಳಿಂದ ಬಾಳುವ ಶೂದ್ರರು—ಇವರಲ್ಲಿ ಪ್ರತಿಯೊಬ್ಬರಿಂದ ಪ್ರತಿ ತಿಂಗಳಲ್ಲಿ ಒಂದು ದಿನ ರಾಜನು (ತನಗಾಗಿ) ಕೆಲಸ ಮಾಡಿಸಬೇಕು.

೧೩೮. कारुकान्—शूर्पादिकारिणः (राघ). ಮೊರ. ಬುಟ್ಟಿ ಮುಂತಾದ ಸಣ್ಣ ವಸ್ತುಗಳನ್ನು ಮಾಡುವವರು.

शिल्पिनः—चित्रलोहकारादीन् (राघ०). ಚಿತ್ರಗಳನ್ನು ಬರೆಯುವವರು ಗುಡಿಗಾರರು ಮುಂತಾದ ಕುಶಲ ಕೆಲಸಗಾರರು.

नोच्छिन्द्यादात्मनो मूलं परेषां चातितृष्णया ।
उच्छिन्दन्ह्यात्मनो मूलमात्मानं तांश्च पीडयेत् ॥ १३९ ॥
ನೋಚ್ಛಿಂದ್ಯಾದಾತ್ಮನೋ ಮೂಲಂ ಪರೇಷಾಂ ಚಾತಿತೃಷ್ಣಯಾ ।
ಉಚ್ಛಿಂದನ್ಹ್ಯಾತ್ಮನೋ ಮೂಲಮಾತ್ಮಾನಂ ತಾಂಶ್ಚ ಪೀಡಯೇತ್ ॥ ೧೩೯ ॥

೧೩೯. ರಾಜನು (ಕರವನ್ನು ತೆಗೆದುಕೊಳ್ಳದೆ ಇದ್ದದ್ದರಿಂದ) ತನ್ನ ಮೂಲವನ್ನು ಮತ್ತು ಹೆಚ್ಚಿನ ಆಸೆಯಿಂದ ಬೇರೆಯವರ ಮೂಲವನ್ನು ಕಡಿಯಬಾರದು: ಏಕೆಂದರೆ ತನ್ನ ಮೂಲವನ್ನು ಕಡಿದರೆ ತನಗೆ ಮತ್ತು (ಬೇರೆಯವರ ಮೂಲವನ್ನು ಕಡಿದರೆ) ಅವರಿಗೆ ಪೀಡೆಯಾಗುವದು.

೧೩೯. ಪ್ರಜಾವಾತ್ಸಲ್ಯದಿಂದ ಕರಗಳನ್ನು ತೆಗೆದುಕೊಳ್ಳದೆ ಇದ್ದರೆ ರಾಜನಿಗೆ ತೊಂದರೆ; ಬಹಳ ಹೆಚ್ಚು ಕರಗಳನ್ನು ತೆಗೆದುಕೊಂಡರೆ ಪ್ರಜೆಗಳಿಗೆ ತೊಂದರೆ—ಆದ್ದರಿಂದ ಈ ಎರಡು ಅತಿರೇಕ ಗಳನ್ನೂ ಬಿಡಬೇಕು.

तीक्षणश्चैव मृदुश्च स्यात्कार्यं वीक्ष्य महीपतिः ।
तीक्षणश्चैव मृदुश्चैव राजा भवति संमतः ॥ १४० ॥
ತೀಕ್ಷ್ಣಶ್ಚೈವ ಮೃದುಶ್ಚ ಸ್ಯಾತ್ಕಾರ್ಯಂ ವೀಕ್ಷ್ಯ ಮಹೀಪತಿಃ ।
ತೀಕ್ಷ್ಣಶ್ಚೈವ ಮೃದುಶ್ಚೈವ ರಾಜಾ ಭವತಿ ಸಂಮತಃ ॥ ೧೪೦ ॥

೧೪೦. ಕಾರ್ಯವನ್ನು ಗಮನಿಸಿ ರಾಜನು ಕಠೋರ ಅಥವಾ ಮೃದು ಆಗ ಬೇಕು. (ಏಕೆಂದರೆ ಸಮಯಾನುಸಾರವಾಗಿ) ಕಠೋರ ಅಥವಾ ಮೃದು ಆಗುವ ರಾಜನು ಎಲ್ಲರಿಗೂ ಪ್ರಿಯನಾಗುತ್ತಾನೆ.

೧೪೦. मार्दवेनैव साध्यं यत् तत्र मृदुः, अन्यत्र तीक्ष्णः (स०).

अमात्यमुख्यं धर्मज्ञं प्राज्ञं दान्तं कुलोद्गतम् ।
स्थापयेदासने तस्मिन् खिन्नः कार्येक्षणे नृणाम् ॥ १४१ ॥
ಅಮಾತ್ಯ ಮುಖ್ಯಂ ಧರ್ಮಜ್ಞಂ ಪ್ರಾಜ್ಞಂ ದಾನ್ತಂ ಕುಲೋದ್ಗತಮ್ ।
ಸ್ಥಾಪಯೇದಾಸನೇ ತಸ್ಮಿನ್ ಖಿನ್ನಃ ಕಾರ್ಯೇಕ್ಷಣೇ ನೃಣಾಮ್ ॥ ೧೪೧ ॥

೧೪೧. ಜನರ ಕಾರ್ಯವನ್ನು ನೋಡುವವರಲ್ಲಿ ಬೇಸರವುಂಟಾದರೆ ರಾಜನು ಧರ್ಮಜ್ಞ, ವಿದ್ವಾಂಸ, ಜಿತೇಂದ್ರಿಯ ಮತ್ತು ಕುಲೀನನಾದ ಮುಖ್ಯ ಅಮಾತ್ಯನನ್ನು ಆ ಸ್ಥಾನದಲ್ಲಿ ನೇಮಿಸಬೇಕು.

೧೪೧. खिन्नः—ज्वरादिना युक्तः चेत् (राम०).
आसने—कार्येक्षणे नियुञ्जीत न पुनः तस्मिन्नेव सिंहासने (मे०).

एवं सर्वं विधायेदमितिकर्तव्यमात्मनः ।
युक्तश्चैवाप्रमत्तश्च परिरक्षेदिमाः प्रजाः ॥ १४२ ॥
ಏವಂ ಸರ್ವಂ ವಿಧಾಯೇದಮಿತಿಕರ್ತವ್ಯಮಾತ್ಮನಃ ।
ಯುಕ್ತಶ್ಚೈವಾ ಪ್ರಮತ್ತಶ್ಚ ಪರಿರಕ್ಷೇದಿಮಾಃ ಪ್ರಜಾಃ ॥ ೧೪೨ ॥

೧೪೨. ಹೀಗೆ ತನ್ನ ಈ ಎಲ್ಲ ಕರ್ತವ್ಯವನ್ನು ಮಾಡಿ ಉದ್ಯೋಗಿಯೂ

ಸಾವಧಾನನೂ (ಪ್ರಮಾದರಹಿತನೂ) ಆಗಿ ರಾಜನು ತನ್ನ ಪ್ರಜೆಗಳ ರಕ್ಷಣೆಯನ್ನು ಮಾಡಬೇಕು.

೧೪೨. युक्तः—तत्परः (मे०). उद्युक्तः (स०).

विक्रोशन्त्यो यस्य राष्ट्राध्रियन्ते दस्युभिः प्रजाः ।
संपश्यतः सभृत्यस्य मृतः स न तु जीवति ।। १४३ ।।

ವಿಕ್ರೋಶನ್ತ್ಯೋ ಯಸ್ಯ ರಾಷ್ಟ್ರಾದ್ಧ್ರಿಯಂತೇ ದಸ್ಯುಭಿಃ ಪ್ರಜಾಃ ॥
ಸಂಪಶ್ಯತಃ ಸಭೃತ್ಯಸ್ಯ ಮೃತಃ ಸ ನ ತು ಜೀವತಿ ॥ ೧೪೩ ॥

೧೪೩. ಮಂತ್ರಿಗಳ ಸಹಿತವಾಗಿ ನೋಡುತ್ತಿರುವಾಗಲೇ (ಆಳುತ್ತಿರುವಾಗಲೇ) ಪರೋಡೆಗಾರರು ಯಾವನ ರಾಜ್ಯದಲ್ಲಿಯ ಆಕ್ರೋಶ ಮಾಡುತ್ತಿರುವ ಜನರನ್ನು ಲೂಟಿ ಮಾಡುತ್ತಿರುವರೋ. ಅಂಥ ರಾಜನು ಜೀವಿಸಿದ್ದರೂ ಸತ್ತಂತೆಯೇ ಸರಿ.

೧೪೩. ತನ್ನ ಕರ್ತವ್ಯವಾದ ಪ್ರಜಾರಕ್ಷಣೆಯನ್ನು ರಾಜನು ಮಾಡದಿದ್ದರೆ ಅವನು ಜೀವಿದ್ದರೂ ಸತ್ತಂತೆ.

क्षत्रियस्य परो धर्मः प्रजानामेव पालनम् ।
निर्दिष्टफलभोक्ता हि राजा धर्मेण युज्यते ।। १४४ ।।

ಕ್ಷತ್ರಿಯಸ್ಯ ಪರೋ ಧರ್ಮಃ ಪ್ರಜಾನಾಮೇವ ಪಾಲನಮ್ ।
ನಿರ್ದಿಷ್ಟಫಲಭೋಕ್ತಾ ಹಿ ರಾಜಾ ಧರ್ಮೇಣ ಯುಜ್ಯತೇ ॥ ೧೪೪ ॥

೧೪೪. ಪ್ರಜೆಗಳ ಪಾಲನೆಯೇ ರಾಜನ ಶ್ರೇಷ್ಠವಾದ ಧರ್ಮ. ಏಕೆಂದರೆ. ಮೇಲೆ ಹೇಳಿದಷ್ಟೇ ಕರಗಳನ್ನು ಉಪಭೋಗಿಸುವ ರಾಜನು (ಪ್ರಜಾರಕ್ಷಣೆಯಿಂದ) ಧರ್ಮಯುಕ್ತನಾಗುತ್ತಾನೆ.

೧೪೪. ಶಾಸ್ತ್ರದಲ್ಲಿ ಹೇಳಿದಷ್ಟೇ ಕರವನ್ನು ತೆಗೆದುಕೊಳ್ಳುವದು ಮತ್ತು ಪ್ರಜಾಪಾಲನೆಯನ್ನು ಮಾಡುವದು ರಾಜನ ಧರ್ಮ. ಹೆಚ್ಚು ಕರವನ್ನು ತೆಗೆದುಕೊಳ್ಳುವದು ಮತ್ತು ಪ್ರಜಾರಕ್ಷಣೆಯನ್ನು ಮಾಡದದೆ ಇರುವದು ಅಧರ್ಮ. निर्दिष्टफलभोक्ता—प्रजापालनार्थं वेतनीकृतस्य षड्भागादिकस्य फलस्य भोक्ता (न०).

उत्थाय पश्चिमे यामे कृतशौचः समाहितः ।
हुताग्निर्ब्राह्मणांश्चार्च्य प्रविशेत्स शुभां सभाम् ।। १४५ ।।

ಉತ್ಥಾಯ ಪಶ್ಚಿಮೇ ಯಾಮೇ ಕೃತಶೌಚಃ ಸಮಾಹಿತಃ ।
ಹುತಾಗ್ನಿರ್ಬ್ರಾಹ್ಮಣಾಂಶ್ಚಾರ್ಚ್ಯ ಪ್ರವಿಶೇತ್ಸ ಶುಭಾಂ ಸಭಾಮ್ ॥ ೧೪೫ ॥

೧೪೫. ರಾತ್ರಿಯ ಕೊನೆಯ ಪ್ರಹರದಲ್ಲೆದ್ದು, ಶೌಚವನ್ನು ಮುಗಿಸಿ, ಸ್ಥಿರಚಿತ್ತನಾಗಿ ಅಗ್ನಿಯಲ್ಲಿ ಹವನ ಮಾಡಿ, ಬ್ರಾಹ್ಮಣರನ್ನು ಸತ್ಕರಿಸಿ ರಾಜನು ಶುಭವಾದ ಸಭೆಯಲ್ಲಿ ಪ್ರವೇಶ ಮಾಡಬೇಕು.

೧೪೫. हुताग्निः— ಸೂರ್ಯೋದಯದ ಸಮಯದಲ್ಲಿ ಹೋಮವನ್ನು ಮಾಡಬೇಕು. (व्युष्टायां रात्रौ—मे०).

शुभां सभाम्—ವಾಸ್ತುಲಕ್ಷಣಗಳಿಂದ ಯುಕ್ತವಾದ ಮತ್ತು ಅಮಾತ್ಯರ ಜೊತೆಗೆ ಆಪ್ತಾಲೋಚನೆ ಮಾಡಲು ಯೋಗ್ಯವಾದ ಸ್ಥಾನ.

तत्र स्थितः प्रजाः सर्वाः प्रतिनन्द्य विसर्जयेत् ।
विसृज्य च प्रजाः सर्वा मन्त्रयेत्सह मन्त्रिभिः ॥ १४६ ॥

ತತ್ರ ಸ್ಥಿತಃ ಪ್ರಜಾಃ ಸರ್ವಾಃ ಪ್ರತಿನನ್ದ್ಯ ವಿಸರ್ಜಯೇತ್ ।
ವಿಸೃಜ್ಯ ಚ ಪ್ರಜಾಃ ಸರ್ವಾ ಮಂತ್ರಯೇತ್ಸಹ ಮಂತ್ರಿಭಿಃ ॥ ೧೪೬ ॥

೧೪೬. ರಾಜನು ಅಲ್ಲಿ ನಿಂತು (ಅಲ್ಲಿದ್ದು) ಎಲ್ಲ ಜನರನ್ನೂ ಸಂತೈಸಿ ಕಳಿಸಬೇಕು. ಎಲ್ಲ ಜನರನ್ನು ಕಳಿಸಿದ ಅನಂತರ ರಾಜನು ಮಂತ್ರಿಗಳೊಡನೆ (ಗುಪ್ತವಾಗಿ) ಮಂತ್ರಾಲೋಚನೆ ನಡೆಸಬೇಕು.

೧೪೬. ರಾಜನ ದರ್ಶನಕ್ಕಾಗಿ ಬಂದ ಜನರನ್ನು ರಾಜನು ಭೇಟಿಮಾಡಿ ಸಂಭಾಷಣೆಯಿಂದ ಸಂತೈಸಬೇಕು.

मन्त्रयेत्—ಸಂಧಿವಿಗ್ರಹಾದಿಗಳ ಬಗೆಗೆ ವಿಚಾರವಿನಿಮಯ ಮಾಡಬೇಕು.

गिरिपृष्ठं समारुह्य प्रासादं वा रहोगतः ।
अरण्ये निःशलाके वा मन्त्रयेदविभावितः ॥ १४७ ॥

ಗಿರಿಪೃಷ್ಠಂ ಸಮಾರುಹ್ಯ ಪ್ರಾಸಾದಂ ವಾ ರಹೋಗತಃ ।
ಅರಣ್ಯೇ ನಿಃಶಲಾಕೇ ವಾ ಮಂತ್ರಯೇದವಿಭಾವಿತಃ ॥ ೧೪೭ ॥

೧೪೭. ಗುಡ್ಡದ ಮೇಲೇರಿ ಅಥವಾ ಅರಮನೆಯನ್ನೇರಿ ಏಕಾಂತದಲ್ಲಿ ಅಥವಾ ಗುಪ್ತಚರರಿಲ್ಲದಂತಹ ಅರಣ್ಯದಲ್ಲಿ (ಬೇರೆಯವರಿಗೆ) ಗೊತ್ತಾಗದ ಹಾಗೆ ಮಂತ್ರಾಲೋಚನೆಯನ್ನು ನಡೆಸಬೇಕು,

೧೪೭. निःशलाके—शलाका इषीकाः, यत्र तृणमपि नास्ति, येन न कश्चित् तिष्ठति इति संभावना अस्ति (मे०).

यस्य मन्त्रं न जानन्ति समागम्य पृथग्जनाः ।
स कृत्स्नां पृथिवीं भुङ्क्ते कोशहीनोऽपि पार्थिवः ॥ १४८ ॥
ಯಸ್ಯ ಮಂತ್ರಂ ನ ಜಾನಂತಿ ಸಮಾಗಮ್ಯ ಪೃಥಗ್ಜನಾಃ ।
ಸ ಕೃತ್ಸ್ನಾಂ ಪೃಥಿವೀಂ ಭುಂಕ್ತೇ ಕೋಶಹೀನೋಽಪಿ ಪಾರ್ಥಿವಃ ॥ ೧೪೮ ॥

೧೪೮. ಯಾವನ ಮಂತ್ರಾಲೋಚನೆಯು ಕೂಡಿದ ಬೇರೆ ಜನರಿಗೆ ತಿಳಿಯುವುದಿಲ್ಲವೋ ಆ ರಾಜನು ಧನಹೀನನಾದರೂ ಇಡೀ ಪೃಥ್ವಿಯನ್ನು ಉಪಭೋಗಿಸುತ್ತಾನೆ.

೧೪೮. पृथग्जनाः—ಮಂತ್ರಿಗಳನ್ನು ಬಿಟ್ಟು ಬೇರೆ ಜನರಿಂದ ಮಂತ್ರವನ್ನು ಅತ್ಯಂತ ಗುಪ್ತವಾಗಿಡಬೇಕೆಂದು ಶ್ಲೋಕದ ತಾತ್ಪರ್ಯ.

जडमूकान्धबधिरांस्तैर्यग्योनान्वयोतिगान् ।
स्त्रीम्लेच्छव्याधितव्यङ्गान्मन्त्रकालेऽपसारयेत् ॥ १४९ ॥
ಜಡಮೂಕಾಂಧಬಧಿರಾಂಸ್ತೈರ್ಯಗ್ಯೋನಾನ್ವಯೋತಿಗಾನ್ ।
ಸ್ತ್ರೀಮ್ಲೇಚ್ಛವ್ಯಾಧಿತವ್ಯಂಗಾನ್ಮಂತ್ರಕಾಲೇಽಪಸಾರಯೇತ್ ॥ ೧೪೯ ॥

೧೪೯. ಬುದ್ಧಿಹೀನ, ಮೂಕ, ಕುರುಡ ಮತ್ತು ಕಿವುಡರು, (ಶುಕಸಾರಿಕಾದಿ) ಪಕ್ಷಿಗಳು, ಬಹಳ ಹಳೆಯವರು, ಸ್ತ್ರೀಯರು, ಮ್ಲೇಚ್ಛರು, ರೋಗಿಗಳು ಮತ್ತು ಅಂಗಹೀನರು—ಇಂತಹವರನ್ನು ಮಂತ್ರಾಲೋಚನೆಯ ಸಮಯದಲ್ಲಿ ದೂರವಿಡಬೇಕು.

೧೪೯. ಮೂಕಾದಿ ಜನರನ್ನು ಮಂತ್ರಿಮಂಡಲದಲ್ಲಿಡಬಾರದು. एवंविधा मन्त्रिणो न कर्तव्याः, बुद्धिविभ्रमसंभवात् (मे०).

भिन्दन्त्यवमता मन्त्रं तैर्यग्योनास्तथैव च ।
स्त्रियश्चैव विशेषेण तस्मात्तत्रादृतो भवेत् ॥ १५० ॥
ಭಿನ್ದಂತ್ಯವಮತಾ ಮಂತ್ರಂ ತೈರ್ಯಗ್ಯೋನಾಸ್ತಥೈವ ಚ ।
ಸ್ತ್ರಿಯಶ್ಚೈವ ವಿಶೇಷೇಣ ತಸ್ಮಾತ್ತತ್ರಾದೃತೋ ಭವೇತ್ ॥ ೧೫೦ ॥

೧೫೦. ಅವಮಾನಿತರಾದವರು, ಹಾಗೇ ಪಕ್ಷಿಗಳು ಮತ್ತು ವಿಶೇಷವಾಗಿ ಸ್ತ್ರೀಯರು, ಮಂತ್ರವನ್ನು (ರಾಜರಹಸ್ಯವನ್ನು) ಭೇದ ಮಾಡುತ್ತಾರೆ. (ಶತ್ರುವಿಗೆ ತಿಳಿಸುತ್ತಾರೆ) ಆದ್ದರಿಂದ ಅವರ ಬಗೆಗೆ ಎಚ್ಚರಿಕೆಯಿಂದಿರಬೇಕು.

೧೫೦. तत्र आदृतो भवेत्—ಅಂತಹ ಜನರನ್ನು ಮತ್ತು ಪ್ರಾಣಿಗಳನ್ನು ದೂರವಿಡುವ ಬಗೆಗೆ ಜಾಗ್ರತೆ ವಹಿಸಬೇಕು.

मध्यंदिनेऽर्धरात्रे वा विश्रान्तो विगतक्लमः ।
चिन्तयेद्धर्मकामार्थान्सार्धं तैरेक एव वा ॥ १५१ ॥

ಮಧ್ಯಂದಿನೇಽರ್ಧರಾತ್ರೇ ವಾ ವಿಶ್ರಾಂತೋ ವಿಗತಕ್ಲಮಃ ।
ಚಿಂತಯೇದ್ಧರ್ಮಕಾಮಾರ್ಥಾನ್ಸಾರ್ಧಂ ತೈರೇಕ ಏವ ವಾ ॥ ೧೫೧ ॥

೧೫೧. ಮಧ್ಯಾಹ್ನದಲ್ಲಿ ಅಥವಾ ಮಧ್ಯರಾತ್ರಿಯಲ್ಲಿ ವಿಶ್ರಾಂತಿ ತೆಗೆದುಕೊಂಡು ಬೇಸರರಹಿತನಾದಾಗ ರಾಜನು ಮಂತ್ರಿಗಳ ಜೊತೆಯಲ್ಲಿ ಅಥವಾ ಒಬ್ಬನೇ ಇದ್ದು ಧರ್ಮ, ಕಾಮ ಮತ್ತು ಅರ್ಥಗಳನ್ನು ಕುರಿತು ಚಿಂತಿಸಬೇಕು.

೧೫೧. विश्रान्तो विगतक्लमः— ಶರೀರದ ಆಯಾಸ ಮತ್ತು ಮನಸ್ಸಿನ ಖೇದ ಇಲ್ಲದಾಗ.

परस्परविरुद्धानां तेषां च समुपार्जनम् ।
कन्यानां संप्रदानं च कुमाराणां च रक्षणम् ॥ १५२ ॥

ಪರಸ್ಪರವಿರುದ್ಧಾನಾಂ ತೇಷಾಂ ಚ ಸಮುಪಾರ್ಜನಮ್ ।
ಕನ್ಯಾನಾಂ ಸಂಪ್ರದಾನಂ ಚ ಕುಮಾರಾಣಾಂ ಚ ರಕ್ಷಣಮ್ ॥ ೧೫೨ ॥

೧೫೨. ಪರಸ್ಪರ ವಿರುದ್ಧವಾಗಿರುವಂತೆ ತೋರುವ ಅವುಗಳ (ಧರ್ಮಾರ್ಥಕಾಮಗಳ) ಸಂಪಾದನೆ. ಕನ್ಯೆಯರ (ವಿವಾಹದಲ್ಲಿ) ದಾನ ಮತ್ತು ರಾಜಕುಮಾರರ ರಕ್ಷಣೆ—(ಇವುಗಳ ಬಗೆಗೆ ಯೋಚನೆ ಮಾಡಬೇಕು).

೧೫೨. परस्परविरुद्धानां—अतिदण्डादिना अर्थे जन्ये धर्मो हीयेत । अतिक्लेशेन धर्मे जन्ये कामो विषयभोगः कुतस्त्य इति विरोधपरिहारेण (राघ०).

कन्यानां संप्रदानं—ರಾಜನೀತಿಯ ಉದ್ದೇಶಗಳು ಪೂರ್ಣವಾಗುವ ದೃಷ್ಟಿಯಿಂದ ಕನ್ಯೆಯರ ವಿವಾಹದ ಬಗೆಗೆ ವಿಚಾರಮಾಡಬೇಕು.

कुमारणां रक्षणम्—ರಾಜಕುಮಾರರಿಗೆ ವಿನಯದ ಹಾಗೂ ರಾಜನೀತಿಯ ಶಿಕ್ಷಣವನ್ನು ಕೊಡುವದೇ ಅವರ ರಕ್ಷಣೆ.

दूतसंप्रेषणं चैव कार्यशेषं तथैव च ।
अन्तःपुरप्रचारं च प्रणिधीनां च चेष्टितम् ॥ १५३ ॥

ದೂತಸಂಪ್ರೇಷಣಂ ಚೈವ ಕಾರ್ಯಶೇಷಂ ತಥೈವ ಚ ।
ಅಂತಃಪುರಪ್ರಚಾರಂ ಚ ಪ್ರಣಿಧೀನಾಂ ಚ ಚೇಷ್ಟಿತಮ್ ॥ ೧೫೩ ॥

೧೫೩. ರಾಜದೂತರನ್ನು ಕರೆಸುವದು. ಉಳಿದ ಕಾರ್ಯಗಳು. ಅಂತಃಪುರ ದಲ್ಲಿರುವ ಸ್ತ್ರೀಯರ ವರ್ತನೆ ಹಾಗೂ ಗುಪ್ತಚರರ ಚಟುವಟಿಕೆಗಳು—(ಇವುಗಳನ್ನು ವಿಚಾರಿಸಬೇಕು).

೧೫೩. दूतसंप्रेषणं – ಗುಪ್ತವಾದ ಪತ್ರಗಳನ್ನು ಕೊಟ್ಟು ರಾಜದೂತರನ್ನು ಬೇರೆ ರಾಜರೆಡೆಗೆ ಕಳಿಸುವದು.

कार्यशेषं – ಪ್ರಾರಂಭ ಮಾಡಿದ ಕಾರ್ಯವನ್ನು ಪೂರ್ಣಗೊಳಿಸುವ ಬಗೆಗೆ (ಆಲೋಚನೆ). अंत:पुरप्रचारं—

शस्त्रेण वेणी विनिगूहितेन विदूरथं वै महिषी जघान ।
विषप्रदिग्धेन च नूपुरेण देवी विरक्ता किल केशिराजम् ॥ (कु०)

ಆದ್ದರಿಂದ ರಾಣಿಯರ ವರ್ತನೆಯನ್ನು ರಾಜನು ದಾಸಿಯರಿಂದ ತಿಳಿದುಕೊಳ್ಳಬೇಕು.

प्रणिधीनां चेष्टितं—ಶತ್ರುರಾಜನ ವೃತ್ತವನ್ನು ತಿಳಿಯಲು ನೇಮಿಸಿದ ಗೂಢಚಾರರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುತ್ತಾರೋ ಎಂಬುದನ್ನು ರಾಜನು ವಿಚಾರಿಸಬೇಕು.

कृत्स्नं चाष्टविधं कर्म पञ्चवर्गं च तत्त्वत: ।
अनुरागापरागौ च प्रचारं मण्डलस्य च ॥ १५४ ॥
ಕೃತ್ಸ್ನಂ ಚಾಷ್ಟವಿಧಂ ಕರ್ಮ ಪಂಚವರ್ಗಂ ಚ ತತ್ತ್ವತಃ ।
ಅನುರಾಗಾಪರಾಗೌ ಚ ಪ್ರಚಾರಂ ಮಂಡಲಸ್ಯ ಚ ॥ ೧೫೪ ॥

೧೫೪. ಎಂಟು ಪ್ರಕಾರದ ಎಲ್ಲ ಕರ್ಮಗಳು. ಪಂಚವರ್ಗಗಳು, ಪ್ರೀತಿ ಹಾಗೂ ದ್ವೇಷ ಮತ್ತು ರಾಜಮಂಡಲದ ವರ್ತನೆ—ಇವುಗಳ ಬಗೆಗೆ ತಾತ್ತ್ವಿಕವಾಗಿ (ಸರಿಯಾಗಿ ಆಲೋಚಿಸಬೇಕು),

೧೫೪. **अष्टविधं कर्म**— १) आदान—ಕರಗಳನ್ನು ತೆಗೆದುಕೊಳ್ಳುವದು. २) विसर्ग—ಸೇವಕರಿಗೆ ವೇತನವನ್ನು ಕೊಡುವದು. ३) प्रेषण—ರಾಜದೂತರನ್ನು ಮತ್ತು ಅಮಾತ್ಯರನ್ನು ಯೋಗ್ಯವಾದ ಕೆಲಸಗಳನ್ನು ಮಾಡಲು ಕಳಿಸುವದು. ४) निषेध—ಶಾಸ್ತ್ರ ವಿರುದ್ಧವಾದ ಕೆಲಸವನ್ನು ನಿಷೇಧಿಸುವದು. ५) अर्थवचनं—ಸೇವಕರಲ್ಲಿ ಕಾರ್ಯದ ಬಗೆಗೆ ಸಂದೇಹವುಂಟಾದಾಗ ಆಜ್ಞೆಯನ್ನು ಮಾಡುವದು. ६) व्यवहार—ಸಾಲವನ್ನು ಕುರಿತು ವಿವಾದವು ಉಂಟಾದಾಗ ಅದರ ಬಗೆಗೆ ನಿರ್ಣಯವನ್ನು ಕೊಡುವದು. ७) दण्डग्रहणं—ಸೋತ ಶತ್ರುವಿನಿಂದ ಯೋಗ್ಯವಾದ ದಂಡವನ್ನು ಸ್ವೀಕರಿಸುವದು. ८) शुद्धि—ಪಾಪಾಚರಣವಾದಾಗ ಪ್ರಾಯಶ್ಚಿತ್ತವನ್ನು ವಿಧಿಸುವದು. (गो० कु० न० राघ०).

ಮೇಧಾತಿಥಿಯು ಅಷ್ಟವಿಧ ಕರ್ಮವನ್ನು ಹೀಗೆ ವಿವರಿಸುತ್ತಾನೆ:– १) अकृतारम्भ २) कृतानुष्ठान ३) अनुष्ठितविशेषण ४) कर्मफलसंग्रह ५) साम ६) भेद ७) दान ८) दण्ड

अथवा

१) वणिक्पथः २) उदकसेतुबन्धनं ३) दुर्गकरणं ४) कृतस्य वा तत्संस्कारनियमः ५) हस्तिबंधनं ६) खनिखननं ७) शून्यनिवेशनं ८) दारुवनच्छेदनं

पञ्चवर्ग—ಐದು ಪ್ರಕಾರದ ಗುಪ್ತಚರರು:- ೧) कापटिक—ಕಪಟವ್ಯವಹಾರದಲ್ಲಿ ನಿಪುಣನಾದ ಪ್ರೌಢ ವಿದ್ಯಾರ್ಥಿಗೆ ಧನವನ್ನು ಕೊಟ್ಟು ಸತ್ಕರಿಸಿ ಅವನಿಗೆ ರಾಜ್ಯದಲ್ಲಿ ನಡೆಯುವ ದುರಾಚಾರದ ಬಗೆಗೆ ತಿಳಿಸಲು ರಾಜನು ಹೇಳಬೇಕು. ೨) **उदास्थित**—ಸಂನ್ಯಾಸದಿಂದ ಚ್ಯುತನಾದವನನ್ನು ರಾಜನು ಮಠದಲ್ಲಿಟ್ಟು ಫಲವತ್ತಾದ ಭೂಮಿಯನ್ನು ಕೊಟ್ಟು ಅವನಿಂದ ಗುಪ್ತ ವಾರ್ತೆಯನ್ನು ತರಿಸಬೇಕು. ಅವನು ಬೇರೆ ಸಂನ್ಯಾಸಿಗಳಿಗೂ ಹಾಗೇ ಅನ್ನ-ವಸ್ತ್ರಗಳನ್ನು ಕೊಟ್ಟು ಅವರಿಂದ ಗುಪ್ತ ಚರರ ಕಾರ್ಯವನ್ನು ಮಾಡಿಸಬೇಕು. ೩) गृहपति—ದರಿದ್ರನಾದ ಗೃಹಸ್ಥನಿಗೆ ಹೊಲವನ್ನು ಕೊಟ್ಟು ಅವನಿಂದ ತನ್ನ (ಗೂಢಚರ್ಯದ) ಕೆಲಸವನ್ನು ಮಾಡಿಸಬೇಕು. ೪) वैदेहिक—ಬಡವನಾದ ವ್ಯಾಪಾರಸ್ಥನಿಗೆ ಹಣವನ್ನು ಕೊಟ್ಟು ಅವನ ಮುಖಾಂತರ ಅಪೇಕ್ಷಿತ ಸ್ಥಾನದಲ್ಲಿ ಗುಪ್ತ ವಾರ್ತಾ ಸಂಗ್ರಹವನ್ನು ಮಾಡಿಸಬೇಕು. ೫) तापस—ಜಟಾಧಾರಿಯಾದ ತಾಪಸನು ಆಶ್ರಮದಲ್ಲಿದ್ದು ತನ್ನ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಬೇಕು. ಆಗ ಜನರು ಬಂದು ಅವನಿಗೆ ಶ್ರದ್ಧೆಯಿಂದ ಎಲ್ಲ ಸಂಗತಿಗಳನ್ನು ಹೇಳುತ್ತಾರೆ. ಅವುಗಳನ್ನು ಆ ತಾಪಸನು ರಾಜನಿಗೆ ತಿಳಿಸಬೇಕು. ಹೀಗೆ ರಾಜನು ಐದು ಪ್ರಕಾರದ ಗುಪ್ತಚರರನ್ನು ಬೇರೆ ಬೇರೆ ಸ್ಥಾನಗಳಲ್ಲಿ ನೇಮಿಸಬೇಕು.

अनुरागापरागौ—ಅಮಾತ್ಯಾದಿಗಳ ಪ್ರೀತಿ ಹಾಗೂ ಅಪ್ರೀತಿ.

प्रचारं मण्डलस्य—ರಾಜಮಂಡಲದಲ್ಲಿ ಯಾರು ಯುದ್ಧವನ್ನು ಮತ್ತು ಯಾರು ಸಂಧಿಯನ್ನು ಬಯಸುತ್ತಾರೆ ಎಂಬುದನ್ನು ಚಿಂತಿಸಬೇಕು.

मध्यमस्य प्रचारं च विजिगीषोश्च चेष्टितम् ।
उदासीनप्रचारं च शत्रोश्चैव प्रयत्नतः ॥ १५५ ॥
ಮಧ್ಯಮಸ್ಯ ಪ್ರಚಾರಂ ಚ ವಿಜಿಗೀಷೋಶ್ಚ ಚೇಷ್ಟಿತಮ್ ।
ಉದಾಸೀನಪ್ರಚಾರಂ ಚ ಶತ್ರೋಶ್ಚೈವ ಪ್ರಯತ್ನತಃ ॥ ೧೫೫ ॥

೧೫೫. 'ಮಧ್ಯಮ' ರಾಜನ ವರ್ತನೆಯನ್ನು, 'ವಿಜಿಗೀಷು' ರಾಜನ ಚಟುವಟಿಕೆಯನ್ನು ಮತ್ತು 'ಉದಾಸೀನ' ರಾಜನ ಹಾಗೂ ಶತ್ರುರಾಜನ ವರ್ತನೆಯನ್ನು ಪ್ರಯತ್ನಪೂರ್ವಕವಾಗಿ ತಿಳಿದುಕೊಳ್ಳಬೇಕು.

೧೫೫. १) मध्यम— ಶತ್ರುರಾಜನ ಮತ್ತು ವಿಜಿಗೀಷು ರಾಜನ ನಡುವಿದ್ದು ಅವನನ್ನು ಪ್ರತ್ಯೇಕವಾಗಿ ಸೋಲಿಸಲು ಶಕ್ತನಾದ ರಾಜನು.

२) विजिगीषु—ಪ್ರಜ್ಞೆ ಮತ್ತು ಉತ್ಸಾಹ ಇವುಗಳಿಂದ ಸಮರ್ಥನಾಗಿರುವುದರಿಂದ ಜಯಿಸಲು ಬಯಸುವವನು.

३) उदासीन— ಮಧ್ಯಮ ಹಾಗೂ ವಿಜಿಗೀಷು ರಾಜರಲ್ಲಿ ಒಮ್ಮತವಾದರೆ ಅವರನ್ನು ಅನುಗ್ರಹಿಸಲು ಮತ್ತು ಭಿನ್ನಮತವಾದರೆ ನಿಗ್ರಹಿಸಲು ಶಕ್ತನಾದ ರಾಜನು.

४) शत्रु—ಶತ್ರುವಿನಲ್ಲಿ ಮೂರು ಪ್ರಕಾರಗಳು:—೧) ಸಹಜ (ಚಿಕ್ಕಪ್ಪನ ಮಗ ಮುಂತಾದ ದಾಯಾದ). ೨) ಕೃತ್ರಿಮ (ಅಪಮಾನ, ರಾಜ್ಯಾಪಹಾರ ಇತ್ಯಾದಿ ಕಾರಣಗಳಿಂದ

ಶತ್ರುತ್ವವನ್ನು ಹಿಡಿದವನು). ೩) ಪಾರ್ಶ್ವವರ್ತಿ (ತನ್ನ ರಾಜ್ಯಕ್ಕೆ ಹತ್ತಿರ ಯಾವನ ರಾಜ್ಯವಿದೆಯೋ ಅವನು).

एताः प्रकृतयो मूलं मण्डलस्य समासतः ।
अष्टौ चान्याः समाख्याता द्वादशैव तु ताः स्मृताः ॥ १५६ ।

ಏತಾಃ ಪ್ರಕೃತಯೋ ಮೂಲಂ ಮಂಡಲಸ್ಯ ಸಮಾಸತಃ ।
ಅಷ್ಟೌ ಚಾನ್ಯಾಃ ಸಮಾಖ್ಯಾತಾ ದ್ವಾದಶೈವ ತು ತಾಃ ಸ್ಮೃತಾಃ ॥ ೧೫೬ ॥

೧೫೬. ರಾಜಮಂಡಲದ ಮೂಲ ಪ್ರಕೃತಿಗಳು ಸಂಕ್ಷೇಪವಾಗಿ (ಹೀಗೆ ನಾಲ್ಕನ್ನಿಸಿ) ಇರುವವು. ಬೇರೆ ಎಂಟು (ಪ್ರಕೃತಿಗಳು) ಹೇಳಲ್ಪಟ್ಟಿವೆ. (ಒಟ್ಟಿನಲ್ಲಿ) ಹನ್ನೆರಡು ಪ್ರಕೃತಿಗಳು ಪರಿಗಣಿತವಾಗಿವೆ.

೧೫೬. अष्टौ च अन्याः—'ಶಾಖಾ ಪ್ರಕೃತಿಗಳು' ಇಂತಿವೆ:—(೧) ಮಿತ್ರ (೨) ಅರಿಮಿತ್ರ (೩) ಮಿತ್ರ–ಮಿತ್ರ (೪) ಅರಿ–ಮಿತ್ರ–ಮಿತ್ರ—ಎಂಬ ನಾಲ್ಕು ಜನರು ಶತ್ರುವಿನ ರಾಜ್ಯದ ಮುಂದೆ ಇರುವವರು. (೫) ಪಾರ್ಷ್ಣಿಗ್ರಾಹ (೬) ಆಕ್ರಂದ (೭) ಪಾರ್ಷ್ಣಿಗ್ರಾಹಾಸಾರ (೮) ಆಕ್ರಂದಾಸಾರ—ಎಂಬ ನಾಲ್ಕು ಜನರು ಶತ್ರುವಿನ ರಾಜ್ಯದ ಹಿಂದೆ ಇರುವವರು. ಮೇಲಿನ ನಾಲ್ಕು ಮೂಲ ಪ್ರಕೃತಿಗಳು ಮತ್ತು ಈ ಎಂಟು ಶಾಖಾಪ್ರಕೃತಿಗಳು ಕೂಡಿ ಹನ್ನೆರಡು ಜನ ಪ್ರಕೃತಿಗಳಾಗುತ್ತಾರೆ.

अमात्यराष्ट्रदुर्गार्थदण्डाख्याः पञ्च चापराः ।
प्रत्येकं कथिता ह्येताः संक्षेपेण द्विसप्ततिः ॥ १५७ ॥

ಅಮಾತ್ಯರಾಷ್ಟ್ರದುರ್ಗಾರ್ಥದಂಡಾಖ್ಯಾಃ ಪಂಚ ಚಾಪರಾಃ ।
ಪ್ರತ್ಯೇಕಂ ಕಥಿತಾ ಹ್ಯೇತಾಃ ಸಂಕ್ಷೇಪೇಣ ದ್ವಿಸಪ್ತತಿಃ ॥ ೧೫೭ ॥

೧೫೭. ರಾಜಮಂಡಲದ (ಮೂಲ ಪ್ರಕೃತಿಗಳಲ್ಲಿ) ಪ್ರತಿಯೊಬ್ಬನಿಗೂ ಮಂತ್ರಿ. ರಾಜ್ಯ. ಕೋಟೆ. ಸಂಪತ್ತು ಮತ್ತು ದಂಡ ಎಂಬ ಐದು ಪ್ರಕೃತಿಗಳನ್ನು ಹೇಳಲಾಗಿದೆ. ಹೀಗೆ ಸಂಕ್ಷಿಪ್ತವಾಗಿ (ಕಟ್ಟಕಡೆಗೆ) ಎಪ್ಪತ್ತೆರಡು ಪ್ರಕೃತಿಗಳಾಗುತ್ತವೆ.

೧೫೭. द्विसप्तति:—ಮೇಲಿನ ಹನ್ನೆರಡು ಪ್ರಕೃತಿಗಳಿಗೆ ಪ್ರತ್ಯೇಕವಾಗಿ—ಮಂತ್ರಿ. ರಾಷ್ಟ್ರ. ಕೋಟೆ. ಸಂಪತ್ತು ಮತ್ತು ದಂಡ ಎಂಬ ಐದು 'ದಿವ್ಯಪ್ರಕೃತಿಗಳು' ಸೇರಿದ್ದರಿಂದ ಒಟ್ಟು (೧೨ × ೫ = ೬೦ + ೧೨ =)೭೨ ಪ್ರಕೃತಿಗಳಾಗುವವು.

अनन्तरमरिं विद्यादरिसेविनमेव च ।
अरेरनन्तरं मित्रमुदासीनं तयोः परम् ॥ १५८ ॥

ಅನಂತರಮರಿಂ ವಿದ್ಯಾದರಿಸೇವಿನಮೇವ ಚ ।
ಅರೇರನಂತರಂ ಮಿತ್ರಮುದಾಸೀನಂ ತಯೋಃ ಪರಮ್ ॥ ೧೫೮ ॥

೧೫೮. ತನ್ನ ರಾಜ್ಯಕ್ಕೆ ತಾಗಿದ ರಾಜ್ಯದ ರಾಜರನ್ನು ಮತ್ತು ಅವರಿಗೆ ಸಹಾಯ ಮಾಡುವವನನ್ನು 'ಅರಿ'ಯೆಂದು ಭಾವಿಸಬೇಕು. ಅರಿಯ ಆಚೆಗಿರುವವನು ಮಿತ್ರನು ಮತ್ತು ಅವರಿಬ್ಬರ ಆಚೆಗಿರುವವನು "ಉದಾಸೀನ".

೧೫೮. ವಿಜಯಯಾತ್ರೆಗಾಗಿ ರಾಜನು ಯಾವ ದಿಕ್ಕಿನಲ್ಲಿ ಹೋಗುತ್ತಾನೋ ಆ ದಿಕ್ಕಿನಲ್ಲಿ ಅರಸರಿಗೆ ಅರಿ, ಮಿತ್ರ ಮುಂತಾದ ಹೆಸರುಗಳಿವೆ. ಅವನ ಹಿಂಭಾಗದಲ್ಲಿದ್ದ ಅರಸರಿಗೆ ಪಾರ್ಷ್ಣಿಗ್ರಾಹ ಆಕ್ರಂದ ಮುಂತಾದ ಹೆಸರುಗಳಿವೆ.

तान्सर्वानभिसंदध्यात्सामादिभिरुपक्रमैः ।
व्यस्तैश्चैव समस्तैश्च पौरुषेण नयेन च ॥ १५९ ॥
ತಾನ್ಸರ್ವಾನಭಿಸಂದಧ್ಯಾತ್ಸಾಮಾದಿಭಿರುಪಕ್ರಮೈಃ ।
ವ್ಯಸ್ತೈಶ್ಚೈವ ಸಮಸ್ತೈಶ್ಚ ಪೌರುಷೇಣ ನಯೇನ ಚ ॥ ೧೫೯ ॥

೧೫೯. ಸಾಮಾದಿ ಉಪಾಯಗಳನ್ನು ಪ್ರತ್ಯೇಕವಾಗಿ ಅಥವಾ ಸಮಸ್ತವಾಗಿ ಉಪಯೋಗಿಸಿ ತನ್ನ ವೀರತ್ವದಿಂದ ಅಥವಾ ನೀತಿಯಿಂದ ಆ ಎಲ್ಲ ರಾಜರನ್ನೂ ವಶೀಕರಿಸಿಕೊಳ್ಳಬೇಕು.

೧೫೯. ಸಾಮ. ದಾನ. ಭೇದ. ದಂಡ—ಎಂಬ ಉಪಾಯಗಳನ್ನು ಆವಶ್ಯಕತೆ ಇದ್ದ ಹಾಗೆ ಉಪಯೋಗಿಸಬೇಕು. ಈ ಎಲ್ಲವನ್ನೂ ಅಥವಾ ಕೇವಲ ಸಾಮ. ದಾನಗಳನ್ನು ಉಪಯೋಗಿಸಿ ಶತ್ರುವನ್ನು ಅಧೀನದಲ್ಲಿಡಬೇಕು.

संधिं च विग्रहं चैव यानमासनमेव च ।
द्वैधीभावं संश्रयं च षड्गुणांश्चिन्तयेत्सदा ॥ १६० ॥
ಸಂಧಿಂ ಚ ವಿಗ್ರಹಂ ಚೈವ ಯಾನಮಾಸನಮೇವ ಚ ।
ದ್ವೈಧೀಭಾವಂ ಸಂಶ್ರಯಂ ಚ ಷಡ್ಗುಣಾಂಶ್ಚಿಂತಯೇತ್ಸದಾ ॥ ೧೬೦ ॥

೧೬೦. ಸಂಧಿ. ವಿಗ್ರಹ. ಯಾನ. ಆಸನ. ದ್ವೈಧೀಭಾವ ಮತ್ತು ಸಂಶ್ರಯ ಎಂಬ ಷಡ್ಗುಣಗಳ ಬಗೆಗೆ ಯಾವಾಗಲೂ ಆಲೋಚಿಸುತ್ತಿರಬೇಕು.

೧೬೦. षड्गुण— १) संधि—ಪರಸ್ಪರರಿಗೆ ಸಹಾಯ ಮಾಡಬೇಕೆಂಬ ಒಡಂಬಡಿಕೆಯನ್ನು ಮಾಡಿಕೊಳ್ಳುವುದು.

२) विग्रह—ಯುದ್ಧವನ್ನು ಮಾಡುವುದು.

३) यान—ಶತ್ರುವಿನ ಮೇಲೆ ಏರಿ ಹೋಗುವುದು.

೪) **ಆಸನ**—ಶತ್ರುವನ್ನು ಉಪೇಕ್ಷಿಸಿ ಕೋಟೆ ಮುಂತಾದ ಸುರಕ್ಷಿತವಾದ ಸ್ಥಾನದಲ್ಲಿ ಸುಮ್ಮನೆ ಕುಳ್ಳಿರುವುದು.

೫) **ದ್ವೈಧೀಭಾವ**—ಕಾರ್ಯಸಿದ್ಧಿಗಾಗಿ ತನ್ನ ಸೈನ್ಯದಲ್ಲಿ ಎರಡು ಭಾಗಗಳನ್ನು ಮಾಡುವದು.

೬) **ಸಂಶ್ರಯ**—ಶತ್ರುವಿನಿಂದ ಪೀಡಿತನಾದಾಗ ಪ್ರಬಲನಾದ ಅರಸನ ಆಶ್ರಯವನ್ನು ಪಡೆಯುವದು.

आसनं चैव यानं च संधिं विग्रहमेव च ।
कार्यं वीक्ष्य प्रयुञ्जीत द्वैधं संश्रयमेव च ॥ १६१ ॥
ಆಸನಂ ಚೈವ ಯಾನಂ ಚ ಸಂಧಿಂ ವಿಗ್ರಹಮೇವ ಚ ।
ಕಾರ್ಯಂ ವೀಕ್ಷ್ಯ ಪ್ರಯುಂಜೀತ ದ್ವೈಧಂ ಸಂಶ್ರಯಮೇವ ಚ ॥ ೧೬೧ ॥

೧೬೧ ಆಸನ. ಯಾನ. ಸಂಧಿ. ವಿಗ್ರಹ. ದ್ವೈಧ ಮತ್ತು ಸಂಶ್ರಯಗಳನ್ನು (ಪ್ರಸ್ತುತ) ಕಾರ್ಯವನ್ನು ನೋಡಿ ಉಪಯೋಗಿಸಬೇಕು.

೧೬೧. ಮೇಲಿನ ಷಡ್ಗುಣಗಳಲ್ಲಿ ಯಾವುದನ್ನು ಅವಲಂಬಿಸಿದರೆ ತನಗೆ ಅನುಕೂಲವಾಗುವದು ಮತ್ತು ಶತ್ರುವಿಗೆ ಪ್ರತಿಕೂಲವಾಗುವದು—ಎಂಬುದನ್ನು ಯೋಚಿಸಿ, ಒಬ್ಬ ರಾಜನ ಜೊತೆಗೆ ಸಂಧಿ ಅಥವಾ ಇನ್ನೊಬ್ಬ ರಾಜನ ಕೂಡ ಯುದ್ಧ—ಹೀಗೆ ಮಾಡಬೇಕು.

संधिं तु द्विविधं विद्याद्राजा विग्रहमेव च ।
उभे यानासने चैव द्विविधः संश्रयः स्मृतः ॥ १६२ ॥
ಸಂಧಿಂ ತು ದ್ವಿವಿಧಂ ವಿದ್ಯಾದ್ರಾಜಾ ವಿಗ್ರಹಮೇವ ಚ ।
ಉಭೇ ಯಾನಾಸನೇ ಚೈವ ದ್ವಿವಿಧಃ ಸಂಶ್ರಯಃ ಸ್ಮೃತಃ ॥ ೧೬೨ ॥

೧೬೨. ಸಂಧಿ ಮತ್ತು ವಿಗ್ರಹಗಳು ಎರಡು ಪ್ರಕಾರದವುಗಳಾಗಿವೆ ಎಂಬುದನ್ನು ರಾಜನು ತಿಳಿಯಬೇಕು. ಯಾನ ಮತ್ತು ಆಸನಗಳಲ್ಲಿ ಎರಡು ಪ್ರಕಾರಗಳಿವೆ. ಸಂಶ್ರಯ (ಕೂಡ) ದ್ವಿವಿಧವೆಂದು (ಸ್ಮೃತಿಯಲ್ಲಿ) ಹೇಳಲಾಗಿದೆ.

೧೬೨. सन्ध्यादिषट्कं प्रत्येक द्विविधम् इत्यर्थः (राघ०).

समानयानकर्मा च विपरीतस्तथैव च ।
तदात्वायतिसंयुक्तः संधिर्ज्ञेयो द्विलक्षणः ॥ १६३ ॥
ಸಮಾನಯಾನ ಕರ್ಮಾ ಚ ವಿಪರೀತಸ್ತಥೈವ ಚ ।
ತದಾತ್ವಾಯತಿಸಂಯುಕ್ತಃ ಸಂಧಿರ್ಜ್ಞೇಯೋದ್ವಿಲಕ್ಷಣಃ ॥ ೧೬೩ ॥

೧೬೩. ತತ್ಕಾಲಕ್ಕೆ ಅಥವಾ ಭವಿಷ್ಯತ್ಕಾಲಕ್ಕೆ ಸಂಬಂಧಿಸಿದ 'ಸಮಾನಯಾನಕರ್ಮ' ಮತ್ತು 'ಅಸಮಾನಯಾನಕರ್ಮ' ಎಂಬ ಎರಡು ಪ್ರಕಾರದ ಸಂಧಿಯಿರುವದು.

೧೬೩. समानयानकर्म—ಇಬ್ಬರು ಕೂಡಿಕೊಂಡು ಶತ್ರುವಿನ ಮೇಲೆ ಧಾಳಿಯನ್ನು ನಡೆಸುವದು.

विपरीत: 'ನೀನು ಈ ದಿಕ್ಕಿನಿಂದ ಶತ್ರುವಿನ ಮೇಲೆ ಏರಿ ಹೋಗು; ನಾನು ಆ ದಿಕ್ಕಿನಿಂದ ಅವನ ಮೇಲೆ ದಾಳಿ ಮಾಡುತ್ತೇನೆ' ಎಂದು ನಿಶ್ಚಯಿಸುವದು.

तदात्व—आयतिसंयुक्तः—ತತ್ಕಾಲಕ್ಕೆ ಅಥವಾ ಭವಿಷ್ಯತ್ಕಾಲಕ್ಕೆ ಸಂಬಂಧಿಸಿದ (ಸಂಧಿ).

स्वयंकृतश्च कार्यार्थमकाले काल एव वा ।
मित्रस्य चैवापकृते द्विविधो विग्रहः स्मृतः ॥ १६४ ॥

ಸ್ವಯಂಕೃತಶ್ಚ ಕಾರ್ಯಾರ್ಥಮಕಾಲೇ ಕಾಲ ಏವ ಚ ।
ಮಿತ್ರಸ್ಯ ಚೈವಾಪಕೃತೇ ದ್ವಿವಿಧೋ ವಿಗ್ರಹಃ ಸ್ಮೃತಃ ॥ ೧೬೪ ॥

೧೬೪. ಕಾರ್ಯಸಿದ್ಧಿಗಾಗಿ ಶತ್ರು ಸಂಕಟದಲ್ಲಿದ್ದಾಗ ಅಥವಾ ಬೇರೆ ಸಮಯದಲ್ಲಿ ತಾನಾಗಿ ಯುದ್ಧವನ್ನು ಪ್ರಾರಂಭಿಸುವದು. ಮತ್ತು ಮಿತ್ರನ ಮೇಲೆ ಆಕ್ರಮಣವಾದಾಗ (ಅವನಿಗಾಗಿ ಹೋರಾಡುವದು)—ಹೀಗೆ ಯುದ್ಧವು ಎರಡು ತರವದ್ದೆಂದು (ಸ್ಮೃತಿಯಲ್ಲಿ) ಹೇಳಲಾಗಿದೆ.

೧೬೪. अकाले—ಶತ್ರು ಕಠಿಣ ಪರಿಸ್ಥಿತಿಯಲ್ಲಿರುವಾಗ. काले—ಮಾರ್ಗಶೀರ್ಷ ಮಾಸದಲ್ಲಿ (ಕೆಳಗೆ ಶ್ಲೋಕ ೧೮೦ ನೋಡಿರಿ),

द्विविधः—स्वकार्यार्थं मित्रकार्यार्थं च (मे०). मित्रस्य चैवापकृते—मित्रेण चैवापकृते इति पाठभेदः "यः परस्य शत्रुः, स विजिगीषोः मित्रं, तेनापकारे क्रियमाणे व्यसनिनि शत्रौ इति" (कु०).

एकाकिनश्चात्ययिके कार्ये प्राप्ते यदृच्छया ।
संहतस्य च मित्रेण द्विविधं यानमुच्यते ॥ १६५ ॥

ಏಕಾಕಿನಶ್ಚಾತ್ಯಯಿಕೇ ಕಾರ್ಯೇ ಪ್ರಾಪ್ತೇ ಯದೃಚ್ಛಯಾ ।
ಸಂಹತಸ್ಯ ಚ ಮಿತ್ರೇಣ ದ್ವಿವಿಧಂ ಯಾನಮುಚ್ಯತೇ ॥ ೧೬೫ ॥

೧೬೫. (ಶತ್ರುವಿಗೆ) ಆಕಸ್ಮಿಕವಾಗಿ ಸಂಕಟ ಪ್ರಾಪ್ತವಾದಾಗ (ಸಮರ್ಥನಾದ) ಒಬ್ಬ ರಾಜನು ಧಾಳಿ ಮಾಡುವದು ಅಥವಾ (ಅಸಮರ್ಥನಾದವನು) ಮಿತ್ರನ ಜೊತೆಗೆ ಹೋಗುವದು ಎಂಬುದಾಗಿ ಯಾನವು ಎರಡು ವಿಧವೆಂದು ಹೇಳಲಾಗಿದೆ.

೧೬೫. आत्ययिकं—तत्कालाप्रतीकारे अनर्थहेतुं (स०).
शत्रोः व्यसनादिकं (कु०).

क्षीणस्य चैव क्रमशो दैवात्पूर्वकृतेन वा ।
मित्रस्य चानुरोधेन द्विविधं स्मृतमासनम् ॥ १६६ ॥

ಕ್ಷೀಣಸ್ಯ ಚೈವ ಕ್ರಮಶೋ ದೈವಾತ್ಪೂರ್ವಕೃತೇನ ವಾ ।
ಮಿತ್ರಸ್ಯ ಚಾನುರೋಧೇನ ದ್ವಿವಿಧಂ ಸ್ಮೃತಮಾಸನಮ್ ॥ ೧೬೬ ॥

೧೬೬. ದುರ್ದೈವದಿಂದ ಅಥವಾ ಹಿಂದೆ ಮಾಡಿದ ಕಾರ್ಯದಿಂದ (ಸೈನ್ಯ. ಸಂಪತ್ತು) ಕ್ಷೀಣನಾದಾಗ ಸುಮ್ಮನೆ ಇರುವದು ಮತ್ತು (ಸಮೃದ್ಧನಾಗಿದ್ದರೂ) ಮಿತ್ರನ ವಿನಂತಿಯಂತೆ ಸುಮ್ಮನೆ ಕುಳಿತಿರುವದು – ಎಂಬುದಾಗಿ 'ಆಸನ' ಎರಡು ಪ್ರಕಾರದ್ದೆಂದು (ಸ್ಮೃತಿಯಲ್ಲಿ) ಹೇಳಲಾಗಿದೆ.

೧೬೬. दैवात्—मारकादिना (स०).

पूर्वकृतेन—ऐहिकेन, बलवच्छत्रुपीडादिकर्मणा वा (राघ). अस्मिन् जन्मनि पूर्वसंवत्सरादिषु कृतेन (न०).

बलस्य स्वामिनश्चैव स्थितिः कार्यार्थसिद्धये ।
द्विविधं कीर्त्यते द्वैधं षाड्गुण्यगुणवेदिभिः ॥ १६७ ॥

ಬಲಸ್ಯ ಸ್ವಾಮಿನಶ್ಚೈವ ಸ್ಥಿತಿಃ ಕಾರ್ಯಾರ್ಥಸಿದ್ಧಯೇ ।
ದ್ವಿವಿಧಂ ಕೀರ್ತ್ಯತೇ ದ್ವೈಧಂ ಷಾಡ್ಗುಣ್ಯಗುಣವೇದಿಭಿಃ ॥ ೧೬೭ ॥

೧೬೭. ಕಾರ್ಯಸಿದ್ಧಿಗಾಗಿ ಸೈನ್ಯವು ಮತ್ತು ರಾಜನು ಭಿನ್ನ ಭಿನ್ನ ಸ್ಥಳದಲ್ಲಿರುವದು ದ್ವೈಧವೆಂದು ಷಾಡ್ಗುಣ್ಯದ ಪ್ರಯೋಜನವನ್ನು ಬಲ್ಲವರು ಹೇಳುತ್ತಾರೆ

೧೬೭. ಸೇನಾಪತಿಯ ನಾಯಕತ್ವದಲ್ಲಿ ಚತುರಂಗ ಸೈನ್ಯವನ್ನು ಶತ್ರುಪೀಡಾ ಪರಿಹಾರಕ್ಕಾಗಿ ಕಳಿಸುವದು ಮತ್ತು ರಾಜನು ಅಲ್ಪ ಸೈನ್ಯದ ಜೊತೆಗೆ ಕೋಟೆಯಲ್ಲಿರುವದು—ಇದು ಒಂದು ತರಹದ ದ್ವೈಧ. ಸೈನ್ಯದ ಕೆಲಭಾಗವನ್ನು ತನ್ನ ರಕ್ಷಣೆಗಾಗಿಟ್ಟುಕೊಂಡು ಇನ್ನೊಂದು ಭಾಗವನ್ನು ಮಿತ್ರನ ಸಹಾಯಕ್ಕೆ ಕಳಿಸುವದು—ಇದು ಇನ್ನೊಂದು ತರಹದ ದ್ವೈಧ (ಮೇ.). ಹೋಲಿಸಿರಿ—ಕಾಮಂದಕೀಯ ನೀತಿಸಾರ ೧೧-೨೪.

अर्थसंपादनार्थं च पीड्यमानस्य शत्रुभिः ।
साधुषु व्यपदेशार्थं द्विविधः संश्रयः स्मृतः ॥ १६८ ॥

ಅರ್ಥಸಂಪಾದನಾರ್ಥಂ ಚ ಪೀಡ್ಯಮಾನಸ್ಯ ಶತ್ರುಭಿಃ ।
ಸಾಧುಷು ವ್ಯಪದೇಶಾರ್ಥಂ ದ್ವಿವಿಧಃ ಸಂಶ್ರಯಃ ಸ್ಮೃತಃ ॥ ೧೬೮ ॥

೧೬೮. ಶತ್ರುಗಳಿಂದ ಪೀಡಿತನಾದಾಗ ತನ್ನ ಉದ್ದೇಶವನ್ನು ಪೂರ್ಣಗೊಳಿಸಲೆಂದು ಮತ್ತು ಒಳ್ಳೆಯ ಜನರ ಆಧಾರ ತಮಗಿದೆಯೆಂದು ಪ್ರಕಟಿಸಲೆಂದು ಮಾಡುವ ಸಂಶ್ರಯವು ದ್ವಿವಿಧವಾಗಿದೆಯೆಂದು ಸ್ಮೃತಿಯಲ್ಲಿ ಹೇಳಲಾಗಿದೆ.

೧೬೮. ಪರಚಕ್ರದ ಭಯ ತತ್ಕಾಲದಲ್ಲಿರದಿದ್ದರೂ ಬಲಾಢ್ಯ ಹಾಗೂ ಧರ್ಮನಿಷ್ಠ ಅರಸರ ಆಶ್ರಯವನ್ನು ಪಡೆದಿರಬೇಕು. ಇದರಿಂದ ಶತ್ರುವಿನ ಮನಸ್ಸಿನಲ್ಲಿ ಭಯವುಂಟಾಗುವದು.

यदावगच्छेदायत्यामाधिक्यं ध्रुवमात्मनः ।
तदात्वे चाल्पिकां पीडां तदा संधिं समाश्रयेत् ॥ १६९ ॥

ಯದಾವಗಚ್ಛೇದಾಯತ್ಯಾಮಾಧಿಕ್ಯಂ ಧ್ರುವಮಾತ್ಮನಃ ।
ತದಾತ್ವೇ ಚಾಲ್ಪಿಕಾಂ ಪೀಡಾಂ ತದಾ ಸಂಧಿಂ ಸಮಾಶ್ರಯೇತ್ ॥ ೧೬೯ ॥

೧೬೯. ಭವಿಷ್ಯತ್ಕಾಲದಲ್ಲಿ ತನಗೆ ಖಂಡಿತವಾಗಿ ಉತ್ಕರ್ಷವಾಗುವದೆಂದು ತಿಳಿದು ಬಂದಾಗ. ತತ್ಕಾಲದಲ್ಲಿ ಸ್ವಲ್ಪ ಹಾನಿಯಾದರೂ ಸಂಧಿಯನ್ನು ಆಶ್ರಯಿಸಬೇಕು.

೧೬೯. आयत्याम्—ಭವಿಷ್ಯತ್ತಿನಲ್ಲಿ
अल्पिकां पीडाम्—ಅಲ್ಪ ಧನಹಾನಿ.

यदा प्रहृष्टा मन्येत सर्वास्तु प्रकृतीर्भृशम् ।
अत्युच्छ्रितं तथात्मानं तदा कुर्वीत विग्रहम् ॥ १७० ॥

ಯದಾ ಪ್ರಹೃಷ್ಟಾ ಮನ್ಯೇತ ಸರ್ವಾಸ್ತು ಪ್ರಕೃತೀರ್ಭೃಶಮ್ ।
ಅತ್ಯುಚ್ಛ್ರಿತಂ ತಥಾತ್ಮಾನಂ ತದಾ ಕುರ್ವೀತ ವಿಗ್ರಹಮ್ ॥ ೧೭೦ ॥

೧೭೦. ತನ್ನ ಎಲ್ಲ ಪ್ರಕೃತಿಗಳೂ ಅತ್ಯಂತ ಸಂತುಷ್ಟವಾಗಿವೆ ಮತ್ತು ತಾನು ಅತ್ಯಂತ ಬಲಶಾಲಿಯಾಗಿದ್ದೇನೆ ಎಂದು ತಿಳಿದು ಬಂದರೆ ಆಗ ಯುದ್ಧವನ್ನು ಮಾಡಬೇಕು.

೧೭೦. प्रहृष्टाः प्रकृतीः—ಮೇಲೆ ಶ್ಲೋಕ ೧೫೬-೧೫೭ರಲ್ಲಿ ಹೇಳಿದ ಅಮಾತ್ಯಾದಿ ಪ್ರಕೃತಿಗಳು—ದಾನ ಸಂಮಾನ ಮುಂತಾದುವುಗಳಿಂದ ಸಂತುಷ್ಟರಾಗಿದ್ದಾಗ.

अत्युच्छ्रित—ಆನೆ, ಕುದುರೆ, ಕೋಶ ಮುಂತಾದ ಶಕ್ತಿಗಳಿಂದ ತಾನು ಬಲಿಷ್ಠನಾಗಿದ್ದೇನೆಂದು ತಿಳಿದು ಬಂದಾಗ ಮಾತ್ರ ಯುದ್ಧವನ್ನು ಪ್ರಾರಂಭಿಸಬೇಕು.

यदा मन्येत भावेन हृष्टं पुष्टं बलं स्वकम् ।
परस्य विपरीतं च तदा यायाद्रिपुं प्रति ॥ १७१ ॥

ಯದಾ ಮನ್ಯೇತ ಭಾವೇನ ಹೃಷ್ಟಂ ಪುಷ್ಟಂ ಬಲಂ ಸ್ವಕಮ್ ।
ಪರಸ್ಯ ವಿಪರೀತಂ ಚ ತದಾ ಯಾಯಾದ್ರಿಪುಂ ಪ್ರತಿ ॥ ೧೭೧ ॥

೧೭೧. ತನ್ನ ಸೈನ್ಯವು (ಮನಸ್ಸಿನಲ್ಲಿ) ಹರ್ಷಯುಕ್ತ ಮತ್ತು (ಧನಾದಿಗಳಿಂದ) ಪುಷ್ಟವಾಗಿದೆಯೆಂದು ಹಾಗೂ ಶತ್ರುವಿನ ಸೈನ್ಯವು ವಿರುದ್ಧವಾಗಿದೆಯೆಂದು ನಿಜವಾಗಿ ಯಾವಾಗ ತಿಳಿಯುತ್ತದೋ, ಆಗ ಶತ್ರುವಿನ ಮೇಲೇರಿ ಹೋಗಬೇಕು.

೧೭೧. हृष्टं पुष्टं—हृष्टं हर्षितम् अत्युत्साहयुक्तं, मांसौदनादिना पुष्टं (राघ०).

यदा तु स्यात्परिक्षीणो वाहनेन बलेन च ।
तदासीत प्रयत्नेन शनकैः सान्त्वयन्नरीन् ॥ १७२ ॥

ಯದಾ ತು ಸ್ಯಾತ್ಪರಿಕ್ಷೀಣೋ ವಾಹನೇನ ಬಲೇನ ಚ ।
ತದಾಸೀತ ಪ್ರಯತ್ನೇನ ಶನಕೈಃ ಸಾಂತ್ವಯನ್ನರೀನ್ ॥ ೧೭೨ ॥

೧೭೨. ವಾಹನಗಳಲ್ಲಿ ಹಾಗೂ ಸೈನ್ಯಗಳಲ್ಲಿ ಅತ್ಯಂತ ಕ್ಷೀಣನಾದಾಗ ರಾಜನು ಶತ್ರುಗಳನ್ನು (ಸಾಮದಾನಗಳಿಂದ) ಸಾಂತ್ವನ ಮಾಡುತ್ತ ಇರಬೇಕು.

೧೭೨. वाहनेन—ಆನೆ, ಕುದುರೆ, ರಥ ಮುಂತಾದ ವಾಹನಗಳು.
बलेन—ಮಂತ್ರಿ, ಸೈನ್ಯ, ಕೋಶ ಮುಂತಾದ ರಾಜಶಕ್ತಿಗಳು.

मन्येतारिं यदा राजा सर्वथा बलवत्तरम् ।
तदा द्विधा बलं कृत्वा साधयेत्कार्यमात्मनः ॥ १७३ ॥

ಮನ್ಯೇತಾರಿಂ ಯದಾ ರಾಜಾ ಸರ್ವಥಾ ಬಲವತ್ತರಮ್ ।
ತದಾ ದ್ವಿಧಾ ಬಲಂ ಕೃತ್ವಾ ಸಾಧಯೇತ್ಕಾರ್ಯಮಾತ್ಮನಃ ॥ ೧೭೩ ॥

೧೭೩. ಶತ್ರು ಎಲ್ಲ ಪ್ರಕಾರದಿಂದಲೂ ಅತ್ಯಂತ ಬಲಶಾಲಿಯಾಗಿದ್ದಾನೆಂದು ತಿಳಿದುಬಂದರೆ, ರಾಜನು ತನ್ನ ಸೈನ್ಯವನ್ನು ಎರಡು ಭಾಗಗಳನ್ನಾಗಿ ಮಾಡಿ ತನ್ನ ಕಾರ್ಯವನ್ನು ಸಾಧಿಸಬೇಕು.

೧೭೩. ರಾಜನು ಕೆಲವು ಸೈನಿಕರ ಜೊತೆಗೆ ಕೋಟೆಯಲ್ಲಿರಬೇಕು ಮತ್ತು ಉಳಿದ ಸೈನ್ಯವನ್ನು ಶತ್ರುವಿನ ಕೂಡ ಹೋರಾಡಲು ಕಳಿಸಬೇಕು.

यदा परबलानां तु गमनीयतमो भवेत् ।
तदा तु संश्रयेत्क्षिप्रं धार्मिकं बलिनं नृपम् ॥ १७४ ॥

ಯದಾ ಪರಬಲಾನಾಂ ತು ಗಮನೀಯತಮೋ ಭವೇತ್ ।
ತದಾ ತು ಸಂಶ್ರಯೇತ್‌ಕ್ಷಿಪ್ರಂ ಧಾರ್ಮಿಕಂ ಬಲಿನಂ ನೃಪಮ್ ॥ ೧೭೪ ॥

೧೭೪. ಶತ್ರುವಿನ ಸೈನಿಕರು ತನ್ನನ್ನು ಖಂಡಿತವಾಗಿ ಸೆರೆಹಿಡಿಯುತ್ತಾರೆಂದೆನ್ನಿಸಿದರೆ ಕೂಡಲೇ ಧಾರ್ಮಿಕ ಹಾಗೂ ಬಲಿಷ್ಠನಾದ ಅರಸನ ಆಶ್ರಯವನ್ನು ಪಡೆಯಬೇಕು.

೧೭೪. ತನ್ನ ರಾಜ್ಯದಲ್ಲಿ ತನ್ನ ರಕ್ಷಣೆಯಾಗಲಿಕ್ಕಿಲ್ಲ ಎಂದು ತಿಳಿದು ಬಂದರೆ ಅವನು ಸಮರ್ಥ ಅರಸನ ಆಶ್ರಯಕ್ಕೆ ಹೋಗಬೇಕು. ಆ ಅರಸನು ಧರ್ಮನಿಷ್ಠನಾಗಿರಬೇಕು; ಇಲ್ಲದಿದ್ದರೆ ಅವನೇ ಈ ರಾಜನಿಗೆ ಅಪಾಯ ಮಾಡಬಹುದು.

निग्रहं प्रकृतीनां च कुर्याद्योऽरिबलस्य च ।
उपसेवेत तं नित्यं सर्वयत्नैर्गुरुं यथा ॥ १७५ ॥

ನಿಗ್ರಹಂ ಪ್ರಕೃತೀನಾಂ ಚ ಕುರ್ಯಾದ್ಯೋಽರಿಬಲಸ್ಯ ಚ ।
ಉಪಸೇವೇತ ತಂ ನಿತ್ಯಂ ಸರ್ವಯತ್ನೈರ್ಗುರುಂ ಯಥಾ ॥ ೧೭೫ ॥

೧೭೫. ಯಾವನು ಪ್ರಕೃತಿಗಳ ಹಾಗೂ ಶತ್ರು ಸೈನ್ಯದ ನಿಗ್ರಹ ಮಾಡುವದಕ್ಕೆ ಸಮರ್ಥನಾಗಿರುವನೋ, ಅವನಿಗೆ ಯಾವಾಗಲೂ ಗುರುವಿಗೆ ಸೇವೆ ಸಲ್ಲಿಸುವಂತೆ ಸರ್ವ ಪ್ರಯತ್ನದಿಂದ ಸೇವೆ ಸಲ್ಲಿಸಬೇಕು.

೧೭೫. प्रकृतीनां—ಮೇಲೆ ಶ್ಲೋಕ ೧೫೭ರಲ್ಲಿ ಹೇಳಿದಂತೆ ಅಮಾತ್ಯ, ರಾಷ್ಟ್ರ, ದುರ್ಗ, ಅರ್ಥ ಮತ್ತು ದಂಡ ಈ ಐದು ಪ್ರಕೃತಿಗಳು.

यदि तत्रापि संपश्येद्दोषं संश्रयकारितम् ।
सुयुद्धमेव तत्रापि निर्विशङ्कः समाचरेत् ॥ १७६ ॥

ಯದಿ ತತ್ರಾಪಿ ಸಂಪಶ್ಯೇದ್ದೋಷಂ ಸಂಶ್ರಯಕಾರಿತಮ್ ।
ಸುಯುದ್ಧಮೇವ ತತ್ರಾಪಿ ನಿರ್ವಿಶಂಕಃ ಸಮಾಚರೇತ್ ॥ ೧೭೬ ॥

೧೭೬. (ಬೇರೆ ಅರಸನ) ಆಶ್ರಯ ಪಡೆಯುವದರಲ್ಲಿ ಏನಾದರೂ ದೋಷವಿದೆಯೆಂದು ಕಂಡುಬಂದರೆ, ಆ (ದುರ್ಬಲ) ಸ್ಥಿತಿಯಲ್ಲಿ ಸಹ ನಿರ್ಭಯತೆಯಿಂದ ಚೆನ್ನಾಗಿ ಯುದ್ಧ ಮಾಡಬೇಕು.

೧೭೬. ಆದರೆ ಅರಸನು ಆಶ್ರಯ ಪಡೆದರೂ ತನ್ನ ರಕ್ಷಣೆಯಾಗಲಿಕ್ಕಿಲ್ಲ ಎಂದು ತಿಳಿದು ಬಂದರೆ ಅವನು ತನ್ನ ಎಲ್ಲ ಸಾಮರ್ಥ್ಯದಿಂದ ಹೋರಾಡಬೇಕು. ಏಕೆಂದರೆ ದೈವವು ಅನುಕೂಲವಾಗಿದ್ದರೆ ದುರ್ಬಲನೂ ಬಲಾಢ್ಯ ಶತ್ರುವನ್ನು ಪರಾಜಯಗೊಳಿಸುತ್ತಾನೆ. ಯುದ್ಧದಲ್ಲಿ ಮರಣ ಬಂದರೆ ಸ್ವರ್ಗಪ್ರಾಪ್ತಿಯಾಗುತ್ತದೆ. ಹೋಲಿಸಿರಿ:—

> हतो वा प्राप्स्यसि स्वर्गं जित्वा वा भोक्ष्यसे महीम् ।
> तस्मादुत्तिष्ठ कौन्तेय युद्धाय कृतनिश्चयः ॥ —भगवद्गीता २.३७.

सर्वोपायैस्तथा कुर्यान्नीतिज्ञः पृथिवीपतिः ।
यथास्याभ्यधिका न स्युर्मित्रोदासीनशत्रवः ॥ १७७ ॥
ಸರ್ವೋಪಾಯೈಸ್ತಥಾ ಕುರ್ಯಾನ್ನೀತಿಜ್ಞಃ ಪೃಥಿವೀಪತಿಃ ।
ಯಥಾಸ್ಯಾಭ್ಯಧಿಕಾ ನ ಸ್ಯುರ್ಮಿತ್ರೋದಾಸೀನಶತ್ರವಃ ॥ ೧೭೭ ॥

೧೭೭. ನೀತಿಯನ್ನು ಬಲ್ಲ ರಾಜನು ಮಿತ್ರ. ಉದಾಸೀನ ಹಾಗೂ ಶತ್ರುಗಳು ತನಗಿಂತ ಹೆಚ್ಚು (ಬಲಶಾಲಿಗಳು) ಆಗಬಾರದೆಂದು ಎಲ್ಲ ಉಪಾಯಗಳಿಂದ ಪ್ರಯತ್ನ ಮಾಡಬೇಕು.

೧೭೭. उपायैः—ಸಾಮ, ದಾನ, ಭೇದ, ದಂಡ ಎಂಬ ಉಪಾಯಗಳಿಂದ स्वार्थगनिवशात् च मित्रमप्यरिर्भवति (मे०). ಹೋಲಿಸಿರಿ:—

> न कश्चित् कस्य चिन्मित्रं न कश्चित् कस्यचिद्रिपुः ।
> सामर्थ्ययोगाद्विज्ञेया मित्राणि रिपवस्तथा ॥

आयतिं सर्वकार्याणां तदात्वं च विचारयेत् ।
अतीतानां च सर्वेषां गुणदोषौ च तत्त्वतः ॥ १७८ ॥
ಆಯತಿಂ ಸರ್ವಕಾರ್ಯಾಣಾಂ ತದಾತ್ವಂ ಚ ವಿಚಾರಯೇತ್ ।
ಅತೀತಾನಾಂ ಚ ಸರ್ವೇಷಾಂ ಗುಣದೋಷೌ ಚ ತತ್ತ್ವತಃ ॥ ೧೭೮ ॥

೧೭೮. ಎಲ್ಲ ಕಾರ್ಯಗಳ ಭವಿಷ್ಯ ಹಾಗೂ ವರ್ತಮಾನವನ್ನು ಕುರಿತು ವಿಚಾರ ಮಾಡಬೇಕು. ಆಗಿ ಹೋದ ಎಲ್ಲ ಕಾರ್ಯಗಳ ಗುಣದೋಷದ ಬಗೆಗೂ ಆಲೋಚಿಸಬೇಕು.

೧೭೮. ಕಾರ್ಯವು ಸಣ್ಣದೇ ಇರಲಿ, ದೊಡ್ಡದೇ ಆಗಿರಲಿ: ಅದರಿಂದ ವರ್ತಮಾನ ಕಾಲದಲ್ಲಿ ಅಥವಾ ಭವಿಷ್ಯತ್ತಿನಲ್ಲಿ ಯಾವ ಲಾಭ ಅಥವಾ ಹಾನಿಯಾಗಬಹುದೆಂದು ಚಿಂತಿಸಬೇಕು. ಹಿಂದೆ ಮಾಡಿದ ಯಾವ ಕಾರ್ಯದಿಂದ ಲಾಭವಾಯಿತೋ, ಅದನ್ನು ಮತ್ತೆ ಮಾಡಲು ಯೋಚಿಸಬೇಕು.

आयत्यां गुणदोषज्ञस्तदात्वे क्षिप्रनिश्चयः ।
अतीते कार्यशेषज्ञः शत्रुभिर्नाभिभूयते ॥ १७९ ॥
ಆಯತ್ಯಾಂ ಗುಣದೋಷಜ್ಞಸ್ತದಾತ್ವೇ ಕ್ಷಿಪ್ರನಿಶ್ಚಯಃ ।
ಅತೀತೇ ಕಾರ್ಯಶೇಷಜ್ಞಃ ಶತ್ರುಭಿರ್ನಾಭಿಭೂಯತೇ ॥ ೧೭೯ ॥

೧೭೯. ಯಾವನು ಭವಿಷ್ಯತ್ತಿನಲ್ಲಿ ಬರುವ ಗುಣದೋಷಗಳನ್ನು ಬಲ್ಲನೋ, ತತ್ಕಾಲದಲ್ಲಿ ಮಾಡುವ ಕಾರ್ಯದ ಬಗೆಗೆ ಕೂಡಲೇ ನಿಶ್ಚಯಿಸುತ್ತಾನೋ ಮತ್ತು ಹಿಂದೆ ಮಾಡಿದ ಕಾರ್ಯದ ಶೇಷಭಾಗವನ್ನು (ಫಲವನ್ನು) ತಿಳಿಯುತ್ತಾನೋ ಅವನು ಶತ್ರುವಿನಿಂದ ಪರಾಜಿತನಾಗುವದಿಲ್ಲ.

೧೭೯. कार्यशेषज्ञः—कार्यशेषस्य तदेकदेशोद्धारोपायस्यापि ज्ञाता (स० राम०), तत्कार्यसमाप्तौ तत्फलं लभते (कु०).

यथैनं नाभिसंदध्युर्मित्रोदासीनशत्रवः ।
तथा सर्वं संविदध्यादेष सामासिको नयः ॥ १८० ॥
ಯಥೈನಂ ನಾಭಿಸಂದಧ್ಯುರ್ಮಿತ್ರೋದಾಸೀನಶತ್ರವಃ ।
ತಥಾ ಸರ್ವಂ ಸಂವಿದಧ್ಯಾದೇಷ ಸಾಮಾಸಿಕೋ ನಯಃ ॥ ೧೮೦ ॥

೧೮೦. ಮಿತ್ರ, ಉದಾಸೀನ ಮತ್ತು ಶತ್ರುಗಳು ಯಾವದರಿಂದ ಅವನಿಗೆ ಪೀಡೆ ಮಾಡದೆ ಇರಬಹುದೋ, ಆ ಎಲ್ಲವನ್ನೂ ಮಾಡುವದು—ಇದು ಸಂಕ್ಷೇಪದಲ್ಲಿ (ರಾಜ) ನೀತಿಯಾಗಿದೆ.

೧೮೦. अभिसंदध्युः—वञ्चयेयुः
सामासिकः—संक्षिप्तः

यदा तु यानमातिष्ठेदरिराष्ट्रं प्रति प्रभुः ।
तदानेन विधानेन यायादरिपुरं शनैः ॥ १८१ ॥
ಯದಾ ತು ಯಾನಮಾತಿಷ್ಠೇದರಿರಾಷ್ಟ್ರಂ ಪ್ರತಿ ಪ್ರಭುಃ ।
ತದಾನೇನ ವಿಧಾನೇನ ಯಾಯಾದರಿಪುರಂ ಶನೈಃ ॥ ೧೮೧ ॥

೧೮೧. ರಾಜನು ಶತ್ರುರಾಜ್ಯದ ಮೇಲೆ ದಂಡೆತ್ತಿ ಹೋಗುವಾಗ ಈ (ಮುಂದೆ ಹೇಳಿದ) ವಿಧಾನದಂತೆ ನಿಧಾನವಾಗಿ ಶತ್ರುವಿನ ನಗರದೆಡೆ ಪ್ರಯಾಣ ಮಾಡಬೇಕು.

೧೮೧. शनैः—ಸಾವಧಾನವಾಗಿ, ಇಷ್ಟಾನಿಷ್ಟವನ್ನು ತಿಳಿದುಕೊಂಡು.

मार्गशीर्षे शुभे मासि यायाद्यात्रां महीपतिः ।
फाल्गुनं वाथ चैत्रं वा मासौ प्रति यथाबलम् ।। १८२ ।।
ಮಾರ್ಗಶೀರ್ಷೇ ಶುಭೇ ಮಾಸಿ ಯಾಯಾದ್ಯಾತ್ರಾಂ ಮಹೀಪತಿಃ ।
ಫಾಲ್ಗುನಂ ವಾಥ ಚೈತ್ರಂ ವಾ ಮಾಸೌ ಪ್ರತಿ ಯಥಾ ಬಲಮ್ ॥ ೧೮೨ ॥

೧೮೨. ಶುಭವಾದ ಮಾರ್ಗಶೀರ್ಷ ಮಾಸದಲ್ಲಿ ರಾಜನು ದಂಡಯಾತ್ರೆಗೆ ಹೊರಡಬೇಕು; ಅಥವಾ ತನ್ನ ಸಾಮರ್ಥ್ಯವನ್ನು ನೋಡಿಕೊಂಡು ಫಾಲ್ಗುನ ಅಥವಾ ಚೈತ್ರ ಮಾಸದಲ್ಲಿ ಹೋಗಬೇಕು.

೧೮೨. रथप्रधानो पार्थिवः मार्गशीर्षे गच्छेत्, चक्रवाताद्यभावात् । अश्वप्रधानः फाल्गुने, पदातिप्रधानः चैत्रे । (राघ०)

अन्येष्वपि तु कालेषु यदा पश्येद्ध्रुवं जयम् ।
तदा यायाद्विगृह्यैव व्यसने चोत्थिते रिपोः ।। १८३ ।।
ಅನ್ಯೇಷ್ವಪಿ ತು ಕಾಲೇಷು ಯದಾ ಪಶ್ಯೇದ್ಧ್ರುವಂ ಜಯಮ್ ।
ತದಾ ಯಾಯಾದ್ವಿಗೃಹ್ಯೈವ ವ್ಯಸನೇ ಚೋತ್ಥಿತೇ ರಿಪೋಃ ॥ ೧೮೩ ॥

೧೮೩. ನಿಶ್ಚಿತವಾಗಿ ತನ್ನ ವಿಜಯವಾಗುವುದೆಂದು ಕಂಡುಬಂದರೆ ಬೇರೆ ಸಮಯಗಳಲ್ಲಿಯೂ ಯುದ್ಧ ಮಾಡುವೆನೆಂದು ಘೋಷಿಸಿ ಮತ್ತು ಶತ್ರುವಿಗೆ ಸಂಕಟ ಉತ್ಪನ್ನವಾದಾಗ (ಅದನ್ನು ನೋಡಿಕೊಂಡು) ರಾಜನು ದಾಳಿ ನಡೆಸಬೇಕು.

೧೮೩. विगृह्य—यातव्यमेव अवष्टभ्य आहूय (मे०). विग्रहं भाविनम् उद्घुष्य, कथंचित् विग्रहज्ञानमात्रेण परस्य प्रणतिसंभवत् (स० राम०).

कृत्वा विधानं मूले तु यात्रिकं च यथाविधि ।
उपगृह्यास्पदं चैव चारान्सम्यग्विधाय च ।। १८४ ।।
ಕೃತ್ವಾ ವಿಧಾನಂ ಮೂಲೇ ತು ಯಾತ್ರಿಕಂ ಚ ಯಥಾವಿಧಿ ।
ಉಪಗೃಹ್ಯಾಸ್ಪದಂ ಚೈವ ಚಾರಾನ್ಸಮ್ಯಗ್ವಿಧಾಯ ಚ ॥ ೧೮೪ ॥

संशोध्य त्रिविधं मार्गं षड्विधं च बलं स्वकम् ।
सांपरायिककल्पेन यायादरिपुरं शनैः ।। १८५ ।।
ಸಂಶೋಧ್ಯ ತ್ರಿವಿಧಂ ಮಾರ್ಗಂ ಷಡ್ವಿಧಂ ಚ ಬಲಂ ಸ್ವಕಮ್ ।
ಸಾಂಪರಾಯಿಕಕಲ್ಪೇನ ಯಾಯಾದರಿಪುರಂ ಶನೈಃ ॥ ೧೮೫ ॥

೧೮೪–೫. ತನ್ನ ಸ್ಥಾನದಲ್ಲಿ (ರಕ್ಷಣೆಯ) ವ್ಯವಸ್ಥೆಯನ್ನೂ ದಂಡಯಾತ್ರೆಯ ವ್ಯವಸ್ಥೆಯನ್ನೂ ಮಾಡಿ, ಶಿಬಿರಸ್ಥಾನವನ್ನು ನಿರ್ಮಿಸಿ, ತನ್ನ ಗೂಢಚಾರರನ್ನು ಸರಿಯಾದ ಸ್ಥಾನಗಳಲ್ಲಿಟ್ಟು ಮೂರು ಪ್ರಕಾರದ ಮಾರ್ಗವನ್ನು ಸರಿಪಡಿಸಿ, ತನ್ನ ಆರು ತರಹದ ಸೈನ್ಯವನ್ನು ಸಿದ್ಧಮಾಡಿ ಸಂಗ್ರಾಮಯೋಗ್ಯವಾದಂತೆ ನಿಧಾನವಾಗಿ ಶತ್ರುವಿನ ನಗರದೆಡೆ ಹೋಗಬೇಕು.

೧೮೪. मूले विधानं—ಶತ್ರು ಹಿಂದುಗಡೆಯಿಂದ ದಾಳಿ ಮಾಡಬಾರದೆಂದು ಕೆಲವು ಸೈನ್ಯ ವಿಭಾಗಗಳನ್ನು ಅಲ್ಲಿಡಬೇಕು. (पार्ष्णिग्राहसंविधान).

यात्रिकं विधानं—ಸೈನ್ಯ, ಶಸ್ತ್ರ, ಕವಚ, ವಾಹನಗಳ ಸಿದ್ಧತೆ, ಹಾಗೂ ಅನ್ನವಸ್ತ್ರಾದಿಗಳ ಸಿದ್ಧತೆ.

उपगृह्य आस्पदं—ಶತ್ರುಪ್ರದೇಶದಲ್ಲಿ ತನ್ನ ಸೈನ್ಯದ ಶಿಬಿರವನ್ನು ನಿರ್ಮಿಸಿ.

चारान् विधाय—ಮೇಲೆ ಹೇಳಿದ ಕಾಪಟಿಕಾದಿ ಗೂಢಚಾರರನ್ನು ಶತ್ರುವಿನ ಬಗೆಗೆ ವಾರ್ತೆಯನ್ನು ತರಲು ಕಳಿಸಬೇಕು.

೧೮೫. त्रिविध मार्ग—ಊರಿನಲ್ಲಿ, ಅರಣ್ಯದಲ್ಲಿ ಮತ್ತು ನೀರಿನಲ್ಲಿ ಇರುವ ಮಾರ್ಗ.

संशोध्य—ಮಾರ್ಗದಲ್ಲಿ ಅಡ್ಡಿಮಾಡುವ ಗಿಡಗಂಟೆಗಳನ್ನು ಕಡಿದು, ತಗ್ಗುದಿನ್ನೆಗಳನ್ನು ಸರಿಪಡಿಸಿ,

षड्विधं बलं—हस्ति - अश्व - रथ - पदाति - सेना - कोश - कर्मकरात्मकं (मे०). ಹೋಲಿಸಿರಿ:—

मौलं भृतं श्रेणिसुहृद्द्विषदाटविकं बलम् ।
षड्विधं तु बलं व्यूह्य द्विषतोऽभिमुखं व्रजेत् ॥

—कामांदकीय नीतिसार

सांपरायिककल्पेन—संग्रामयोग्येन विधानेन (म०).

शत्रुसेविनि मित्रे च गूढे युक्ततरो भवेत् ।
गतप्रत्यागते चैव स हि कष्टतरो रिपुः ॥ १८६ ॥

ಶತ್ರುಸೇವಿನಿ ಮಿತ್ರೇ ಚ ಗೂಢೇ ಯುಕ್ತತರೋ ಭವೇತ್ ।
ಗತಪ್ರತ್ಯಾಗತೇ ಚೈವ ಸ ಹಿ ಕಷ್ಟತರೋ ರಿಪುಃ ॥ ೧೮೬ ॥

೧೮೬. ಗುಪ್ತವಾಗಿ ಶತ್ರುವಿಗೆ ಸೇವೆ ಸಲ್ಲಿಸುತ್ತಿರುವ ತನ್ನ ಮಿತ್ರನ ಬಗೆಗೆ ಮತ್ತು (ಸಿಟ್ಟಾಗಿ) ಹೋಗಿ ತಿರುಗಿ ಬಂದವನ ಬಗೆಗೆ ಅತ್ಯಂತ ಸಾವಧಾನತೆಯಿಂದಿರಬೇಕು. ಏಕೆಂದರೆ ಅವನು ಅತ್ಯಂತ ಕಷ್ಟಕರವಾದ ಶತ್ರುವಾಗಿರುತ್ತಾನೆ.

೧೮೬. गतप्रत्यागते—ಸಿಟ್ಟಿನಿಂದ ಹೋದವನು ಸೇಡು ತೀರಿಸಿಕೊಳ್ಳುವುದಕ್ಕಾಗಿ ತಿರುಗಿ ಬಂದು ಮಿತ್ರನಂತೆ ಇರುತ್ತಾನೆ. ಅವನನ್ನು ನಿಗ್ರಹ ಮಾಡುವುದು ಬಹಳ ಕಠಿಣ.

दण्डव्यूहेन तन्मार्गं यायात्तु शकटेन वा ।
वराहमकराभ्यां वा सूच्या वा गरुडेन वा ॥ १८७ ॥
ದಂಡವ್ಯೂಹೇನ ತನ್ಮಾರ್ಗಂ ಯಾಯಾತ್ತು ಶಕಟೇನ ವಾ ।
ವರಾಹಮಕರಾಭ್ಯಾಂ ವಾ ಸೂಚ್ಯಾ ವಾ ಗರುಡೇನ ವಾ ॥ ೧೮೭ ॥

೧೮೭. ರಾಜನು ದಂಡವ್ಯೂಹ. ಶಟಕವ್ಯೂಹ. ವರಾಹವ್ಯೂಹ. ಮಕರವ್ಯೂಹ. ಸೂಚೀವ್ಯೂಹ ಅಥವಾ ಗರುಡವ್ಯೂಹದಲ್ಲಿ (ತನ್ನ ಸೈನ್ಯವನ್ನು) ನಿಲ್ಲಿಸಿ ಆ ಮಾರ್ಗದಲ್ಲಿ ಹೋಗಬೇಕು.

೧೮೭. दण्डव्यूह—ಮುಂದೆ ಬಲಾಧ್ಯಕ್ಷ, ನಡುವಿನಲ್ಲಿ ರಾಜನು, ಹಿಂದೆ ಸೇನಾಪತಿ ಮತ್ತು ಎರಡೂ ಬದಿಗೂ ಆನೆಗಳು, ಅವುಗಳ ಹತ್ತಿರ ಕುದುರೆಗಳು, ಅವುಗಳ ಹತ್ತಿರ ಕಾಲಾಳುಗಳು—ಹೀಗೆ ಉದ್ದವಾದ ಸೈನ್ಯದ ರಚನೆ ಮಾಡಿದರೆ ಅದಕ್ಕೆ 'ದಂಡವ್ಯೂಹ' ಎಂದು ಹೆಸರು. ಎಲ್ಲ ದಿಕ್ಕಿನಿಂದಲೂ ಶತ್ರುವಿನ ಭಯವಿದ್ದರೆ ಈ ವ್ಯೂಹರಚನೆಯನ್ನು ಮಾಡಬೇಕು.

शकटव्यूह—ಸೈನ್ಯದ ಮುಂದಿನ ಭಾಗ ಚಿಕ್ಕದಾಗಿದ್ದು ಹಿಂದಿನ ಭಾಗ ವಿಶಾಲವಾಗಿದ್ದರೆ ಅದಕ್ಕೆ 'ಶಕಟವ್ಯೂಹ' ಎಂದು ಹೆಸರು. ಹಿಂದಿನಿಂದ ಶತ್ರುವಿನ ಭಯವಿದ್ದರೆ ಈ ವ್ಯೂಹವನ್ನು ರಚಿಸಬೇಕು.

वराहव्यूह—ಸೈನ್ಯದ ಮುಂದಿನ ಹಾಗೂ ಹಿಂದಿನ ಭಾಗಗಳು ಸಣ್ಣದಾಗಿದ್ದು ನಡುವಿನ ಭಾಗ ವಿಸ್ತೀರ್ಣವಾಗಿದ್ದರೆ ಅದಕ್ಕೆ 'ವರಾಹವ್ಯೂಹ' ಎಂದು ಹೆಸರು. ಎರಡೂ ಬದಿಗೂ ಶತ್ರುವಿನ ಭಯವಿದ್ದರೆ ಈ ವ್ಯೂಹವನ್ನು ರಚಿಸಿ ಮುಂದೆ ಹೋಗಬೇಕು.

मकरव्यूह—ಸೈನ್ಯದ ಮುಂದಿನ ಹಾಗೂ ಹಿಂದಿನ ಭಾಗಗಳು ವಿಶಾಲವಾಗಿದ್ದು, ನಡುವಿನ ಭಾಗ ಚಿಕ್ಕದಾಗಿದ್ದರೆ ಅದಕ್ಕೆ 'ಮಕರವ್ಯೂಹ' ಎಂದು ಹೆಸರು. ಮುಂದಿನಿಂದ ಮತ್ತು ಹಿಂದಿನಿಂದ ಭಯವಿದ್ದರೆ ಈ ವ್ಯೂಹವನ್ನು ರಚಿಸಬೇಕು.

सूचीव्यूह—ಇರುವೆಗಳ ಸಾಲಿನಂತೆ ಸೈನಿಕರು ಒಬ್ಬರ ಹಿಂದೆ ಒಬ್ಬರಂತೆ ಹೋಗುವದು, ಮುಂದಿನ ಭಾಗದಲ್ಲಿ ಶೂರ ಸೈನಿಕರಿರುವದು—ಇದಕ್ಕೆ 'ಸೂಚೀವ್ಯೂಹ' ಎಂದು ಹೆಸರು. ಮುಂದಿನಿಂದ ಭಯವಿದ್ದಾಗ (ಪರ್ವತ-ಅರಣ್ಯಗಳ ಚಿಕ್ಕ ದಾರಿಗಳಲ್ಲಿ) ಈ ವ್ಯೂಹರಚನೆ ಮಾಡಬೇಕು.

गरुडव्यूह—ವರಾಹವ್ಯೂಹದಂತೆ ಮುಂದಿನ ಹಾಗೂ ಹಿಂದಿನ ಭಾಗಗಳು ಸಣ್ಣದಾಗಿದ್ದು ನಡುವಿನ ಭಾಗ ಬಹಳ ವಿಸ್ತಾರವಾಗಿದ್ದರೆ ಅದಕ್ಕೆ 'ಗರುಡವ್ಯೂಹ' ಎಂದು ಹೆಸರು. ಎರಡು ಬದಿಗೂ ಅತ್ಯಂತ ಪ್ರಬಲ ಶತ್ರುಗಳಿದ್ದರೆ ಈ ವ್ಯೂಹವನ್ನು ರಚಿಸಿ ಮುಂದೆ ಹೋಗಬೇಕು.

समायां भूमौ दण्डगरुडसूचिभिः यायात्, विषमायां संकटायां शकटमकरवराहैरिति (मे० राघ०).

यतश्च भयमाशङ्केत्ततो विस्तारयेद्बलम् ।
पद्मेन चैव व्यूहेन निविशेत सदा स्वयम् ॥ १८८ ॥
ಯತಶ್ಚ ಭಯಮಾಶಂಕೇತ್ತತೋ ವಿಸ್ತಾರಯೇದ್ ಬಲಮ್ ।
ಪದ್ಮೇನ ಚೈವ ವ್ಯೂಹೇನ ನಿವಿಶೇತ ಸದಾ ಸ್ವಯಮ್ ॥ ೧೮೮ ॥

೧೮೮. ಯಾವ ದಿಕ್ಕಿನಿಂದ (ಶತ್ರುವಿನ) ಭಯವಿದೆಯೆಂದು ಅನಿಸುತ್ತದೆಯೋ. ಅಲ್ಲಿ ಸೈನ್ಯವನ್ನು ಹೆಚ್ಚಿಸಬೇಕು. ತಾನು ಮಾತ್ರ ಯಾವಾಗಲೂ ಪದ್ಮವ್ಯೂಹದಲ್ಲಿಯೇ ಇರಬೇಕು.

೧೮೮. पद्मव्यूह—ಸುತ್ತುಮುತ್ತಲೂ ಮಂಡಲಾಕಾರದ ಸೈನ್ಯರಚನೆ ಮಾಡಿ ಅದರ ಮಧ್ಯದಲ್ಲಿ ರಾಜನಿರಬೇಕು. ಇದಕ್ಕೆ 'ಪದ್ಮವ್ಯೂಹ' ಎಂದು ಹೆಸರು. ಹೀಗಿದ್ದರೆ ರಾಜನಿಗೆ ಯಾವ ದಿಕ್ಕಿನಿಂದಲೂ ಶತ್ರುವಿನ ಭಯವಿರುವುದಿಲ್ಲ.

सेनापतिबलाध्यक्षौ सर्वदिक्षु निवेशयेत् ।
यतश्च भयमाशङ्केत्प्राचीं तां कल्पयेद्दिशम् ॥ १८९ ॥
ಸೇನಾಪತಿಬಲಾಧ್ಯಕ್ಷೌ ಸರ್ವದಿಕ್ಷು ನಿವೇಶಯೇತ್ ।
ಯತಶ್ಚ ಭಯಮಾಶಂಕೇತ್ಪ್ರಾಚೀಂ ತಾಂ ಕಲ್ಪಯೇದ್ದಿಶಮ್ ॥ ೧೮೯ ॥

೧೮೯. ಸೇನಾಪತಿ ಹಾಗೂ ಬಲಾಧ್ಯಕ್ಷರನ್ನು ಎಲ್ಲ ದಿಕ್ಕುಗಳಲ್ಲೂ ಇಡಬೇಕು. ಯಾವ ದಿಕ್ಕಿನಿಂದ (ಶತ್ರುವಿನ) ಭಯವಿದೆಯೆಂದು ಅನಿಸುತ್ತದೆಯೋ. ಅದನ್ನು ಪೂರ್ವವೆಂದು ತಿಳಿದುಕೊಳ್ಳಬೇಕು (ಮತ್ತು ಸೈನ್ಯವನ್ನು ಆ ದಿಕ್ಕಿಗೆ ಮುಖಮಾಡಿ ನಿಲ್ಲಿಸಬೇಕು).

೧೮೯. सेनापतिबलाध्यक्षौ—ಹತ್ತು ಆನೆಗಳ, ಹತ್ತು ಕುದುರೆಗಳ, ಹತ್ತು ರಥಗಳ ಮತ್ತು ಹತ್ತು ಪದಾತಿಗಳ ನಾಯಕನಿಗೆ 'ಪತ್ತಿಕ' ಎಂದು ಹೆಸರು. ಇಂತಹ ಹತ್ತು ಪತ್ತಿಕರ ನಾಯಕನು 'ಸೇನಾಪತಿ' ಮತ್ತು ಇಂತಹ ಹತ್ತು ಸೇನಾಪತಿಗಳ ಮೇಲಿನ ಅಧಿಕಾರಿಯು 'ಬಲಾಧ್ಯಕ್ಷ'.

गुल्मांश्च स्थापयेदाप्तान्कृतसंज्ञान्समन्ततः ।
स्थाने युद्धे च कुशलानभीरूनविकारिणः ॥ १९० ॥
ಗುಲ್ಮಾಂಶ್ಚ ಸ್ಥಾಪಯೇದಾಪ್ತಾನ್ಕೃತಸಂಜ್ಞಾನ್ಸಮಂತತಃ ।
ಸ್ಥಾನೇ ಯುದ್ಧೇ ಚ ಕುಶಲಾನಭೀರೂನವಿಕಾರಿಣಃ ॥ ೧೯೦ ॥

೧೯೦. ಆಪ್ತರಂತಿರುವ. ಸಂಜ್ಞೆಗಳನ್ನು ಬಲ್ಲ. ಸ್ಥಿರವಾಗಿ ನಿಲ್ಲುವವರಲ್ಲಿ ಮತ್ತು ಯುದ್ಧದಲ್ಲಿ ಕುಶಲರಾದ, ಹೆದರಿಕೆಯಿಲ್ಲದ ಮತ್ತು ವಿಕಾರವಿಲ್ಲದ ಪಡೆಗಳನ್ನು ಸುತ್ತುಮುತ್ತ ಇರಿಸಬೇಕು.

೧೯೦. आप्तान्—ಆಪ್ತರಂತೆ ವಿಶ್ವಾಸಾರ್ಹರಾದ. कृतसंज्ञान्—ಶಂಖ, ಭೇರಿ. ಡೋಲು ಮುಂತಾದ ರಣವಾದ್ಯಗಳ ಅಥವಾ ಧ್ವಜಗಳ ಸಂಕೇತಗಳನ್ನು ಬಲ್ಲವರು. ವಿಶಿಷ್ಟವಾದ ಸಂಕೇತ ಶಬ್ದವನ್ನು ಹೇಳುವವನಿಗೆ ಮಾತ್ರ ಒಳಗೆ ಪ್ರವೇಶ ಕೊಡಬೇಕೆಂದು ತಿಳಿದವರು.

अविकारिणः—ಧನಲೋಭದಿಂದ ಶತ್ರುವಿಗೆ ವಶವಾಗದಿರುವವರು. ಶತ್ರುವಿನ ಪ್ರವೇಶವನ್ನು ತಡೆಯುವುದಕ್ಕಾಗಿ ಈ ಪಡೆಗಳನ್ನು ಮುಖ್ಯ ಸೈನ್ಯದಿಂದ ಸ್ವಲ್ಪ ಅಂತರದಲ್ಲಿಡಬೇಕು.

संहतान्योधयेदल्पान्कामं विस्तारयेद्बहून् ।
सूच्या वज्रेण चैवैतान्व्यूहेन व्यूह्य योधयेत् ॥ १९१ ॥

ಸಂಹತಾನ್ ಯೋಧಯೇದಲ್ಪಾನ್ ಕಾಮಂ ವಿಸ್ತಾರಯೇದ್ ಬಹೂನ್ ।
ಸೂಚ್ಯಾ ವಜ್ರೇಣ ಚೈವೈತಾನ್ ವ್ಯೂಹೇನ ವ್ಯೂಹ್ಯ ಯೋಧಯೇತ್ ॥೧೯೧॥

೧೯೧. ತನ್ನಲ್ಲಿ ಸೈನಿಕರು ಅಲ್ಪ ಸಂಖ್ಯೆಯಲ್ಲಿದ್ದರೆ ಅವರನ್ನು ಕೂಡಿಸಿ ಯುದ್ಧ ಮಾಡಿಸಬೇಕು. ಹೆಚ್ಚು ಸಂಖ್ಯೆಯಲ್ಲಿದ್ದರೆ ಅವರನ್ನು ಸಾಕಷ್ಟು ವಿಸ್ತಾರ ಮಾಡಬೇಕು. ಸೂಚೀವ್ಯೂಹದಲ್ಲಿ ಅಥವಾ ವಜ್ರವ್ಯೂಹದಲ್ಲಿ ಅವರನ್ನು ನಿಲ್ಲಿಸಿ ಅವರಿಂದ (ರಾಜನು) ಯುದ್ಧ ಮಾಡಿಸಬೇಕು.

೧೯೧. वज्रव्यूह—ಸೈನ್ಯವನ್ನು ಮೂರು ಭಾಗಗಳಲ್ಲಿ ನಿಲ್ಲಿಸುವುದಕ್ಕೆ 'ವಜ್ರವ್ಯೂಹ' ಎಂದು ಹೆಸರು. (कु० राघ०).

स्यन्दनाश्वैः समे युद्धचेदनूपे नौद्विपैस्तथा ।
वृक्षगुल्मावृते चापैरसिचर्मायुधैः स्थले ॥ १९२ ॥

ಸ್ಯಂದನಾಶ್ವೈಃ ಸಮೇ ಯುದ್ಧ್ಯೇದನೂಪೇ ನೌದ್ವಿಪೈಸ್ತಥಾ ।
ವೃಕ್ಷಗುಲ್ಮಾವೃತೇ ಚಾಪೈರಸಿಚರ್ಮಾಯುಧೈಃ ಸ್ಥಲೇ ॥ ೧೯೨ ॥

೧೯೨. ಸಮವಾದ ಯುದ್ಧಭೂಮಿಯಲ್ಲಿ ರಥ ಮತ್ತು ಕುದುರೆಗಳಿಂದ. ಜಲಮಯ ಪ್ರದೇಶದಲ್ಲಿ ನೌಕೆ ಮತ್ತು ಆನೆಗಳಿಂದ. ಗಿಡಗಂಟೆಗಳಿಂದ ತುಂಬಿದ ಪ್ರದೇಶದಲ್ಲಿ ಬಿಲ್ಲುಗಳಿಂದ ಮತ್ತು (ಕಲ್ಲು ಮುಳ್ಳು ತೆಗೆದ ಸ್ವಚ್ಛ) ನೆಲದ ಮೇಲೆ ಖಡ್ಗ. ಛರ್ಜಿ ಮುಂತಾದ ಶಸ್ತ್ರಗಳಿಂದ ಯುದ್ಧ ಮಾಡಬೇಕು.

೧೯೨. असिचर्मायुधैः—आसन्नयुद्धत्वात् एवं सामर्थ्यप्रदर्शनार्थत्वात् ।

कुरुक्षेत्रांश्च मत्स्यांश्च पञ्चालाञ्शूरसेनजान् ।
दीर्घांल्लघूंश्चैव नरानग्रानीकेषु योजयेत् ॥ १९३ ॥

ಕುರುಕ್ಷೇತ್ರಾಂಶ್ಚ ಮತ್ಸ್ಯಾಂಶ್ಚ ಪಂಚಾಲಾನ್ ಶೂರಸೇನಜಾನ್ ।
ದೀರ್ಘಾಂಲ್ಲಘೂಂಶ್ಚೈವ ನರಾನಗ್ರಾನೀಕೇಷು ಯೋಜಯೇತ್ ॥ ೧೯೩ ॥

೧೯೩. ಕುರುಕ್ಷೇತ್ರ. ಮತ್ಸ್ಯ. ಪಂಚಾಲ ಮತ್ತು ಶೂರಸೇನ ಪ್ರದೇಶಗಳಲ್ಲಿ ಹುಟ್ಟಿದ. ಎತ್ತರವಾದ ಹಾಗೂ ಚುರುಕಾದ ಜನರನ್ನು ಸೈನ್ಯದ ಮುಂಭಾಗದಲ್ಲಿ ಇರಿಸಬೇಕು.

೧೯೩. मत्स्य—ವಿರಾಟ ನಗರದ ಸುತ್ತುಮುತ್ತಿರುವ ಪ್ರದೇಶ

पाञ्चाल—ಕಾನ್ಯಕುಬ್ಜ ನಗರದ ಹತ್ತಿರವಿರುವ ಪ್ರದೇಶ.

शूरसेन—ಮಥುರಾ ನಗರದ ಸುತ್ತುಮುತ್ತಿರುವ ಪ್ರದೇಶ. ಈ ಕುರುಕ್ಷೇತ್ರಾದಿ ಪ್ರದೇಶಗಳು ಗಂಗಾನದಿಯ ಸುತ್ತುಮುತ್ತಿವೆ.

प्रहर्षयेद्बलं व्यूह्य तांश्च सम्यक्परीक्षयेत् ।
चेष्टाश्चैव विजानीयादरीन्योधयतामपि ॥ १९४ ॥

ಪ್ರಹರ್ಷಯೇದ್ಬಲಂ ವ್ಯೂಹ್ಯ ತಾಂಶ್ಚ ಸಮ್ಯಕ್ಪರೀಕ್ಷಯೇತ್ ।
ಚೇಷ್ಟಾಶ್ಚೈವ ವಿಜಾನೀಯಾದರೀನ್ಯೋಧಯತಾಮಪಿ ॥ ೧೯೪ ॥

೧೯೪. ವ್ಯೂಹರಚನೆ ಮಾಡಿ (ರಾಜನು) ಸೈನ್ಯವನ್ನು ಹರ್ಷಗೊಳಿಸಬೇಕು ಮತ್ತು ಆ ಸೈನಿಕರನ್ನು ಸರಿಯಾಗಿ ಪರೀಕ್ಷಿಸಬೇಕು. ಶತ್ರುವಿನ ಕೂಡ ಅವರು ಹೋರಾಡುತ್ತಿರುವಾಗ ಸಹ ಅವರ ವರ್ತನೆಯನ್ನು ತಿಳಿದುಕೊಳ್ಳಬೇಕು.

೧೯೪. प्रहर्षयेत्—यदृच्छया चोपपन्नं स्वर्गद्वारमपावृतम् ।
सुखिनः क्षत्रियाः पार्थ लभन्ते युद्धमीदृशम् । (गीता २.३२)

ಇಂತಹ ಉದಾಹರಣೆಗಳಿಂದ ಮತ್ತು "ನಮ್ಮ ಜಯವಾದರೆ ದೊಡ್ಡ ರಾಜ್ಯ ಸಿಗುವದು, ಯುದ್ಧದಲ್ಲಿ ಮರಣ ಬಂದರೆ ಸ್ವರ್ಗಪ್ರಾಪ್ತಿಯಾಗುವದು"—ಎಂಬಂತಹ ಮಾತುಗಳಿಂದ ಸೈನ್ಯವನ್ನು ಪ್ರೋತ್ಸಾಹಿಸಬೇಕು.

परीक्षयेत्—ಯಾವ ಕಾರಣದಿಂದ ಸೈನಿಕರು ಉತ್ಸಾಹಿತರಾಗುತ್ತಾರೆ ಮತ್ತು ಯಾವ ಕಾರಣದಿಂದ ಅವರು ಖಿನ್ನರಾಗುತ್ತಾರೆ—ಎಂಬುದನ್ನು ವೀಕ್ಷಿಸಬೇಕು.

चेष्टान् विजानीयात्—ಯುದ್ಧ ಮಾಡುವಾಗ ಸೈನಿಕರು ಕಪಟದಿಂದ ವರ್ತಿಸುತ್ತಾರೋ, ಅಥವಾ ನಿಷ್ಕಪಟದಿಂದಲೋ ಎಂಬುದನ್ನು ಗಮನಿಸಬೇಕು.

उपरुध्यारिमासीत राष्ट्रं चास्योपपीडयेत् ।
दूषयेच्चास्य सततं यवसान्नोदकेन्धनम् ॥ १९५ ॥

ಉಪರುಧ್ಯಾರಿಮಾಸೀತ ರಾಷ್ಟ್ರಂ ಚಾಸ್ಯೋಪಪೀಡಯೇತ್ ।
ದೂಷಯೇಚ್ಚಾಸ್ಯ ಸತತಂ ಯವಸಾನ್ನೋದಕೇಂಧನಮ್ ॥ ೧೯೫ ॥

೧೯೫. (ರಾಜನು) ಶತ್ರುವನ್ನು ಸುತ್ತುಗಟ್ಟಿ ನಿಲ್ಲಬೇಕು: ಅವನ ರಾಜ್ಯವನ್ನು ಪೀಡಿಸಬೇಕು; ಮತ್ತು ಅವನ ಹುಲ್ಲು, ಅನ್ನ, ನೀರು ಮತ್ತು ಕಟ್ಟಿಗೆಗಳನ್ನು ಹಾಳು ಮಾಡಬೇಕು.

೧೯೫. उपपीडयेत्—ಲೂಟಿ ಮಾಡಿ ಶತ್ರುವಿನ ದೇಶವನ್ನು ನಾಶಗೊಳಿಸಬೇಕು.

दूषयेत्—ವಿಷ ಮುಂತಾದ ದೂಷಿತ ದ್ರವ್ಯಗಳಿಂದ ಅವನ ಆಹಾರ ಮುಂತಾದವುಗಳನ್ನು ಕೆಡಿಸಬೇಕು ಮತ್ತು ಕಟ್ಟಿಗೆಯನ್ನು (ಇಂಧನವನ್ನು) ಸುಟ್ಟು ಬಿಡಬೇಕು.

भिन्द्याच्चैव तडागानि प्राकारपरिखांस्तथा ।
समवस्कन्दयेच्चैनं रात्रौ वित्रासयेत्तथा ॥ १९६ ॥

ಭಿಂದ್ಯಾಚ್ಚೈವ ತಡಾಗಾನಿ ಪ್ರಾಕಾರಪರಿಖಾಂಸ್ತಥಾ ।
ಸಮವಸ್ಕಂದಯೇಚ್ಚೈನಂ ರಾತ್ರೌ ವಿತ್ರಾಸಯೇತ್ತಥಾ ॥ ೧೯೬ ॥

೧೯೬. (ರಾಜನು) ಕೆರೆಗಳನ್ನೂ ಕೋಟೆಯ ಗೋಡೆಗಳನ್ನೂ ಕಂದಕಗಳನ್ನೂ ಒಡೆಯಬೇಕು. ಅವನ ಮೇಲೆ ದಾಳಿ ನಡೆಸಬೇಕು ಮತ್ತು ರಾತ್ರಿಯಲ್ಲಿ ಅವನನ್ನು ಹೆದರಿಸಬೇಕು.

೧೯೬. परिखाः—ಕೋಟೆಯನ್ನು ಸುತ್ತಿರುವ ಕಂದಕಗಳು. ಕಲ್ಲು, ಮಣ್ಣು ಹಾಕಿ ಅವುಗಳನ್ನು ಮುಚ್ಚಬೇಕು. ಇದರಿಂದ ಕೋಟೆಯಲ್ಲಿ ಪ್ರವೇಶಿಸುವದು ಸುಲಭವಾಗುವದು.

वित्रासयेत्—ರಾತ್ರಿಯ ಸಮಯದಲ್ಲಿ ನಗಾರಿ ಮುಂತಾದ ರಣವಾದ್ಯಗಳನ್ನು ಬಾರಿಸಿ ಶತ್ರುವನ್ನು ಹೆದರಿಸಬೇಕು.

उपजप्यानुपजपेद्बुध्येतैव च तत्कृतम् ।
युक्ते च दैवे युध्येत जयप्रेप्सुरपेतभीः ॥ १९७ ॥

ಉಪಜಪ್ಯಾನುಪಜಪೇದ್ಬುಧ್ಯೇತೈವ ಚ ತತ್ಕೃತಮ್ ।
ಯುಕ್ತೇ ಚ ದೈವೇ ಯುಧ್ಯೇತ ಜಯಪ್ರೇಪ್ಸುರಪೇತಭೀಃ ॥ ೧೯೭ ॥

೧೯೭. (ಶತ್ರುಪಕ್ಷದಲ್ಲಿ) ಭೇದನೀತಿಗೆ ಒಳಗಾಗುವವರನ್ನು ವಶಪಡಿಸಿಕೊಳ್ಳಬೇಕು. ಅವರ ಕೃತಿಯನ್ನು ತಿಳಿದುಕೊಳ್ಳಲೇ ಬೇಕು. ವಿಜಯವನ್ನು ಬಯಸುವ ರಾಜನು ನಿರ್ಭಯನಾಗಿ ಶುಭ ಮುಹೂರ್ತದಲ್ಲಿ (ದೈವವು ಅನುಕೂಲವಿದ್ದಾಗ) ಯುದ್ಧ ಮಾಡಬೇಕು.

೧೯೭. उपजप्यान् उपजपेत्—ಶತ್ರುವಿನ ಕುಲದಲ್ಲಿ ಹುಟ್ಟಿ ಯಾರು ಅವನ ರಾಜ್ಯವನ್ನು ಬಯಸುತ್ತಿದ್ದಾರೋ, ಅಥವಾ ಯಾವ ಅಮಾತ್ಯಾದಿಗಳು ಆ ಶತ್ರುವಿನ ಮೇಲೆ ಸಿಟ್ಟಾಗಿದ್ದಾರೋ ಅವರನ್ನು ರಾಜ್ಯ ಧನಾದಿ ಪ್ರಲೋಭನಗಳಿಂದ ವಶೀಕರಿಸಿಕೊಳ್ಳಬೇಕು.

युक्ते च दैवे—शुभफलदानानुकूले दैवे ग्रहनक्षत्रादौ (राघ).

साम्ना दानेन भेदेन समस्तैरथवा पृथक् ।
विजेतु प्रयतेतारीन्न युद्धेन कदाचन ॥ १९८ ॥
ಸಾಮ್ನಾ ದಾನೇನ ಭೇದೇನ ಸಮಸ್ತೈರಥವಾ ಪೃಥಕ್ ।
ವಿಜೇತುಂ ಪ್ರಯತೇತಾರೀನ್ನ ಯುದ್ಧೇನ ಕದಾಚನ ॥ ೧೯೮ ॥

೧೯೮. ಸಾಮ, ದಾನ ಮತ್ತು ಭೇದ ಈ ಮೂರು ಉಪಾಯಗಳನ್ನು ಒಟ್ಟಿಗೆ ಅಥವಾ ಪ್ರತ್ಯೇಕವಾಗಿ ಬಳಸಿ (ರಾಜನು) ಶತ್ರುಗಳನ್ನು ಜಯಿಸಲು ಪ್ರಯತ್ನ ಮಾಡಬೇಕು; ಯಾವಾಗಲೂ ಯುದ್ಧದಿಂದಲ್ಲ.

೧೯೮. ಆದರದಿಂದ ವರ್ತಿಸುವದು, ಹಿತೋಕ್ತಿಯನ್ನು ಹೇಳುವದು ಸಾಮ; ಆನೆ, ಕುದುರೆ, ರಥ, ಸುವರ್ಣ ಮುಂತಾದವುಗಳನ್ನು ಕೊಡುವದು ದಾನ; ಶತ್ರುವಿನ ಅಮಾತ್ಯಾದಿಗಳನ್ನು ಪ್ರಲೋಭನೆಗಳಿಂದ ವಶೀಕರಿಸಿಕೊಳ್ಳುವುದು ಇದು ಭೇದ. ಈ ಉಪಾಯಗಳ ಪ್ರಯೋಗವನ್ನು ಮೊದಲು ಮಾಡಬೇಕು. ಒಮ್ಮೆಲೇ ಯುದ್ಧವನ್ನು ಹೂಡಬಾರದು.

अनित्यो विजयो यस्माद्दृश्यते युध्यमानयोः ।
पराजयश्च संग्रामे तस्माद्युद्धं विवर्जयेत् ॥ १९९ ॥
ಅನಿತ್ಯೋ ವಿಜಯೋ ಯಸ್ಮಾದ್ದೃಶ್ಯತೇ ಯುಧ್ಯಮಾನಯೋಃ ।
ಪರಾಜಯಶ್ಚ ಸಂಗ್ರಾಮೇ ತಸ್ಮಾದ್ಯುದ್ಧಂ ವಿವರ್ಜಯೇತ್ ॥ ೧೯೯ ॥

೧೯೯. ಇಬ್ಬರು ಯುದ್ಧ ಮಾಡುತ್ತಿದ್ದಾಗ ಯುದ್ಧದಲ್ಲಿ ವಿಜಯವು ಹಾಗೂ ಪರಾಜಯವು ಯಾರದೆಂಬುದು ಅನಿಶ್ಚಿತವೆಂದು ತೋರುತ್ತದೆ. ಆದ್ದರಿಂದ ಯುದ್ಧವನ್ನು ಬಿಡಬೇಕು.

೧೯೯. ಯಾವ ರಾಜನ ಹತ್ತಿರ ಹೆಚ್ಚು ಸೈನ್ಯ ಇರುವದೋ, ಅವನು ಗೆಲ್ಲುತ್ತಾನೆಂದು ನಿಶ್ಚಿತವಾಗಿ ಹೇಳುವದು ಸಾಧ್ಯವಿಲ್ಲ. ಆದ್ದರಿಂದ ಶಕ್ಯವಾದಷ್ಟು ಯುದ್ಧವನ್ನು ಬಿಡಬೇಕು.

त्रयाणामप्युपायानां पूर्वोक्तानामसंभवे ।
तथायुध्येत संपन्नो विजयेत रिपून्यथा ॥ २०० ॥
ತ್ರಯಾಣಾಮಪ್ಯುಪಾಯಾನಾಂ ಪೂರ್ವೋಕ್ತಾನಾಮಸಂಭವೇ ।
ತಥಾಯುಧ್ಯೇತ ಸಂಪನ್ನೋ ವಿಜಯೇತ ರಿಪೂನ್ಯಥಾ ॥ ೨೦೦ ॥

೨೦೦. ಮೇಲೆ ಹೇಳಿದ ಮೂರು ಉಪಾಯಗಳೂ ಫಲಕಾರಿಗಳಾಗದಿದ್ದರೆ, (ಸೈನ್ಯ) ಸಂಪನ್ನನಾದ ರಾಜನು ಶತ್ರುಗಳನ್ನು ಗೆಲ್ಲುವಂತೆ (ಪರಾಕ್ರಮದಿಂದ) ಯುದ್ಧ ಮಾಡಬೇಕು.

೨೦೦. विजयेत—जये अर्थलाभः, अभिमुखमरणे च स्वर्गप्राप्तिः ।
निःसंदिग्धे तु पराजये युद्धादपसरणं साधीयः (कु०).

जित्वा संपूजयेद्देवान्ब्राह्मणांश्चैव धार्मिकान् ।
प्रदद्यात्परिहारांश्च ख्यापयेदभयानि च ॥ २०१ ॥

ಜಿತ್ವಾ ಸಂಪೂಜಯೇದ್ದೇವಾನ್ ಬ್ರಾಹ್ಮಣಾಂಶ್ಚೈವ ಧಾರ್ಮಿಕಾನ್ ।
ಪ್ರದದ್ಯಾತ್ಪರಿಹಾರಾಂಶ್ಚ ಖ್ಯಾಪಯೇದಭಯಾನಿ ಚ ॥ ೨೦೧ ॥

೨೦೧. ಜಯವನ್ನು ಗಳಿಸಿ (ಶತ್ರು ರಾಜ್ಯದೊಳಗಿನ) ದೇವರನ್ನು ಹಾಗೂ ಧರ್ಮನಿಷ್ಠ ಬ್ರಾಹ್ಮಣರನ್ನು (ಗೆದ್ದ ರಾಜನು) ಪೂಜಿಸಬೇಕು; (ಯುದ್ಧದಿಂದ ನೊಂದ ಜನರಿಗೆ) ಪರಿಹಾರಗಳನ್ನು ಕೊಡಬೇಕು ಮತ್ತು ಅಭಯವನ್ನು ಘೋಷಿಸಬೇಕು.

೨೦೧. संपूजयेत्—ಯುದ್ಧದಲ್ಲಿ ಗಳಿಸಿದ ಸಂಪತ್ತಿನ ಒಂದು ಭಾಗವನ್ನು ಕೊಟ್ಟು ಸತ್ಕರಿಸಬೇಕು. ಹೋಲಿಸಿರಿ:—

नातः परतरो धर्मो नृपाणां यद्रणार्जितम् ।
विप्रेभ्यो दीयते द्रव्यं प्रजाभ्यश्चाभयं सदा ॥ —याज्ञवल्क्यस्मृति.

परिहारान्—करपरित्यागान् (न०).
—अग्रहारान् (स० राम०).

ख्यापयेत् अभयानि—ಸೋತ ಶತ್ರುರಾಜನ ರಾಜ್ಯದಲ್ಲಿ ಯಾರು ಸ್ವಾಮಿಭಕ್ತಿಯಿಂದ ಶತ್ರು ರಾಜನಿಗೆ ಸಹಾಯ ಮಾಡಿದರೋ, ಅವರೂ ನಿರ್ಭಯತೆಯಿಂದ ತಮ್ಮ ತಮ್ಮ ವ್ಯವಹಾರಗಳನ್ನು ನಡೆಸಲೆಂದು ಗೆದ್ದ ರಾಜನು ನಗಾರಿಗಳ ಧ್ವನಿಸಹಿತವಾಗಿ ಜನರಿಗೆ ಗೊತ್ತಾಗುವಂತೆ ಪ್ರಕಟಗೊಳಿಸಬೇಕು.

सर्वेषां तु विदित्वैषां समासेन चिकीर्षितम् ।
स्थापयेत्तत्र तद्वंश्यं कुर्याच्च समयक्रियाम् ॥ २०२ ॥

ಸರ್ವೇಷಾಂ ತು ವಿದಿತ್ವೈಷಾಂ ಸಮಾಸೇನ ಚಿಕೀರ್ಷಿತಮ್ ।
ಸ್ಥಾಪಯೇತ್ತತ್ರ ತದ್ವಂಶ್ಯಂ ಕುರ್ಯಾಚ್ಚ ಸಮಯಕ್ರಿಯಾಮ್ ॥ ೨೦೨ ॥

೨೦೨. ಅವರೆಲ್ಲರ ಅಭಿಲಾಷೆಯನ್ನು ತಿಳಿದುಕೊಂಡು ಆ (ಶತ್ರುವಿನ) ವಂಶದವನಿಗೆ ಅಲ್ಲಿ (ರಾಜನು) ಪಟ್ಟಗಟ್ಟಬೇಕು ಮತ್ತು ಅವನಿಗೆ ನಿಯಮಗಳನ್ನು ಹಾಕಿಕೊಡಬೇಕು.

೨೦೨. सर्वेषां चिकीर्षितम्—ಆ ಶತ್ರುರಾಜನ, ಅವನ ಅಮಾತ್ಯರ ಹಾಗೂ ಪ್ರಜೆಗಳ ಅಭಿಪ್ರಾಯವನ್ನು (ತಿಳಿದುಕೊಳ್ಳಬೇಕು).

समयक्रियाम्—"ನೀನು ಇಂತಹ ಕಾರ್ಯಗಳನ್ನು ಮಾಡಬೇಕು. ಇಂತಹ ಕಾರ್ಯಗಳನ್ನು ಮಾಡಬಾರದು" ಎಂಬ ಶರ್ತಗಳನ್ನು ಅವನಿಗೆ ಹಾಕಬೇಕು. ಜನಾಭಿಪ್ರಾಯವನ್ನು ಗ್ರಹಿಸಬೇಕೆಂಬ ಪ್ರಜಾರಾಜ್ಯ ತತ್ತ್ವಾಂಶವಿಲ್ಲಿ ಉಕ್ತವಾಗಿರುವುದು ಗಮನಾರ್ಹ.

प्रमाणानि च कुर्वीत तेषां धर्म्यान्यथोदितान् ।
रत्नैश्च पूजयेदेनं प्रधानपुरुषैः सह ॥ २०३ ॥
ಪ್ರಮಾಣಾನಿ ಚ ಕುರ್ವೀತ ತೇಷಾಂ ಧರ್ಮ್ಯಾನ್ಯಥೋದಿತಾನ್ ।
ರತ್ನೈಶ್ಚ ಪೂಜಯೇದೇನಂ ಪ್ರಧಾನ ಪುರುಷೈಃ ಸಹ ॥ ೨೦೩ ॥

೨೦೩. ಅವರ ಶಾಸ್ತ್ರಗಳಲ್ಲಿ ಹೇಳಿದ ಧಾರ್ಮಿಕ ಆಚಾರಗಳನ್ನು ಪ್ರಮಾಣಗಳೆಂದು (ಗೆದ್ದ ರಾಜನು) ಸ್ವೀಕರಿಸಬೇಕು. (ಪಟ್ಟಾಭಿಷಿಕ್ತನಾದ) ಆ ರಾಜನನ್ನು ಅಮಾತ್ಯಾದಿ ಮುಖ್ಯ ಜನರ ಜೊತೆಗೆ ರತ್ನಗಳಿಂದ ಸತ್ಕರಿಸಬೇಕು.

೨೦೩. ಆ ದೇಶದಲ್ಲಿ ಪ್ರಚಲಿತವಿದ್ದ ಧರ್ಮಕಾರ್ಯಗಳಿಗೆ 'ದೇಶಧರ್ಮ'ವೆಂದು ಮನ್ನಣೆ ಕೊಡಬೇಕು. ಹೊಸ ರಾಜನಿಗೆ ರತ್ನಾದಿಗಳನ್ನು ಕೊಟ್ಟು ಗೌರವಿಸಬೇಕು. ವರ್ಣಾಶ್ರಮ ಧರ್ಮಗಳಷ್ಟೇ ದೇಶಧರ್ಮ, ಕುಲಧರ್ಮಗಳೂ ಪಾಲನೀಯವೆಂಬ ಅಂತಾರಾಷ್ಟ್ರೀಯ ನೀತಿ ಮನೂಕ್ತ.

आदानमप्रियकरं दानं च प्रियकारकम् ।
अभीप्सितानामर्थानां काले युक्तं प्रशस्यते ॥ २०४ ॥
ಆದಾನಮಪ್ರಿಯಕರಂ ದಾನಂ ಚ ಪ್ರಿಯಕಾರಕಮ್ ।
ಅಭೀಪ್ಸಿತಾನಾಮರ್ಥಾನಾಂ ಕಾಲೇ ಯುಕ್ತಂ ಪ್ರಶಸ್ಯತೇ ॥ ೨೦೪ ॥

೨೦೪. (ಯಾರಿಂದಾಗಲಿ) ಅವರಿಗೆ ಪ್ರಿಯ ಎನ್ನಿಸಿದ ವಸ್ತುಗಳನ್ನು ತೆಗೆದುಕೊಳ್ಳುವುದು ಅಪ್ರಿಯಕರ; ಅಂಥ ವಸ್ತುಗಳನ್ನು ಅವರಿಗೆ ಕೊಡುವುದು ಪ್ರಿಯಕರ. ಆದರೆ (ವಿಶೇಷ ಸಂದರ್ಭಗಳಲ್ಲಿ ಅವರವರಿಗೆ) ಇಷ್ಟವಾದ್ದದನ್ನು ಆಯಾ ಕಾಲದಲ್ಲಿ ಯೋಗ್ಯ ರೀತಿಯಿಂದ ಕೊಡುವುದು ಪ್ರಶಸ್ತ.

೨೦೪. ಯುದ್ಧ ಮಾಡಿ ಶತ್ರುರಾಜ್ಯವನ್ನು ಗೆಲ್ಲುವುದೂ ಯೋಗ್ಯ; ಮತ್ತು ಅಲ್ಲಿಯ ಹೊಸ ರಾಜನಿಗೆ ರತ್ನಾದಿಗಳಿಂದ ಸತ್ಕರಿಸುವುದೂ ಯೋಗ್ಯ.

सर्वं कर्मेदमायत्तं विधाने दैवमानुषे ।
तयोर्दैवमचिन्त्यं तु मानुषे विद्यते क्रिया ॥ २०५ ॥

ಸರ್ವಂ ಕರ್ಮೇದಮಾಯತ್ತಂ ವಿಧಾನೇ ದೈವಮಾನುಷೇ ।
ತಯೋರ್ದೈವಮಚಿಂತ್ಯಂ ತು ಮಾನುಷೇ ವಿದ್ಯತೇ ಕ್ರಿಯಾ ॥ ೨೦೫ ॥

೨೦೫. ಈ ಎಲ್ಲ ಕೆಲಸವೂ ದೈವದ ಹಾಗೂ ಮನುಷ್ಯನ ಕಾರ್ಯವನ್ನು ಅವಲಂಬಿಸಿರುವದು. ಇವುಗಳಲ್ಲಿ ದೈವವು ಅಚಿಂತ್ಯವಾಗಿದೆ; ಆದರೆ ಮನುಷ್ಯನ ಕ್ರಿಯೆಯ ಬಗೆಗೆ ಪರ್ಯಾಲೋಚನೆ ಮಾಡಬಹುದು.

೨೦೫. ದೈವವು ಪೂರ್ವಜನ್ಮದ ಕರ್ಮವನ್ನವಲಂಬಿಸಿರುವದರಿಂದ ಯಾವಾಗ ಏನಾಗಬಹುದೆಂಬುದನ್ನು ಹೇಳುವದು ಸಾಧ್ಯವಾಗುವದಿಲ್ಲ. ಆದ್ದರಿಂದ ಸ್ವಕಾರ್ಯದಿಂದಲೇ ಸಿದ್ಧಿಯನ್ನು ಪಡೆಯಲು ಪ್ರಯತ್ನಿಸಬೇಕು.

सह वाऽपि व्रजेद्युक्तः संधिं कृत्वा प्रयत्नतः ।
मित्रं हिरण्यं भूमिं वा संपश्यंस्त्रिविधं फलम् ॥ २०६ ॥

ಸಹ ವಾಪಿ ವ್ರಜೇದ್ಯುಕ್ತಃ ಸಂಧಿಂ ಕೃತ್ವಾ ಪ್ರಯತ್ನತಃ ।
ಮಿತ್ರಂ ಹಿರಣ್ಯಂ ಭೂಮಿಂ ವಾ ಸಂಪಶ್ಯಂಸ್ತ್ರಿವಿಧಂ ಫಲಮ್ ॥ ೨೦೬ ॥

೨೦೬. (ಯುದ್ಧಕ್ಕೆ) ಉದ್ಯುಕ್ತನಾದ ರಾಜನು (ಶತ್ರುವಿನ) ಜೊತೆಗೆ ಪ್ರಯತ್ನದಿಂದ ಸಂಧಿಯನ್ನು ಮಾಡಿಕೊಂಡು ಮಿತ್ರ, ಸುವರ್ಣ ಮತ್ತು ಭೂಮಿಗಳು (ಯುದ್ಧದ) ಮೂರು ವಿಧದ ಫಲಗಳೆಂದು ಭಾವಿಸಿ (ತನ್ನ ರಾಜ್ಯಕ್ಕೆ) ಹೋಗಬೇಕು.

೨೦೬. ಶತ್ರುರಾಜನು ಸಂಪತ್ತು ಮತ್ತು ತನ್ನ ರಾಜ್ಯದ ಒಂದು ಭಾಗವನ್ನು ಕೊಟ್ಟು ಸಂಧಿಮಾಡಲು ಬಯಸುತ್ತಿದ್ದರೆ ರಾಜನು ಯುದ್ಧಮಾಡುವ ಹಟ ಹಿಡಿಯದೆ ಮಿತ್ರತ್ವವನ್ನು ಕಾಯ್ದುಕೊಳ್ಳಬೇಕು. (ಕು. ಸ. ಗೋ.)

ಮೇಧಾತಿಥಿಯ ಭಾಷ್ಯದಲ್ಲಿ ೨೦೬ ರಿಂದ ೨೧೧ ರ ವರೆಗಿನ ಶ್ಲೋಕಗಳಿಲ್ಲ.

पार्ष्णिग्राहं च संप्रेक्ष्य तथाक्रन्दं च मण्डले ।
मित्रादथाप्यमित्राद्वा यात्राफलमवाप्नुयात् ॥ २०७ ॥

ಪಾರ್ಷ್ಣಿಗ್ರಾಹಂ ಚ ಸಂಪ್ರೇಕ್ಷ್ಯ ತಥಾಕ್ರಂದಂ ಚ ಮಂಡಲೇ ।
ಮಿತ್ರಾದಥಾಪ್ಯಮಿತ್ರಾದ್ವಾ ಯಾತ್ರಾಫಲಮವಾಪ್ನುಯಾತ್ ॥ ೨೦೭ ॥

೨೦೭. ರಾಜಮಂಡಲದಲ್ಲಿ 'ಪಾರ್ಷ್ಣಿಗ್ರಾಹ' ಮತ್ತು 'ಆಕ್ರಂದ'ರ ಬಗೆಗೆ ಎಚ್ಚರಿಕೆಯನ್ನು ವಹಿಸಿ ರಾಜನು ಮಿತ್ರನಾದ ಅರಸನಿಂದ ಅಥವಾ ಶತ್ರುವಾಗಿಯೇ ಉಳಿದಿರುವ ಅರಸನಿಂದ ಯುದ್ಧಯಾತ್ರೆಯ ಫಲವನ್ನು ಪಡೆಯಬೇಕು.

೨೦೭. ರಾಜನು ಯುದ್ಧಯಾತ್ರೆಗಾಗಿ ಹೋದಾಗ ಹಿಂದಿನಿಂದ ಅವನ ರಾಜ್ಯದ ಮೇಲೆ ಯಾವ ಶತ್ರು ಅರಸನು ದಾಳಿ ಮಾಡುತ್ತಾನೋ, ಅವನು 'ಪಾರ್ಷ್ಣಿಗ್ರಾಹ'; ಮತ್ತು ಇವನನ್ನು ಯಾವ ಮಿತ್ರರಾಜ ತಡೆಯುತ್ತಾನೋ ಅವನು 'ಆಕ್ರಂದ'. ರಾಜನು ಯುದ್ಧಕ್ಕಾಗಿ ಹೊರಡುವ ಮುನ್ನ ಪಾರ್ಷ್ಣಿಗ್ರಾಹನು ತನ್ನ ರಾಜ್ಯದ ಮೇಲೆ ದಾಳಿ ನಡೆಸಲಿಕ್ಕಿಲ್ಲ ಮತ್ತು ಅವನು ದಾಳಿ ಮಾಡಬೇಕೆಂದು ಯೋಚಿಸಿದರೂ ಆಕ್ರಂದನು ಅವನನ್ನು ತಡೆಯಬಹುದು—ಎಂಬುದನ್ನು ನಿಶ್ಚಯಿಸಿಕೊಂಡಿರಬೇಕು.

हिरण्यभूमिसंप्राप्त्या पार्थिवो न तथैधते ।
यथा मित्रं ध्रुवं लब्ध्वा कृशमप्यायतिक्षमम् ॥ २०८ ॥
ಹಿರಣ್ಯಭೂಮಿ-ಸಂಪ್ರಾಪ್ತ್ಯಾ ಪಾರ್ಥಿವೋ ನ ತಥೈಧತೇ ।
ಯಥಾ ಮಿತ್ರಂ ಧ್ರುವಂ ಲಬ್ಧ್ವಾ ಕೃಶಮಪ್ಯಾಯತಿಕ್ಷಮಮ್ ॥ ೨೦೮ ॥

೨೦೮. (ತತ್ಕಾಲದಲ್ಲಿ) ದುರ್ಬಲನಾಗಿದ್ದರೂ ಯಾವನು ಭವಿಷ್ಯತ್ತಿನಲ್ಲಿ ಶಕ್ತಿವಂತನಾಗಬಹುದೋ, ಅಂತಹ ಸ್ಥಿರ ಮಿತ್ರನ ಪ್ರಾಪ್ತಿಯಿಂದ ರಾಜನಿಗೆ ಯಾವ ಸಮೃದ್ಧಿಯು ಪ್ರಾಪ್ತವಾಗುತ್ತದೆಯೋ, ಅದು ಸುವರ್ಣ ಹಾಗೂ ಭೂಮಿಯ ಪ್ರಾಪ್ತಿಯಿಂದಾಗುವದಿಲ್ಲ.

೨೦೮. ಹೆಚ್ಚು ಧನವನ್ನು ಹಾಗೂ ಭೂಮಿಯನ್ನು ಬಯಸದೆ ರಾಜನು ಸ್ಥಿರರಾದ ಮಿತ್ರರನ್ನು ಗಳಿಸಬೇಕು. ಹೋಲಿಸಿರಿ:—

हिरण्यभूमिलाभेभ्यो मित्रलब्धिर्वरा यतः ।
अतो यतेत तत्प्राप्त्यै रक्षेत्सत्यं समाहितः ॥
—याज्ञवल्क्यस्मृति १·३५२.

धर्मज्ञं च कृतज्ञं च तुष्टप्रकृतिमेव च ।
अनुरक्तं स्थिरारम्भं लघु मित्रं प्रशस्यते ॥ २०९ ॥
ಧರ್ಮಜ್ಞಂ ಚ ಕೃತಜ್ಞಂ ಚ ತುಷ್ಟಪ್ರಕೃತಿಮೇವ ಚ ।
ಅನುರಕ್ತಂ ಸ್ಥಿರಾರಂಭಂ ಲಘು ಮಿತ್ರಂ ಪ್ರಶಸ್ಯತೇ ॥ ೨೦೯ ॥

೨೦೯. ಧರ್ಮವನ್ನು ತಿಳಿದಿರುವ ಮಾಡಿದ ಉಪಕಾರವನ್ನು ಸ್ಮರಿಸುವ. ಸಂತುಷ್ಟ ಸ್ವಭಾವವುಳ್ಳ. ಪ್ರಿಯನಾದ. ದೃಢನಿಶ್ಚಯದಿಂದ ಕಾರ್ಯವನ್ನು ಪ್ರಾರಂಭಿಸುವ ಹಾಗೂ ಚುರುಕಾದ ಮಿತ್ರನು ಪ್ರಶಂಸನೀಯನಾಗಿರುತ್ತಾನೆ.

೨೦೯. लघुः—शीघ्रकारी, स्वस्मात् न्यूनम् इति वा (न०).
क्षुद्रम् अपि इत्यर्थः (स०).
लघु इति अनायाससाध्यता (राघ०).

प्राज्ञं कुलीनं शूरं च दक्षं दातारमेव च ।
कृतज्ञं धृतिमन्तं च कष्टमाहुररिं बुधाः ॥ २१० ॥

ಪ್ರಾಜ್ಞಂ ಕುಲೀನಂ ಶೂರಂ ಚ ದಕ್ಷಂ ದಾತಾರಮೇವ ಚ ।
ಕೃತಜ್ಞಂ ಧೃತಿಮಂತಂ ಚ ಕಷ್ಟಮಾಹುರರಿಂ ಬುಧಾಃ ॥ ೨೧೦ ॥

೨೧೦. ವಿದ್ವಾಂಸನೂ ಕುಲೀನನೂ ಶೂರನೂ ದಕ್ಷನೂ ದಾತಾರನೂ ಉಪಕಾರವನ್ನು ಸ್ಮರಿಸುವವನೂ ಧೈರ್ಯಶಾಲಿಯೂ ಆದ ಶತ್ರುವನ್ನು (ಗೆಲ್ಲುವುದು) ಬಹಳ ಕಷ್ಟಕರವೆಂದು ಜ್ಞಾನಿಗಳು ಹೇಳುತ್ತಾರೆ,

೨೧೦. ಸದ್ಗುಣ ಪರಿಪೂರ್ಣನಾದ ಇಂತಹ ಶತ್ರುವಿನ ಜೊತೆಗೆ ಯುದ್ಧ ಮಾಡದೆ ರಾಜನು ಸಂಧಿಯನ್ನು ಮಾಡಿಕೊಳ್ಳಬೇಕು.

आर्यता पुरुषज्ञानं शौर्यं करुणवेदिता ।
स्थौललक्ष्यं च सततमुदासीनगुणोदयः ॥ २११ ॥

ಆರ್ಯತಾ ಪುರುಷಜ್ಞಾನಂ ಶೌರ್ಯಂ ಕರುಣವೇದಿತಾ ।
ಸ್ಥೌಲಲಕ್ಷ್ಯಂ ಚ ಸತತಮುದಾಸೀನಗುಣೋದಯಃ ॥ ೨೧೧ ॥

೨೧೧. ಸಾಧುತ್ವ, (ವಿಶಿಷ್ಟರಾದ) ಪುರುಷರನ್ನು ಗುರುತಿಸುವ ಶಕ್ತಿ, ಶೌರ್ಯ, ದಯಾಮಯ ಸ್ವಭಾವ ಮತ್ತು ಹೆಚ್ಚಿನ ದಾನಶೂರತನ—ಇದು ಉದಾಸೀನನ ಗುಣ ಸಮೂಹ ಇರುವದು.

೨೧೧. स्थौललक्ष्यं—दातृत्वं (स० कु० राघ० न० राम०); असूक्ष्मदर्शित्वं (मे० गो०). ಇಂತಹ ಗುಣವುಳ್ಳ 'ಉದಾಸೀನ' ರಾಜನನ್ನು ಆಶ್ರಯಿಸಬೇಕು.

क्षेम्यां सस्यप्रदां नित्यं पशुवृद्धिकरीमपि ।
परित्यजेन्नृपो भूमिमात्मार्थमविचारयन् ॥ २१२ ॥

ಕ್ಷೇಮ್ಯಾಂ ಸಸ್ಯಪ್ರದಾಂ ನಿತ್ಯಂ ಪಶುವೃದ್ಧಿಕರೀಮಪಿ ।
ಪರಿತ್ಯಜೇನ್ನೃಪೋ ಭೂಮಿಮಾತ್ಮಾರ್ಥಮವಿಚಾರಯನ್ ॥ ೨೧೨ ॥

೨೧೨. ಕ್ಷೇಮಕರವಾದ, ಯಾವಾಗಲೂ (ಒಳ್ಳೆಯ) ಬೆಳೆಯನ್ನು ಕೊಡುವ ಪಶುಗಳನ್ನು ವೃದ್ಧಿಗೊಳಿಸುವ (ಸಮೃದ್ಧವಾದ) ಭೂಮಿಯನ್ನು ಕೂಡ ರಾಜನು ವಿಚಾರ ಮಾಡದೆ ತನ್ನ ರಕ್ಷಣೆಗಾಗಿ (ಕೊಟ್ಟು) ಬಿಡಬೇಕು.

आपदर्थं धनं रक्षेद्दारान्रक्षेद्धनैरपि ।
आत्मानं सततं रक्षेद्दारैरपि धनैरपि ॥ २१३ ॥
ಆಪದರ್ಥಂ ಧನಂ ರಕ್ಷೇದ್ದಾರಾನ್ರಕ್ಷೇದ್ಧನೈರಪಿ ।
ಆತ್ಮಾನಂ ಸತತಂ ರಕ್ಷೇದ್ದಾರೈರಪಿ ಧನೈರಪಿ ॥ ೨೧೩ ॥

೨೧೩. ಆಪತ್ತಿನ ನಿವಾರಣೆಗಾಗಿ ಧನವನ್ನು ರಕ್ಷಿಸಬೇಕು ಧನಗಳನ್ನು ಸಹ ಕೊಟ್ಟು ಪತ್ನಿಯನ್ನು ರಕ್ಷಿಸಬೇಕು. (ಆದರೆ ಅತ್ಯಂತ ಕಠಿನ ಪ್ರಸಂಗ ಬಂದಾಗ) ಧನವನ್ನು ಹಾಗೂ ಪತ್ನಿಯನ್ನು ಸಹ ತ್ಯಜಿಸಿ ಯಾವಾಗಲೂ ತನ್ನನ್ನು ರಕ್ಷಿಸಿಕೊಳ್ಳಬೇಕು.

೨೧೨-೩. ತನ್ನ ರಕ್ಷಣೆಯನ್ನು ಮಾಡಿಕೊಳ್ಳುವದು. ಇದು ಅತ್ಯಂತ ಮಹತ್ವದ್ದು ಇದಕ್ಕಾಗಿ ಭೂಮಿ. ದ್ರವ್ಯ ಮುಂತಾದುವುಗಳನ್ನು ಬಿಟ್ಟು ಬಿಡಬೇಕಾಗಬಹುದು. ಅಶಾಸ್ತ್ರೀಯ ಮರಣವುಂಟಾಗುವ ಸಂದರ್ಭ ಬಂದಲ್ಲಿ ಅದರಿಂದ ತಪ್ಪಿಸಿಕೊಳ್ಳಲು, ಅಗತ್ಯವಾದರೆ, ಇಂಥ ತ್ಯಾಗ ಮಾಡಬೇಕು. (ಕು.).

सह सर्वाः समुत्पन्नाः प्रसमीक्ष्यापदो भृशम् ।
संयुक्तांश्च वियुक्तांश्च सर्वोपायान्सृजेद्बुधः ॥ २१४ ॥
ಸಹ ಸರ್ವಾಃ ಸಮುತ್ಪನ್ನಾಃ ಪ್ರಸಮೀಕ್ಷ್ಯಾಪದೋ ಭೃಶಮ್ ।
ಸಂಯುಕ್ತಾಂಶ್ಚ ವಿಯುಕ್ತಾಂಶ್ಚ ಸರ್ವೋಪಾಯಾನ್ಸೃಜೇದ್ಬುಧಃ ॥ ೨೧೪ ॥

೨೧೪. ಎಲ್ಲ ಆಪತ್ತುಗಳೂ ಒಮ್ಮೆಲೇ ಉಂಟಾದುದನ್ನು ನೋಡಿ ಜಾಣನಾದ ರಾಜನು ಎಲ್ಲ ಉಪಾಯಗಳನ್ನೂ ಸಂಯುಕ್ತವಾಗಿ ಅಥವಾ ಪ್ರತ್ಯೇಕವಾಗಿ ಯೋಜಿಸಬೇಕು.

೨೧೪. ಕೋಶವು ಕ್ಷೀಣವಾಗುವದು. ಪ್ರಜೆಗಳು ಹಾಗೂ ಅಮಾತ್ಯರು ಅಸಂತುಷ್ಟರಾಗುವದು. ಶತ್ರುಗಳ ಪೀಡೆ ಉದ್ಭವಿಸುವದು — ಇಂತಹ ಅನೇಕ ಆಪತ್ತುಗಳು ಒಮ್ಮೆಲೇ ಉಂಟಾದಾಗ ರಾಜನು ಹೆದರಬಾರದು. ಸಾಮಾದಿ ಉಪಾಯಗಳ ಪ್ರಯೋಗವನ್ನು ಮಾಡಬೇಕು.

उपेतारमुपेयं च सर्वोपायांश्च कृत्स्नशः ।
एतत्त्रयं समाश्रित्य प्रयतेतार्थसिद्धये ॥ २१५ ॥
ಉಪೇತಾರಮುಪೇಯಂ ಚ ಸರ್ವೋಪಾಯಾಂಶ್ಚ ಕೃತ್ಸ್ನಶಃ ।
ಏತತ್ತ್ರಯಂ ಸಮಾಶ್ರಿತ್ಯ ಪ್ರಯತೇತಾರ್ಥಸಿದ್ಧಯೇ ॥ ೨೧೫ ॥

೨೧೫. ಉಪಾಯಗಳನ್ನು ಯೋಜಿಸುವ (ರಾಜನು). ಮಾಡಬೇಕಾದ ಕಾರ್ಯ ಮತ್ತು ಎಲ್ಲ ಉಪಾಯಗಳು—ಇವುಗಳನ್ನು ಸಮಗ್ರವಾಗಿ ಆಶ್ರಯಿಸಿ ಕಾರ್ಯಸಿದ್ಧಿಗಾಗಿ ಪ್ರಯತ್ನವನ್ನು ಮಾಡಬೇಕು.

೨೧೫. उपेतारम्—उद्यमफलयुक्तम् आत्मानम् (गो० कु० स० राघ० मे० राम०). —अमात्यादिकं वर्गं (न०).
समाश्रित्य—मनसा बलाबलादिद्वारा निश्चित्य (स० राम०).
—अवलम्ब्य (कु० गो०).

एवं सर्वमिदं राजा सह संमन्त्र्य मन्त्रिभिः ।
व्यायम्याप्लुत्य मध्याह्ने भोक्तुमन्तःपुरं विशेत् ॥ २१६ ॥
ಏವಂ ಸರ್ವಮಿದಂ ರಾಜಾ ಸಹ ಸಂಮಂತ್ರ್ಯ ಮಂತ್ರಿಭಿಃ ।
ವ್ಯಾಯಮ್ಯಾಪ್ಲುತ್ಯ ಮಧ್ಯಾಹ್ನೇ ಭೋಕ್ತುಮಂತಃ ಪುರಂ ವಿಶೇತ್ ॥ ೨೧೬ ॥

೨೧೬. ಹೀಗೆ ಇದೆಲ್ಲವನ್ನು ಮಂತ್ರಿಗಳೊಡನೆ ಚಿಂತಿಸಿ ರಾಜನು ವ್ಯಾಯಾಮವನ್ನು ಮಾಡಿ ಮಧ್ಯಾಹ್ನದಲ್ಲಿ (ಮತ್ತೊಮ್ಮೆ) ಸ್ನಾನಮಾಡಿ ಊಟಕ್ಕಾಗಿ ಅಂತಃಪುರವನ್ನು ಪ್ರವೇಶಿಸಬೇಕು.

೨೧೬. संमन्त्र्य—कस्यामवस्थायां किं कर्तव्यमिति विचार्य (मे०).
व्यायम्य—आयुधाभ्यासादिना व्यायामं कृत्वा (कु०).

तत्रात्मभूतैः कालज्ञैरहार्यैः परिचारकैः ।
सुपरीक्षितमन्नाद्यमद्यान्मन्त्रैर्विषापहैः ॥ २१७ ॥
ತತ್ರಾತ್ಮಭೂತೈಃ ಕಾಲಜ್ಞೈರಹಾರ್ಯೈಃ ಪರಿಚಾರಕೈಃ ।
ಸುಪರೀಕ್ಷಿತಮನ್ನಾದ್ಯಮದ್ಯಾನ್ಮಂತ್ರೈರ್ವಿಷಾಪಹೈಃ ॥ ೨೧೭ ॥

೨೧೭. ಅಲ್ಲಿ ಆತ್ಮೀಯರಾದ, (ಊಟದ) ಸಮಯವನ್ನು ಬಲ್ಲ ಮತ್ತು ಪ್ರಲೋಭನಕ್ಕೆ ಒಳಗಾಗದ ಸೇವಕರು (ತಯಾರಿಸಿದ). ಸರಿಯಾಗಿ ಪರೀಕ್ಷಿಸಿದ ಮತ್ತು ವಿಷನಾಶಕ ಮಂತ್ರಗಳಿಂದ ಮಂತ್ರಿತವಾದ ಅನ್ನಾದಿಗಳನ್ನು (ರಾಜನು) ಉಣ್ಣಬೇಕು.

೨೧೭. सुपरीक्षितम्—परीक्षाकुशलैः वैद्यैः अग्निचकोरादिभिः कर्तव्या (मे०). सविषमन्नं दृष्ट्वा चकोराक्षिणी रक्ते भवतः (कु०).

विषघ्नैरगदैश्चास्य सर्वद्रव्याणि योजयेत् ।
विषघ्नानि च रत्नानि नियतो धारयेत्सदा ॥ २१८ ॥

ವಿಷಘ್ನೈರಗದೈಶ್ಚಾಸ್ಯ ಸರ್ವದ್ರವ್ಯಾಣಿ ಯೋಜಯೇತ್ ।
ವಿಷಘ್ನಾನಿ ಚ ರತ್ನಾನಿ ನಿಯತೋ ಧಾರಯೇತ್ಸದಾ ॥ ೨೧೮ ॥

೨೧೮. ವಿಷನಾಶಕ ಔಷಧಿಗಳನ್ನು ಅವನ ಎಲ್ಲ ವಸ್ತುಗಳಿಗೆ ಹಚ್ಚಬೇಕು. ಪ್ರಯತ್ನಶೀಲನಾದ ರಾಜನು ಯಾವಾಗಲೂ ವಿಷನಾಶಕ ರತ್ನಗಳನ್ನು ಧರಿಸಬೇಕು.

೨೧೮. सर्वद्रव्याणि—राजौपयिकानि वस्त्रादीनि
योजयेत्—नेजयेत् ಎಂದು ಪಾಠಾಂತರ (ಮೇ. ಗೋ. ಸ. ನ.) ಅರ್ಥ—ಶುದ್ಧೀಕರಿಸಬೇಕು.

परीक्षिताः स्त्रियश्चैनं व्यजनोदकधूपनैः ।
वेषाभरणसंशुद्धाः स्पृशेयुः मुसमाहिताः ॥ २१९ ॥

ಪರೀಕ್ಷಿತಾಃ ಸ್ತ್ರಿಯಶ್ಚೈನಂ ವ್ಯಜನೋದಕಧೂಪನೈಃ ।
ವೇಷಾಭರಣಸಂಶುದ್ಧಾಃ ಸ್ಪೃಶೇಯುಃ ಸುಸಮಾಹಿತಾಃ ॥ ೨೧೯ ॥

೨೧೯. ಪರೀಕ್ಷೆಗೆ ಒಳಪಟ್ಟು, ಶುದ್ಧವಾದ ವೇಷ ಹಾಗೂ ಆಭರಣಗಳನ್ನು ಧರಿಸಿದ ಮತ್ತು ಸ್ಥಿರಚಿತ್ತರಾದ ಸ್ತ್ರೀಯರು ರಾಜನಿಗೆ ಗಾಳಿಬೀಸುವದು, ನೀರು ಕೊಡುವದು, ಧೂಪ ಹಾಕುವದು ಮುಂತಾದ ಸೇವೆಯನ್ನು ಸಲ್ಲಿಸಬೇಕು.

೨೧೯. परीक्षिताः—ದಾಸಿಯರು ವೇಷಭೂಷಣಗಳಲ್ಲಿ ಶಸ್ತ್ರ, ವಿಷ ಮುಂತಾದವುಗಳನ್ನು ಅಡಗಿಸಿಟ್ಟಿರುವರೇ ಎಂಬುದನ್ನು ಚೆನ್ನಾಗಿ ಪರೀಕ್ಷಿಸಬೇಕು.
स्पृशेयु —उपचरेयुः (मे०) समीपमागच्छेयुः (स०).

एवं प्रयत्नं कुर्वीत यानशय्यासनाशने ।
स्नाने प्रसाधने चैव सर्वालंकारकेषु च ॥ २२० ॥

ಏವಂ ಪ್ರಯತ್ನಂ ಕುರ್ವೀತ ಯಾನಶಯ್ಯಾಸನಾಶನೇ ।
ಸ್ನಾನೇ ಪ್ರಸಾಧನೇ ಚೈವ ಸರ್ವಾಲಂಕಾರಕೇಷು ಚ ॥ ೨೨೦ ॥

೨೨೦. ಹೀಗೆ ವಾಹನ, ಹಾಸಿಗೆ, ಆಸನ, ಭೋಜನ, ಸ್ನಾನ, ಅನುಲೇಪನ ಮತ್ತು ಎಲ್ಲ ಅಲಂಕಾರ—ಇವೆಲ್ಲವುಗಳನ್ನು ಪ್ರಯತ್ನದಿಂದ ಪರೀಕ್ಷಿಸಬೇಕು.

೨೨೦. ರಾಜನಿಗೆ ಶತ್ರುಗಳಿಂದ ವಿವಿಧ ರೀತಿಯಲ್ಲಿ ವಿಷಪ್ರಯೋಗವಾಗುವ ಸಂಭವವು ಬಹಳ ಇತ್ತು. ಆದ್ದರಿಂದ ರಾಜನು ಪ್ರತಿಯೊಂದು ವಸ್ತುವಿನ ಬಗೆಗೆ ಅತ್ಯಂತ ಎಚ್ಚರಿಕೆಯಿಂದಿರಬೇಕು.

भुक्तवान्विहरेच्चैव स्त्रीभिरन्तः पुरे सह ।
विहृत्य तु यथाकालं पुनः कार्याणि चिन्तयेत् ॥ २२१ ॥
ಭುಕ್ತವಾನ್ವಿಹರೇಚ್ಚೈವ ಸ್ತ್ರೀಭಿರಂತಃಪುರೇ ಸಹ ।
ವಿಹೃತ್ಯ ತು ಯಥಾಕಾಲಂ ಪುನಃ ಕಾರ್ಯಾಣಿ ಚಿಂತಯೇತ್ ॥ ೨೨೧ ॥

೨೨೧. ರಾಜನು ಊಟವಾದ ಮೇಲೆ ಆ ಅಂತಃಪುರದಲ್ಲಿ ಸ್ತ್ರೀಯರ ಜೊತೆಗೆ ವಿಹರಿಸಬೇಕು. ವಿಹಾರ ಮುಗಿದ ಮೇಲೆ ಅವನು ಮತ್ತೆ ಕಾರ್ಯಗಳ ಬಗೆಗೆ ಚಿಂತನೆಯನ್ನು ನಡೆಸಬೇಕು.

೨೨೧. यथाकालम्—यावद्विहरणकालम् (मे०).
पुनः—अष्टमे भागे (कु०).

अलङ्कृतश्च सम्पश्येदायुधीयंपुनर्जनम् ।
वाहनानि च सर्वाणि शस्त्राण्याभरणानि च ॥ २२२ ॥
ಅಲಂಕೃತಶ್ಚ ಸಂಪಶ್ಯೇದಾಯುಧೀಯಂ ಪುನರ್ಜನಮ್ ।
ವಾಹನಾನಿ ಚ ಸರ್ವಾಣಿ ಶಸ್ತ್ರಾಣ್ಯಾಭರಣಾನಿ ಚ ॥ ೨೨೨ ॥

೨೨೨. ಅಲಂಕಾರಗಳನ್ನು ಧರಿಸಿ ರಾಜನು ಮತ್ತೆ ಶಸ್ತ್ರಧಾರಿ ಸೈನಿಕರನ್ನೂ, ಎಲ್ಲ ವಾಹನಗಳನ್ನೂ, ಶಸ್ತ್ರಗಳನ್ನೂ. ಆಭರಣಗಳನ್ನೂ ವೀಕ್ಷಿಸಬೇಕು.

೨೨೨. आयुधीयं जनम्—ಶಸ್ತ್ರಗಳಿಂದ ಉಪಜೀವನ ಮಾಡುವ ಜನರು.
पुनः—पूर्वाह्ले दृष्टमपि (मे०).

सध्यां चोपास्य शृणुयादन्तर्वेश्मनि शस्त्रभृत् ।
रहस्याख्यायिनां चैव प्रणिधीनां च चेष्टितम् ॥ २२३ ॥
ಸಂಧ್ಯಾಂ ಚೋಪಾಸ್ಯ ಶೃಣುಯಾದಂತರ್ವೇಶ್ಮನಿ ಶಸ್ತ್ರಭೃತ್ ।
ರಹಸ್ಯಾಖ್ಯಾಯಿನಾಂ ಚೈವ ಪ್ರಣಿಧೀನಾಂ ಚ ಚೇಷ್ಟಿತಮ್ ॥ ೨೨೩ ॥

गत्वा कक्षान्तरं त्वन्यत्समनुज्ञाप्य तं जनम् ।
प्रविशेद्भोजनार्थं च स्त्रीवृतोऽन्तःपुरं पुनः ॥ २२४ ॥
ಗತ್ವಾ ಕಕ್ಷಾಂತರಂ ತ್ವನ್ಯತ್ಸಮನುಜ್ಞಾಪ್ಯ ತಂ ಜನಮ್ ।
ಪ್ರವಿಶೇದ್ಭೋಜನಾರ್ಥಂ ಚ ಸ್ತ್ರೀವೃತೋಽಂತಃಪುರಂ ಪುನಃ ॥ ೨೨೪ ॥

೨೨೩–೪. ಸಂಧ್ಯೋಪಾಸನೆಯನ್ನು ಮುಗಿಸಿ ರಾಜನು ಶಸ್ತ್ರಸಹಿತನಾಗಿ ಮನೆಯೊಳಗೆ (ಏಕಾಂತವಾದ) ಬೇರೆ ಕೋಣೆಯಲ್ಲಿ ಹೋಗಿ ರಹಸ್ಯಗಳನ್ನು ಹೇಳುವ ಜನರ ಹಾಗೂ ಗುಪ್ತಚಾರರ ಸಮಾಚಾರವನ್ನು ಕೇಳಬೇಕು. ಆ ಮೇಲೆ ಆ ಜನರಿಗೆ (ಹೋಗಲು) ಅನುಮತಿಯನ್ನು ನೀಡಿ ದಾಸಿಯರ ಜೊತೆಗೆ ಊಟಕ್ಕಾಗಿ ಮತ್ತೆ ಅಂತಃಪುರವನ್ನು ಪ್ರವೇಶಿಸಬೇಕು.

೨೨೩. अन्तर्वेश्मनि—रहसि प्रासादादौ (मे०).
चेष्टितं—चेष्टा, व्यवहारः, किं दृष्टं श्रुतं कृतं चेति (मे०).

೨೨೪. कक्षान्तरं—विविक्तप्रकोष्ठावकाशं (कु० राघ.).

तत्र भुक्त्वा पुनः किंचित्तूर्यघोषैः प्रहर्षितः ।
संविशेत्तु यथाकालमुत्तिष्ठेच्च गतक्लमः ॥ २२५ ॥

ತತ್ರ ಭುಕ್ತ್ವಾ ಪುನಃ ಕಿಂಚಿತ್ತೂರ್ಯಘೋಷೈಃ ಪ್ರಹರ್ಷಿತಃ ।
ಸಂವಿಶೇತ್ತು ಯಥಾಕಾಲಮುತ್ತಿಷ್ಠೇಚ್ಚ ಗತಕ್ಲಮಃ ॥ ೨೨೫ ॥

೨೨೫. ಅಲ್ಲಿ ಮತ್ತೆ ಸ್ವಲ್ಪ ಊಟಮಾಡಿ ಮಂಗಲವಾದ್ಯಗಳಿಂದ ಆನಂದಪಟ್ಟು ರಾಜನು ಸಕಾಲದಲ್ಲಿ ಮಲಗಬೇಕು. ಮತ್ತು (ರಾತ್ರಿಯ ಕೊನೆಯ ಜಾವದಲ್ಲಿ) ಆಯಾಸರಹಿತನಾಗಿ ಏಳಬೇಕು.

೨೨೫. तूर्यघोषैः—तूर्याणि वेणुवीणापणवमृदङ्ग शङ्खादीनि (मे०).
यथाकालम्—कालानतिक्रमेण गतार्धप्रहरायां रात्रौ (कु०).

एतद्विधानमातिष्ठेदरोगः पृथिवीपतिः ।
अस्वस्थः सर्वमेतत्तु भृत्येषु विनियोजयेत् ॥ २२६ ॥

ಏತದ್ವಿಧಾನಮಾತಿಷ್ಠೇದರೋಗಃ ಪೃಥಿವೀಪತಿಃ ।
ಅಸ್ವಸ್ಥಃ ಸರ್ವಮೇತತ್ತು ಭೃತ್ಯೇಷು ವಿನಿಯೋಜಯೇತ್ ॥ ೨೨೬ ॥

೨೨೬. ರೋಗರಹಿತನಾದ ರಾಜನು ಈ (ಎಲ್ಲ) ಕಾರ್ಯವನ್ನು (ತಾನೇ) ಮಾಡಬೇಕು: ಅಸ್ವಸ್ಥನಾದರೆ ಅವನು ಈ ಎಲ್ಲವನ್ನೂ (ಅಮಾತ್ಯ ಮುಂತಾದ) ಸೇವಕರಿಗೆ ಒಪ್ಪಿಸಬೇಕು.

೨೨೬. एतत् विधानम्—यथोक्तप्रकारप्रजारक्षणादिकम् (कु०).
अनुष्ठेयं दृष्टादृष्टार्थं षाड्गुण्याग्निहोत्रादिकम् (राघ.).

———————

ಪರಿಶಿಷ್ಟ

ಹೋಲಿಸಿ ನೋಡಬಹುದಾದ ಕೌಟಿಲ್ಯ ಸಿದ್ಧಾಂತಗಳು

ವಾರ್ತೆ: ವಾಣಿಜ್ಯಾದಿ ಅರ್ಥವ್ಯವಹಾರ ಶಾಸ್ತ್ರ.

ದಂಡನೀತಿ: ಅಪರಾಧಿಗಳನ್ನು ದಂಡಿಸುವ ಶಾಸ್ತ್ರ.

ಆನ್ವೀಕ್ಷಿಕಿ: ಸಾಂಖ್ಯ. ಯೋಗ ಮತ್ತು ಲೋಕಾಯತ ದರ್ಶನಗಳು.

ವಿದ್ಯೆ: ತ್ರಯಿ, ವಾರ್ತೆ, ದಂಡನೀತಿ ಮತ್ತು ಆನ್ವೀಕ್ಷಿಕಿ.

ಸಾಮಾನ್ಯಧರ್ಮ: ಅಹಿಂಸೆ. ಸತ್ಯ. ಶಾಂತಿ. ಅನಸೂಯೆ. ಅನಿಷ್ಠುರತೆ ಮತ್ತು ಕ್ಷಮೆ.

ವರ್ಣಧರ್ಮ ತ್ಯಾಗದಿಂದ ಕರ್ಮಸಂಕರ. ಕರ್ಮಸಂಕರದಿಂದ ಲೋಕನಾಶ.

ವಾರ್ತೆಯನ್ನಾಧರಿಸಿದ ಕೋಶ–ದಂಡಗಳಿಂದ ರಾಜನು ಸ್ವಪಕ್ಷ–ಪರಪಕ್ಷಗಳನ್ನು ವಶದಲ್ಲಿಟ್ಟುಕೊಳ್ಳಬಲ್ಲ.

ಆನ್ವೀಕ್ಷಿಕಿ. ವೇದತ್ರಯಿ ಮತ್ತು ವಾರ್ತೆಗಳ ಯೋಗಕ್ಷೇಮವು ದಂಡಾಧೀನ.

ಶಾಸ್ತ್ರ ಓದಿ ತಿಳಿದು ವಿಧಿಸುವ ಶಿಕ್ಷೆ ಮಾತ್ರ ಪ್ರಜೆಗಳಿಗೆ ಧರ್ಮಾರ್ಥಕಾಮಗಳೆಂಬ ಪುರುಷಾರ್ಥಗಳನ್ನು ದೊರಕಿಸಿಕೊಡಬಲ್ಲದು.

ವಿದ್ಯಾತ್ರಯವು ದಂಡಮೂಲ: ವಿದ್ಯಾಲಬ್ಧ ವಿನಯಾಧೀನವಾದ ದಂಡವು ಪ್ರಜೆಗಳ ಯೋಗಕ್ಷೇಮಕ್ಕೆ ಕಾರಣ.

ಶುಶ್ರೂಷೆ. ಶ್ರವಣ. ಗ್ರಹಣ. ಧಾರಣ. ವಿಜ್ಞಾನ. ಊಹಾಪೋಹ ಮತ್ತು ತತ್ತ್ವಾಭಿನಿವೇಶಗಳೆಂಬ ಅಷ್ಟಗುಣಗಳಿಂದ ಕೂಡಿದ ಬುದ್ಧಿಯುಳ್ಳವನನ್ನು ಮಾತ್ರ ವಿದ್ಯೆಯು ವಿನಯಸಂಪನ್ನನನ್ನಾಗಿ ಮಾಡಬಲ್ಲದು.

ಆಯಾ ವಿದ್ಯೆಗೆ ಆಯಾ ಗುರುವೇ ಪ್ರಮಾಣ: ಅಲ್ಲಿಂದ ಗುರ್ವಾಜ್ಞೆಯನ್ನು ಅತಿಕ್ರಮಿಸದಿರುವುದೇ ವಿನಯ ಅಥವಾ ಶಾಸ್ತ್ರಸಂಸ್ಕಾರ.

ಇತಿಹಾಸ: ಪುರಾಣ. ಇತಿವೃತ್ತ. ಆಖ್ಯಾಯಿಕೆ. ಉದಾಹರಣ. ಧರ್ಮಶಾಸ್ತ್ರ ಮತ್ತು ಅರ್ಥಶಾಸ್ತ್ರ.

ಶ್ರವಣ. ಮನನ. ನಿದಿಧ್ಯಾಸಗಳಿಂದ ಪ್ರಜ್ಞೋದಯ: ಪ್ರಜ್ಞೆಯಿಂದ ಯೋಗ ಮತ್ತು ಯೋಗದಿಂದ ಆತ್ಮವಂತಿಕೆ ಲಭ್ಯ.

ಇಂದ್ರಿಯಜಯವು ಸರ್ವಶಾಸ್ತ್ರೋಪದೇಶಗಳಲ್ಲಿ ಅಗ್ರಗಣ್ಯ: ಶಾಸ್ತ್ರಾಧೀನವಾಗಿ ನಡೆದುಕೊಳ್ಳುವಂತೆ ಇಂದ್ರಿಯಗಳನ್ನು ತರಬೇತುಗೊಳಿಸುವುದೇ ಇಂದ್ರಿಯಜಯ. ದಾಂಡಕ್ಯ. ಕರಾಲ. ಜನಮೇಜಯ. ತಾಲಜಂಘ, ಪುರೂರವ. ಅಜಬಿಂದು. ರಾವಣ. ದುರ್ಯೋಧನ. ದಂಭೋದ್ಭವ. ಕಾರ್ತವೀರ್ಯ ಮತ್ತು ಯಾದವಕುಲ ಅಶಾಸ್ತ್ರೀಯ

ವರ್ತನೆಗಳಿಗಿಳಿದು ಇಂದ್ರಿಯಗಳಿಂದ ಹಾಳಾದರು. ಪರಶುರಾಮ. ಅಂಬರೀಷ. ನಾಭಾಗರು ಜಿತೇಂದ್ರಿಯರಾದುದರಿಂದ ಉದ್ಧಾರ ಹೊಂದಿದರು.

ರಾಜರ್ಷಿವೃತ್ತ: ಅರಿಷಡ್ವರ್ಗತ್ಯಾಗದಿಂದ ಇಂದ್ರಿಯಜಯ; ವಿದ್ಯಾವೃದ್ಧ ಶುಶ್ರೂಷೆಯಿಂದ ಪ್ರಜ್ಞೋದಯ: ಗೂಢಚಾರನಿಯೋಗದಿಂದ ಸರ್ವವೃತ್ತಜ್ಞಾನ: ಉತ್ಥಾನದಿಂದ ಯೋಗಕ್ಷೇಮಸಾಧನೆ: ಕಾರ್ಯಾನುಶಾಸನದಿಂದ ಸ್ವಧರ್ಮಸ್ಥಾಪನೆ: ವಿದ್ಯೋಪದೇಶದಿಂದ ವಿನಯ: ಅರ್ಥಸ್ವೀಕಾರ ಮತ್ತು ಸತ್ಪಾತ್ರದಾನಗಳಿಂದ ಜನಪ್ರಿಯತೆ; ತತ್ಕಾಲ ಮತ್ತು ಕಾಲಾಂತರಗಳಲ್ಲಿ ಪಥ್ಯವಾದುದನ್ನು ಮಾಡುವುದರಿಂದ ವ್ಯವಹಾರಸಿದ್ಧಿ.

ಧರ್ಮಕಾಮಗಳಿಗೆ ಅರ್ಥವು ಸಾಧನ.

ಗುರು–ಮಂತ್ರಿಗಳು ರಾಜರಕ್ಷಕರು; ಅವರ ಅಭಿಪ್ರಾಯವನ್ನು ಕೇಳುವುದು ರಾಜಧರ್ಮ.

ಮಹಾಮಾತ್ಯನ ಅರ್ಹತೆ: ಸ್ವರಾಷ್ಟ್ರ (ರಾಜನ ರಾಷ್ಟ್ರ) ಜಾತತೆ: ಶಿಷ್ಟಬಾಂಧವಯುಕ್ತತೆ: ಯುದ್ಧವಿದ್ಯಾವಿಚಕ್ಷಣತೆ: ಗಾಂಧರ್ವಾದಿ ವಿದ್ಯಾಜ್ಞಾನ: ರಾಜಧರ್ಮಜ್ಞತೆ: ಸಹಜ ಬುದ್ಧಿಸಂಪನ್ನತೆ; ಸ್ಮೃತಿ ದಾರ್ಢ್ಯ; ದಕ್ಷತೆ; ವಾಗ್ಮಿತ್ವ: ಪ್ರೌಢತೆ: ಪ್ರತ್ಯುತ್ಪನ್ನಮತಿತ್ವ: ಉತ್ಸಾಹ; ಪ್ರಭಾವ; ಕಷ್ಟಸಹಿಷ್ಣುತೆ: ಚತುರ್ವಿಧ ಶೀಲಶುದ್ಧಿ: ಸ್ನೇಹಪರತೆ: ಅಚಲ ರಾಜಭಕ್ತಿ; ಸುಶೀಲ; ದೇಹಬಲ: ಆರೋಗ್ಯ: ಧೈರ್ಯ: ನಿಗರ್ವಿತ್ವ: ಚಾಪಲ್ಯರಹಿತತೆ: ಸೌಮ್ಯಾಕೃತಿ: ಹೆಣ್ಣು–ಹೊನ್ನುಗಳಿಗಾಗಿ ಬಡಿದಾಡುವುದನ್ನು ನಿಲ್ಲಿಸುವ ಪ್ರವೃತ್ತಿ. ಇಷ್ಟು ಗುಣಗಳುಳ್ಳವನೆಂಬುದು ಪರೀಕ್ಷೆಯಿಂದ ಗೊತ್ತಾದ ಮೇಲೆಯೇ ಒಬ್ಬನನ್ನು ಮಹಾಮಾತ್ಯ ಪಟ್ಟಕ್ಕೇರಿಸಬೇಕು. ಉಪಧೆ ಅಥವಾ ಛಲಪ್ರಯೋಗವು ಅಂಥ ಪರೀಕ್ಷೆ. ಕರ್ಮಸಚಿವರ ಆಯ್ಕೆಗೂ ಈ ಪರೀಕ್ಷೆಗಳು ಅನ್ವಯಿಸುತ್ತವೆ.

ಪರೀಕ್ಷೆಗಳು: ಧರ್ಮೋಪಧೆ. ಅರ್ಥೋಪಧೆ. ಕಾಮೋಪಧೆ ಮತ್ತು ಭಯೋಪಧೆಗಳು: ಇವು ಶುದ್ಧಿಚತುಷ್ಟಯದ ಸಾಧನಗಳು. ದೂಷ್ಯವಾದ ಬಾಹ್ಯಕ್ಷೇತ್ರಗಳಲ್ಲೇ ಚತುರ್ವಿಧ ಪರೀಕ್ಷೆಗಳನ್ನು ನಡೆಸಿ. ಬೇಹಿನವರ ಮೂಲಕ ಮಂತ್ರಿಗಳ ಶೀಲಶುದ್ಧಿಯನ್ನು ರಾಜ ತಿಳಿದುಕೊಳ್ಳಬೇಕು.

ಗೂಢಚಾರವರ್ಗ: ಕಾಪಟಿಕ, ಉದಾಸ್ಥಿತ, ಗೃಹಪತಿಕ. ವೈದೇಹಿಕ, ತಾಪಸ, ಸತ್ರಿ, ತೀಕ್ಷ್ಣ, ರಸದ ಮತ್ತು ಭಿಕ್ಷುಕಿಯರು ನವವರ್ಗೀಯ ಗೂಢಚಾರರು. ಮೊದಲಿನ ಐದು ವರ್ಗಗಳೊಡನೆ ರಾಜ್ಯವ್ಯವಹಾರ ನಡೆಯುವುದು ಮಂತ್ರಿಗಳ ಮೂಲಕ: ಕೊನೆಯ ನಾಲ್ಕು ವರ್ಗಗಳನ್ನು ಅಮಾತ್ಯಾದಿ ಮಹಾಧಿಕಾರಿಗಳ ಶೀಲಶೋಧಕ್ಕಾಗಿ ರಾಜನು ನೇರವಾಗಿ ತನ್ನ ಅಂಕೆಯಲ್ಲಿಟ್ಟುಕೊಳ್ಳಬೇಕು. ಮೊದಲಿನ ಐದು ವರ್ಗಗಳು ಸ್ಥಾಯಿಗಳು ಮತ್ತು ಎರಡನೆಯ ನಾಲ್ಕು ವರ್ಗಗಳು ಸಂಚಾರಿಗಳು. ಅಶುಭ ಸಂಭವಿಸಬಹುದಾದ ಜನಪಟ್ಟಣೆಯ ಸ್ಥಳವು ಕಾಪಟಿಕ ವಾಸಸ್ಥಾನ: ವಸ್ತುಗಳ ಉತ್ಪಾದನೆ

ಮುಖ್ಯಗಿರುವ ದೊಡ್ಡ ವ್ಯಾಪಾರ ಸ್ಥಳವು ಉದಾಸ್ಥಿತನ ನೆಲೆ. ಅಶುಭವನ್ನು ವರದಿ ಮಾಡುವುದು ಕಾಪಟಿಕನ ಕೆಲಸವಾದರೆ. ಪರರಾಜರ ರಹಸ್ಯಗಳನ್ನು ರಾಜನಿಗೆ ನಿವೇದಿಸುವುದು ಉದಾಸ್ಥಿತನ ಕರ್ತವ್ಯ. ದೊಡ್ಡ ಪ್ರಮಾಣದ ಕೃಷಿಕಾರ್ಯ ನಡೆಯುವ ಸ್ಥಳವು ಗೃಹಪತಿಕನು ನೆಲೆಸಿರಬೇಕಾದ ನಿಯುತಸ್ಥಾನ: ಕೃಷಿ ವ್ಯವಹಾರದಲ್ಲಿ ರಾಜಪುರುಷರಿಂದ ಅಥವಾ ಪ್ರಜೆಗಳಿಂದ ನಡೆಯುವ ವಂಚನೆಗಳನ್ನು ಅವನು ವರದಿ ಮಾಡತಕ್ಕವ. ಅಧಿಕ ವಾಣಿಜ್ಯ ನಡೆಯುವ ಸ್ಥಳದಲ್ಲಿರುವ ಬೇಹುಗಾರ ವೈದೇಹಿಕ: ಅಲ್ಲಿ ನಡೆಯುವ ಅಧರ್ಮ ಕೃತ್ಯಗಳನ್ನು ವರದಿ ಮಾಡುವುದು ಆ ಬಡ ವ್ಯಾಪಾರಿಯ ಪಾಲಿನ ಕೆಲಸ. ತಾಪಸನು ನಗರದ ಸಮೀಪವಾಸಿ: ವೈದೇಹಿಕರು ಅವನ ಶಿಷ್ಯರು. ಪಟ್ಟಣಿಗರನ್ನಾಕರ್ಷಿಸಿ ಅವರ ವರ್ತನೆಗಳನ್ನು ಪರೀಕ್ಷಿಸಿ ಕಾಲಕಾಲಕ್ಕೆ ತಿಳಿಸುವುದು ಅವನ ಕರ್ತವ್ಯ. ಸಾಮುದ್ರಿಕಾದಿ ಶಾಸ್ತ್ರಗಳನ್ನು ಕಲಿಯುತ್ತಿರುವ ರಾಜರಕ್ಷಿತ ರಾಜಬಂಧುಗಳು ಸತ್ರಿಗಳು. ಕ್ರೂರ ಪ್ರಾಣಿಗಳೊಡನೆ ಹೋರಿ ತೋರಿಸಿ ಹಣ ಸಂಪಾದಿಸುವ ವೃತ್ತಿಯವರು ತೀಕ್ಷ್ಣರು. ರಸದರು ಆತತಾಯಿಗಳು ಮತ್ತು ಭಿಕ್ಷುಕಿಯರೆಂದರೆ ಗೌರವಾರ್ಹ ಪರಿವ್ರಾಜಿಕೆಯರು.

ಅಷ್ಟಾದಶ ಕರ್ಮಸಚಿವರು:

ಮಂತ್ರಿ (ರಾಜಕಾರ್ಯ ಪ್ರವೀಣನಾದ ಮಹಾಸಚಿವ)
ಪುರೋಹಿತ (ರಾಜಗುರು ಅಥವಾ ರಾಜಗೃಹ ಧರ್ಮಾಧಿಕಾರಿ)
ಸೇನಾಪತಿ (ಚತುರಂಗ ಬಲದ ಉಚ್ಚಾಧಿಕಾರಿ)
ಯುವರಾಜ (ರಾಜಪ್ರತಿನಿಧಿ)
ದ್ವಾರಪಾಲಕ (ಪಹರೆಗಾರ)
ಕಂಚುಕಿ (ರಾಣೀವಾಸದ ಮೇಲ್ವಿಚಾರಕ)
ಪ್ರಶಾಸ್ತ (ಕೋಟೆಯ ಮೇಲಧಿಕಾರಿ)
ಸಮಾಹರ್ತ (ಕಂದಾಯ ಸಚಿವ)
ಸನ್ನಿಧಾತ (ದ್ರವ್ಯ ಸಚಿವ)
ಪ್ರದೇಷ್ಟ (ಗೃಹ ಸಚಿವ)
ನಾಯಕ (ಉಪಸೇನಾಪತಿ)
ಪೌರ ವ್ಯಾವಹಾರಿಕ (ನ್ಯಾಯಸಚಿವ, ವಿಧಿಸಚಿವ) ಅಥವಾ ಪುರಪ್ರಾಡ್ವಿವಾಕ
ಕಾರ್ಮಾಂತಿಕ (ಖನಿಜ ಸಚಿವ)
ಮಂತ್ರಿಪರಿಷದಧ್ಯಕ್ಷ (ಸಭಾಪತಿ: ಸಭೆ ಕರೆವ ಉಚ್ಚಾಧಿಕಾರಿ)
ದಂಡಪಾಲ (ಉಪಸೇನಾಪತಿ)
ದುರ್ಗಪಾಲ (ಕೋಟೆಯ ಮಹಾಕಾವಲುಗಾರ)
ಅಂತಪಾಲ (ಸೀಮಾರಕ್ಷಕ)
ಆಟವಿಕ (ಅರಣ್ಯ ಸಚಿವ)

ರಾಜನ ದೈನಂದಿನ ವೇಳಾಪತ್ರಿಕೆ:

ಹಗಲಿನ ಮೊದಲ ಭಾಗದಲ್ಲಿ ವಿದ್ಯಾರ್ಥಿಯಾದ ರಾಜನು ಆನೆ. ಕುದುರೆ. ರಥ. ಆಯುಧಗಳ ಕಸರತ್ತುಗಳನ್ನು ಮಾಡಬೇಕು: ಉತ್ತರ ಭಾಗದಲ್ಲಿ ಇತಿಹಾಸವನ್ನು ಕೇಳಬೇಕು: ಹಗಲಿನ ಮಧ್ಯಭಾಗದಲ್ಲಿ ಮತ್ತು ರಾತ್ರಿಯಲ್ಲಿ ಹೊಸ ವಿಷಯಗಳನ್ನು ಕೇಳಬೇಕು: ಕೇಳಿ ಮನನ ಮಾಡಬೇಕು. ಮನನಮಾಡಿದ್ದನ್ನು ನಿದಿಧ್ಯಾಸಿಸಲು ಮತ್ತೆ ಮತ್ತೆ ಕೇಳಬೇಕು.

ವಿದ್ಯಾರ್ಥಿದಶೆಯನ್ನು ಮುಗಿಸಿ ರಾಜ್ಯಾಧಿಕಾರವನ್ನು ವಹಿಸಿಕೊಂಡ ರಾಜನು ದಿನದ ೨೪ ತಾಸುಗಳನ್ನು ೧೬ ಭಾಗ ಮಾಡಿ—

ಹಗಲಿನ ಮೊದಲ ಭಾಗದಲ್ಲಿ ರಕ್ಷಣಾಶಾಖೆಯ ಕಾರ್ಯ ವೃತ್ತಾಂತವನ್ನೂ ಹಿಂದಿನ ದಿನದ ಆಯ–ವ್ಯಯಗಳ ಲೆಕ್ಕವನ್ನೂ ಕೇಳಬೇಕು.: ಎರಡನೆಯ ಭಾಗದಲ್ಲಿ ಪೌರರೂ ಜಾನಪದ ಪ್ರಜೆಗಳೂ ತಂದ ಪ್ರಕರಣಗಳನ್ನು ಪರಿಶೀಲಿಸಬೇಕು: ಮೂರನೆಯ ಭಾಗದಲ್ಲಿ ಸ್ನಾನ–ಭೋಜನಗಳನ್ನು ಮುಗಿಸಿ ತನ್ನ ಮನೆತನದ ಸ್ವಾಧ್ಯಾಯದ ಪಾರಾಯಣವನ್ನು ಮಾಡಬೇಕು: ನಾಲ್ಕನೆಯ ಭಾಗದಲ್ಲಿ ಬಂಗಾರದ ರೂಪದಲ್ಲಿ ಕಂದಾಯವನ್ನು ಸ್ವೀಕರಿಸಬೇಕು ಮತ್ತು ಕರ್ಮಸಚಿವರಿಗೆ ಅವರ ಕರ್ತವ್ಯಗಳ ಬಗೆಗೆ ಆಜ್ಞೆ ಕೊಡಬೇಕು: ಆಯಾ ಕರ್ತವ್ಯಗಳಲ್ಲಿ ಅವರನ್ನು ನಿಯೋಜಿಸಬೇಕು; ಐದನೆಯ ಭಾಗದಲ್ಲಿ ಪತ್ರಮುಖೇನ ಮಂತ್ರಿಗಳೊಡನೆ ಮಂತ್ರಾಲೋಚನೆ ನಡೆಸಬೇಕು ಮತ್ತು ಗೂಢಚಾರರ ವರದಿಗಳನ್ನು ಕೇಳಬೇಕು; ಆರನೆಯ ಭಾಗದಲ್ಲಿ ಬೇಸರ ಪರಿಹಾರಕ್ಕಾಗಿ ವಿಹರಿಸಬಹುದು ಅಥವಾ ಗುಪ್ತಾಲೋಚನೆಗಳನ್ನು ಮಾಡಬಹುದು: ಏಳನೆಯ ಭಾಗದಲ್ಲಿ ಚತುರಂಗ ಬಲವನ್ನು ಪ್ರತ್ಯವೇಕ್ಷಣ ಮಾಡಬೇಕು: ಎಂಟನೆಯ ಭಾಗದಲ್ಲಿ ಸೇನಾಪತಿಯೊಡನೆ ವಿಜಯ ಯಾತ್ರೆಗಳ ಬಗೆಗೆ ಸಮಾಲೋಚಿಸಬೇಕು: ಸಂಜೆ ಸಂಧ್ಯೋಪಾಸನೆಗೆ ತೆರಳಬೇಕು.

ರಾತ್ರಿಯ ಮೊದಲ ಭಾಗದಲ್ಲಿ ರಾಜನು ಗೂಢಚಾರರನ್ನು ಸಂದರ್ಶಿಸಬೇಕು; ಎರಡನೆಯ ಭಾಗದಲ್ಲಿ ಸ್ನಾನ–ಭೋಜನಗಳನ್ನು ತೀರಿಸಿ ವೇದಾಭ್ಯಾಸ ಮಾಡಬೇಕು: ಮೂರನೆಯ ಭಾಗದಲ್ಲಿ ಕಹಳೆ ಕೂಗಿದೊಡನೆ ಮಲಗುವ ಮನೆಗೆ ಹೋಗಬೇಕು: ನಾಲ್ಕು–ಐದನೆಯ ಭಾಗಗಳಲ್ಲಿ ರಾಜನು ನಿದ್ರೆ ಮಾಡಬೇಕು.: ಆರನೆಯ ಭಾಗದಲ್ಲಿ ಕಹಳೆ ಕೂಗಿದ ಕೂಡಲೆ ಎದ್ದು ರಾಜಧರ್ಮಶಾಸ್ತ್ರವನ್ನವಲೋಕಿಸಿ (ಮರುದಿನದ) ರಾಜಕೀಯ ಕಾರ್ಯಕ್ರಮಗಳನ್ನು ರೂಪಿಸಬೇಕು: ಏಳನೆಯ ಭಾಗದಲ್ಲಿ ಅವನು ಗುಪ್ತಾಲೋಚನೆಗಳನ್ನು ನಡೆಸಿ ಗುಪ್ತಚಾರರನ್ನು ಆಯಾ ಸ್ಥಳಗಳಿಗೆ ಕಳಿಸಬೇಕು; ಎಂಟನೆಯ ಭಾಗದಲ್ಲಿ ಋತ್ವಿಗಾಚಾರ್ಯ ಪುರೋಹಿತರೊಡನೆ ಸ್ವಸ್ತ್ಯಯನಗಳನ್ನು ಕೇಳಿ ರಾಜವೈದ್ಯ ಪಾಕಶಾಲಾಧ್ಯಕ್ಷ ಮತ್ತು ರಾಜಜ್ಯೋತಿಷಿಗಳನ್ನು ನೋಡಬೇಕು: ಅನಂತರ ಕರುವಿನೊಡನಿರುವ ಹಸುವಿಗೆ ಪ್ರದಕ್ಷಿಣೆ ಹಾಕಿ ರಾಜಸಭಾಭವನಕ್ಕೆ ತೆರಳಬೇಕು.

ತಪ್ಪು — ಒಪ್ಪು

ಪುಟ	ಸಾಲು	ತಪ್ಪು	ಒಪ್ಪು
೩೬	೧೦	ಮಿಥೋಽನ್ಯೋನ್ಯಂ	ಮಿಥೋಽನ್ಯೋಽನ್ಯಂ
೩೯	೨೨	ಘ್ನನ್ನ ೃಣೇ	ಘ್ನನೃಣೇ
೪೨	೮	अरिप्रयुक्ता	अरिप्रयुक्तां
೪೮	೨	ರಾಜ್ಞೋನ್ಯಃ	ರಾಜ್ಞೋಽನ್ಯಃ
೪೯	೬	राजा निाशः	राजार्थनाशः
೫೨	೨೧	…द्विज	र्द्विज
೫೫	೧೬	ನೋಡುವವರಲ್ಲಿ	ನೋಡುವುದರಲ್ಲಿ
೫೬	೪	राष्ट्रा…	राष्ट्राद्
೫೮	೨೫	आहतो	आदृतो
೬೬	೮	ಸಂಪತ್ತು)	ಸಂಪತ್ತುಗಳಲ್ಲಿ)
೭೦	೧೭	सामर्थ्यं…	स।मर्थ्य…
೭೨	೧೮	…सम्भवत्	…सम्भवात्
೭೩	೭	…संविधान	संविधान
೭೪	೬	ಅಥವಾ	ಅಥವಾ
೭೯	೨	विजेतु	विजेतुं
೭೯	೧೦	ಇದು	—
೮೦	೨೫	ರಾಜನಿಗೆ	ರಾಜನನ್ನು
೮೨	೧೩	ಜೂತೆಗೆ	ಜೊತೆಗೆ
೮೫	೧೩	संयुक्ताश्च	संयक्तांश्च

Published by the Text-Book Directorate, Karnatak University, Dharwar under tho Centrally Sponsored Scheme for the Production of Books and Literature in Regional Languages at tha University Level, Government of India, Ministry of Education and Social Welfare (Department of Culture), New Delhi (1974).

